## ಅಧ್ಯಾಯ 6

# ಮೊದಲ ಆರು ಮುದ್ರೆಗಳು ಒಡೆಯಲ್ಪಡುವದು

ಪ್ರಕಟನೆ ಪುಸ್ತಕದ ಚಿತ್ರಣಗಳು ಮತ್ತು ಪರಿಭಾಷೆಯು ಪಾಶ್ಚಾತ್ಯ ಜಗತ್ತಿನ ಶಬ್ದಕೋಶದ ಭಾಗವಾಗಿರುತ್ತವೆ. ಉದಾಹರಣೆಗೆ, "apocalypse" ಎಂಬ ಪದವನ್ನು ಯೋಚಿಸಿರಿ. ಈ ಪದದ ಜನಪ್ರಿಯವಾದ ಅರ್ಥನಿರೂಪಣೆಯೆಂದರೆ "ಮಹಾ ಅಥವಾ ಸಂಪೂರ್ಣ ವಿನಾಶ," ಮತ್ತು ಅತ್ಯಾಡಂಬರದ ಸುದ್ದಿ ಪತ್ರಿಕೆಗಳು ತಮ್ಮ ತಲೆ ಬರಹಗಳಲ್ಲಿ ಆ ಅರ್ಥದೊಂದಿಗೆ ಪದವನ್ನು ಬಳಕೆ ಮಾಡುತ್ತವೆ. ನಾಶನದ ಬಗ್ಗೆ ಮಾತಾಡುವ ಪ್ರವಾದಿಗಳು ಲೋಕಾಂತ್ಯದ ಕುರಿತು ಮುಂತಿಳಿಸುವವರಾಗಿ "apocalypse" ಪದವನ್ನು ಬಳಕೆ ಮಾಡುತ್ತಾರೆ. ಹೇಗೂ, ಶಬ್ದಕೋಶಗಳಲ್ಲಿ ಈ ಜನಪ್ರಿಯವಾದ ಬಳಕೆಯು ಕಂಡು ಬರುತ್ತದಾದರೂ, ಅದು ಬೈಬಲಿನಲ್ಲಿ ಬಳಸಲ್ಪಟ್ಟಿರುವ ಅರ್ಥಕ್ಕೆ ಬಹು ದೂರವಾಗಿರುತ್ತದೆ. ನಾವು ಈಗಾಗಲೇ ನೋಡಿರುವ ಪ್ರಕಾರ, ''apocalypse'' ಎಂದರೆ "ಒಂದು ಬಯಲುಗೊಳಿಸುವಿಕೆ" ಅಥವಾ "ಪ್ರಕಟನೆ" ಎಂದಾಗಿರುತ್ತದೆ.

ಆಗಾಗ ಕೇಳಿ ಬರುವಂಥ ಇನ್ನೊಂದು ಪದವೆಂದರೆ "ಅರ್ಮಗೆದ್ದೋನ್," ಅದು "ವಿನಾಶಕಾರಿ ಕದನ" ಅಥವಾ "ಒಳ್ಳೇ ಹಾಗೂ ಕೆಟ್ಟ ಶಕ್ತಿಗಳ ನಡುವಿನ ಅಂತಿಮ ಯುದ್ಧ" ಎಂದು ಸಹ ಭಾವಿಸಲ್ಪಡುತ್ತದೆ. ಪ್ರಕಟನೆ ಪುಸ್ತಕ್ಕಕೆ ಸಂಬಂಧ ಪಡಿಸುವ ಇನ್ನೂ ಒಂದು ಪದವೆಂದರೆ "ಸಹಸ್ರವರ್ಷ," ಅಂದರೆ "ಸಾವಿರ ವರ್ಷಗಳು" ಎಂಬುದು. ಎರಡನೆಯ ಸಹಸ್ರ ವರ್ಷವು ಸಮೀಪಿಸುತ್ತಿದ್ದಂತೆ ಈ ಪದವು ಪ್ರತಿಯೊಬ್ಬರ ನಾಲಿಗೆಯಲ್ಲಿಯೂ ಇತ್ತು. ಈ ಪದಕ್ಕೆ ಅನೇಕ ಸಾರಿ ಅಮಂಗಳಕರವಾದ ಸೂಚ್ಯಾರ್ಥಗಳನ್ನು ನೀಡಲಾಗುತ್ತಿತ್ತು. ಈ ವ್ಯಾಖ್ಯಾನ ಗ್ರಂಥದ ನಂತರದ ಭಾಗದಲ್ಲಿ ನಾವು ನೋಡಲಿರುವ ಪ್ರಕಾರ, ಈ ಪದಗಳು ಇಂದು ಧಾರ್ಮಿಕ ವಲಯಗಳಲ್ಲಿ ಸಹ ದುರುಪಯೋಗ ಮಾಡಿಕೊಳ್ಳಲ್ಪಡುತ್ತಿವೆ.

ಪ್ರಕಟನೆ 6ನೇ ಅಧ್ಯಾಯವು ಈ ದಿನಗಳಲ್ಲಿ ಬಹಳ ಪ್ರಸಿದ್ಧವಾಗಿರುವ ಭಾಷೆಯನ್ನೊಳಗೊಂಡಿರುತ್ತದೆ. ಈ ಅಧ್ಯಾಯದಲ್ಲಿ, ಯೋಹಾನನಿಗೆ ಖ್ಯಾತಿಯಾಗಿರುವ ನಾಲ್ಕು ಕುದುರೆಗಳ ಸವಾರರನ್ನು ತೋರಿಸಲಾಗುತ್ತದೆ.

### ನಾಲ್ಕು ಕುದುರೆಗಳ ಸವಾರರು (6:1-8)

5ನೇ ಅಧ್ಯಾಯದ ಪ್ರಮುಖ ಅಂಶವು ಸಿಂಹಾಸನದ ಮೇಲೆ ಕೂತಿದ್ದಾತನ ಕೈಯೊಳಗಿಂದ ಕುರಿಯಾದಾತನು ಸುರುಳಿಯನ್ನು ತೆಗೆದುಕೊಳ್ಳುವದು ಆಗಿತ್ತು (5:7). ತಾನು ಸುರುಳಿಯ ಮೇಲೆ ಏನು ಬರೆದಿದೆ ಎಂಬುದನ್ನು ಓದುವೆನು ಇಲ್ಲವೇ ಬೇರೆ ಯಾರಾದರೂ

ಅದನ್ನು ತನಗೆ ಓದಿ ಹೇಳುವರು ಎಂಬುದಾಗಿ ಯೋಹಾನನು ಭಾವಿಸಿಕೊಂಡಿದ್ದನು. ಮಾತುಗಳನ್ನು ಓದುವದರ ಅಥವಾ ಕೇಳಿಸಿಕೊಳ್ಳುವದರ ಬದಲಾಗಿ, ದೃಶ್ಯದೊಳಗೆ ಕುದುರೆಗಳು ದೌಡಾಯಿಸುವದನ್ನು ಕಂಡನು. ಸುರುಳಿಯು ಒಂದು "ಸಚಿತ್ರ" ಸಂಪುಟವಾಗಿದ್ದು ಅದರಲ್ಲಿನ "ಚಿತ್ರಗಳು" ಪುಟಗೊಳಗಿಂದ ಹೊರಕ್ಕೆ ಜಿಗಿದು ಬರುತ್ತಾ ಯೋಹಾನನ ದರ್ಶನದಲ್ಲಿ ಗುಡುಗುವಂಥವುಗಳಾಗಿ ಮಾರ್ಪಟ್ಟಿತ್ತು.

ಮೊದಲ ನಾಲ್ಕು ಮುದ್ರೆಗಳು ನಾಲ್ಕು ಕುದುರೆಗಳನ್ನು ಮತ್ತು ಅದರ ಸವಾರರನ್ನು ಬಯಲುಗೊಳಿಸಿತು. ಕೆಲವು ವಿಷಯಗಳಲ್ಲಿ, ಈ ಮುದ್ರೆಗಳ ಸಾಂಕೇತಿಕತೆಯು ಆ ದಿನದ ಯೆಹೂದಿಗಳು ಹಾಗೂ ಕ್ರೈಸ್ತರಿಗೆ ಪರಿಚಿತವಾಗಿದ್ದವು. ಕುದುರೆಯು ಸಾಮಾನ್ಯವಾಗಿ ಯುದ್ಧದ ಯೋಚನೆಗಳನ್ನು ಮನಸ್ಸಿಗೆ ತರುವಂಥದ್ದಾಗಿತ್ತು. "ಕುದುರೆಯು ಯುದ್ಧಕ್ಕಾಗಿರುವ ಪ್ರಾಣಿ [ಯಾಗಿತ್ತು]: ಎತ್ತುಗಳು ಕೃಷಿಗಾಗಿ, ಕತ್ತೆಗಳು ಸಂಚಾರಕ್ಕಾಗಿ, ಕುದುರೆಗಳು ಯುದ್ಧಕ್ಕಾಗಿ ಆಗಿದ್ದವು."[1] ಕುದುರೆಗಳ ಸಂಖ್ಯೆ ಮತ್ತು ಅವುಗಳ ಬೇರೆ ಬೇರೆ ಬಣ್ಣದವುಗಳಾಗಿರುವದಕ್ಕೆ ಸಮಾನವಾದ ಹಳೆಯ ಒಡಂಬಡಿಕೆಯ ನಿದರ್ಶನವೊಂದು ಸಹ ಇತ್ತು. ಜೆಕರ್ಯನು 1:8-10 ಮತ್ತು 6:1-7 ವಚನಗಳು ದೇವರ ಸೇವೆಯಲ್ಲಿ ಬಳಸಲ್ಪಡುತ್ತಿದ್ದ ನಾಲ್ಕು ಬೇರೆ ಬೇರೆ ಬಣ್ಣದ ಕುದುರೆಗಳ ಬಗ್ಗೆ ಹೇಳುತ್ತವೆ. ಹೇಗೂ, ಜೆಕರ್ಯ ಮತ್ತು ಪ್ರಕಟನೆ 6ರ ನಡುವಿನ ಕುದುರೆಗಳ ನಡುವೆ ಗಮನಾರ್ಹವಾದ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಜೆಕರ್ಯನ ಪುಸ್ತಕದಲ್ಲಿರುವ ಕುದುರೆಗಳು ರಥವನ್ನು ಎಳೆಯುತ್ತಿದ್ದು ಮತ್ತು ಪ್ರಕಟನೆ 6ರಲ್ಲಿನ ಕುದುರೆಗಳ ಮೇಲೆ ಸವಾರರು ಇದ್ದರು. ಜಕರ್ಯನ ಪುಸ್ತಕದಲ್ಲಿರುವ ಕುದುರೆಗಳು ಒಂದು ವರದಿಯನ್ನು ತಂದರೆ, ಪ್ರಕಟನೆ ಪುಸ್ತಕದಲ್ಲಿನ ಕುದುರೆಗಳು ನಾಶನವನ್ನು ತಂದವು. ಮೂರನೆಯ ವ್ಯತ್ಯಾಸವೆಂದರೆ ಬಣ್ಣಗಳು: ಪ್ರಕಟನೆ ಪುಸ್ತಕದಲ್ಲಿ, ಆಯಾ ಸವಾರನು ಬರಮಾಡುವ ನಾಶನಗಳಿಗೆ ಬಣ್ಣವು ಸಂಬಂಧವನ್ನು ಹೊಂದಿರುತ್ತದೆ. ಅಂತಿಮ ವಿಶ್ಲೇಷಣದಲ್ಲಿ, Apocalypseನ ನಾಲ್ಕು ಕುದುರೆಗಳ ಸವಾರರು ವಿಶಿಷ್ಠವಾದವರು.

ಈ ನಾಲ್ಕು ಕುದುರೆ ಸವಾರರು ಪ್ರಕಟನೆ ಪುಸ್ತಕದಲ್ಲಿ ಚೆನ್ನಾಗಿ ಪರಿಚಿತವಿರುವ ಚಿತ್ರಣಗಳಲ್ಲಿ ಸೇರಿದ್ದಾರೆ. Billy Grahamನು ಸ್ವ-ವಿನಾಶಕರಿ ಗೀಳುಗಳ ವಿಷಯವಾಗಿ ಲೋಕವನ್ನು ಎಚ್ಚರಿಸುವದಕ್ಕೆ ಪುಸ್ತಕವೊಂದನ್ನು ಬರೆದಾಗ, ಆತನು ಆ ಪುಸ್ತಕಕ್ಕೆ *Approaching Hoofbeats: The Four Horsemen of the Apocalypse (ಸಮೀಪಿಸುತ್ತಿರುವ ಗೊರಸಿನ ಸದ್ದುಗಳು: ವಿನಾಶತೆಯ ನಾಲ್ಕು ಕುದುರೆ ಸವಾರರು).* Vincente Blasco-Ibanezನ ಪ್ರಖ್ಯಾತ ಯುದ್ಧ-ವಿರೋಧಿ ಕಾದಂಬರಿಯ ಸಹ *The Four Horsemen of the Apocalypse* ಎಂದು ಹೆಸರಿಡಲ್ಪಟ್ಟಿತ್ತು, ಇದು ಅನಂತರದಲ್ಲಿ ಚಲನಚಿತ್ರವಾಗಿ ಮಾಡಲ್ಪಟ್ಟಿತ್ತು. ಇಂಥ ಕೃತಿಗಳು ನಾಲ್ಕು ಕುದುರೆ ಸವಾರರ ಕುರಿತಾಗಿರುವ ಅಪಾರ್ಥವೊಂದಕ್ಕೆ ದೃಷ್ಟಾಂತವಾಗಿರುತ್ತವೆ, ಆದರೆ ಅವುಗಳು ಆಧುನಿಕ ಮನಸ್ಸಿನೊಂದಿಗೆ ಸಾದೃಶ್ಯಗಳು ಇಂದಿಗೂ ಮಾತಾಡುತ್ತವೆ ಎಂಬುದನ್ನಂತೂ ದೃಷ್ಟಾಂತ ಪಡಿಸುತ್ತವೆ. ಪ್ರಕಟನೆ 6ರ ವಿಷಯವಾಗಿ, Bruce Metzgerನು ಹೀಗೆ ಹೇಳುತ್ತಾನೆ:

> ನಮ್ಮ ಕಾಲಕ್ಕೆ ಹೆಚ್ಚು ನೇರವಾಗಿ ಮಾತಾಡುವ ಅಧ್ಯಾಯಗಳು ಪ್ರಕಟನೆ ಪುಸ್ತಕದಲ್ಲಿ ಕೆಲವೇ ಕೆಲವು ಇರುತ್ತವೆ . . . ಪುಸ್ತಕಗಳಲ್ಲಿ, ಸುದ್ದಿ ಪತ್ರಿಕೆಗಳು, ಮ್ಯಾಗಜಿನ್ ಅಂಕಣಗಳಲ್ಲಿ, ಮತ್ತು ರೆಡಿಯೋ ಪ್ರಸಾರಗಳಲ್ಲಿ, ನಾವು ಇಂದು ಭೂಮಿಯಲ್ಲೆಲ್ಲಾ ಸವಾರಿ ಮಾಡುತ್ತಿರುವ ವಿನಾಶತೆಯ ನಾಲ್ಕು ಕುದುರೆ ಸವಾರರ ಕುರಿತಾಗಿ ಓದುತ್ತೇವೆ ಮತ್ತು ಕೇಳಿಸಿಕೊಳ್ಳುತ್ತೇವೆ.[2]

## ಮೊದಲ ಮುದ್ರೆ (6:1, 2)

**[1]ಯಜ್ಞದ ಕುರಿಯಾದಾತನು ಆ ಏಳು ಮುದ್ರೆಗಳಲ್ಲಿ ಒಂದು ಮುದ್ರೆಯನ್ನು ಒಡೆಯುವಾಗ ನಾನು ನೋಡಿದೆನು. ಮತ್ತು ಆ ನಾಲ್ಕು ಜೀವಿಗಳಲ್ಲಿ ಒಂದು ಜೀವಿಯು - ಬಾ ಎಂದು ಗುಡುಗಿನಂತಿದ್ದ ಸ್ವರದಿಂದ ಹೇಳುವದನ್ನು ಕೇಳಿದೆನು. [2]ಆಗ ಇಗೋ, ಒಂದು ಬಿಳಿ ಕುದುರೆ ಕಾಣಿಸಿತು; ಅದರ ಮೇಲೆ ಕೂತಿದ್ದವನ ಕೈಯಲ್ಲಿ ಬಿಲ್ಲು ಇತ್ತು; ಅವನಿಗೆ ಜಯಮಾಲೆ ಕೊಡಲ್ಪಟ್ಟಿತು; ಅವನು ಜಯಿಸುತ್ತಿರುವವನಾಗಿ ಜಯಿಸುವದಕ್ಕೋಸ್ಕರ ಹೊರಟನು.**

**ವಚನ 1.** ಯೋಹಾನನು ಬರೆಯುತ್ತಾನೆ, **ಯಜ್ಞದ ಕುರಿಯಾದಾತನು ಆ ಏಳು ಮುದ್ರೆಗಳಲ್ಲಿ ಒಂದು ಮುದ್ರೆಯನ್ನು ಒಡೆಯುವಾಗ ನಾನು ನೋಡಿದೆನು. ಮತ್ತು ಆ ನಾಲ್ಕು ಜೀವಿಗಳಲ್ಲಿ ಒಂದು ಜೀವಿಯು - ಬಾ ಎಂದು ಗುಡುಗಿನಂತಿದ್ದ ಸ್ವರದಿಂದ ಹೇಳುವದನ್ನು ಕೇಳಿದೆನು.** ಬೇರೆ ಜೀವಿಗಳು "ಎರಡನೆಯ" (ವ. 3), "ಮೂರನೆಯ" (ವ. 5), ಮತ್ತು "ನಾಲ್ಕನೆಯ" (ವ. 7) ಎಂಬುದಾಗಿ ಗುರುತಿಸಲ್ಪಟ್ಟಿವೆಯಾದ್ದರಿಂದ, ಈ ಜೀವಿಯು "ಮೊದಲನೆಯ" ಜೀವಿಯೆಂಬುದು ಸ್ಪಷ್ಟಗೊಳ್ಳುತ್ತದೆ, ಇದು "ಸಿಂಹದಂತೆ" ಇರುವ ಜೀವಿಯಾಗಿತ್ತು (4:7). (ಎಲ್ಲಾ ನಾಲ್ಕು ಜೀವಿಗಳ ಬಣ್ಣನೆಗಳಿಗಾಗಿ, 4:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.) ಕೆಲವು ಪ್ರಾಚೀನ ಹಸ್ತ ಪ್ರತಿಗಳಲ್ಲಿ "ಬಂದು ನೋಡು" (KJV) ಎಂದಿದ್ದು, ಅದು ಇಲ್ಲ ಯೋಹಾನನನ್ನು ಉದ್ದೇಶಿಸಿ ಹೇಳಲಾಗಿದೆ ಎಂಬುದನ್ನು ಸೂಚಿಸುತ್ತದೆ. ಹೇಗೂ, ಒಟ್ಟಾರೆಯಾಗಿ ಹಸ್ತ ಪ್ರತಿಗಳ ಪುರಾವೆಯು, ಕೇವಲ ಬಾ ಎಂಬುದರ ಕಡೆಗೆ ಒಲವು ತೋರುತ್ತವೆ, ಅದು ಬಹುಶಃ ವಾಚಕರಿಗಾಗಿ ಕೊಟ್ಟಿರುವ ಒಂದು ಆಜ್ಞೆಯಾಗಿರುತ್ತದೆ.

**ವಚನ 2.** ಮೊದಲನೆಯ ಮುದ್ರೆಯು ಒಡೆಯಲ್ಪಟ್ಟಾಗ, ಯೋಹಾನನಿಗೆ **ಒಂದು ಬಿಳಿ ಕುದುರೆ ಕಾಣಿಸಿತು**; **ಅದರ ಮೇಲೆ ಕೂತಿದ್ದವನ ಕೈಯಲ್ಲಿ ಬಿಲ್ಲು ಇತ್ತು**; **ಅವನಿಗೆ ಜಯಮಾಲೆ ಕೊಡಲ್ಪಟ್ಟಿತು**; **ಅವನು ಜಯಿಸುತ್ತಿರುವವನಾಗಿ ಜಯಿಸುವದಕ್ಕೋಸ್ಕರ ಹೊರಟನು**. 2ನೇ ವಚನದಲ್ಲಿರುವ ಚಿತ್ರಣವು ಬಿಲ್ಲು ಮತ್ತು ಜಯಮಾಲೆಗಳೊಂದಿಗೆ ಚಿತ್ರಿಸಲ್ಪಟ್ಟಿದ್ದ ಪಾರ್ಥಿಯನ್ ಕುದುರೆ ಸವಾರರನ್ನು ಜ್ಞಾಪಿಸುವದಾಗಿತ್ತು. ಈ ಸಾಂಕೇತಿಕತ್ವವು ಒಂದು ದಿನ ರೊಮನ್ನರು ಪಾರ್ಥಿಯನ್ನರ ಕೈಗಳಲ್ಲಿ ಬಾಧೆಯನ್ನನುಭವಿಸುವರೆಂಬುದರ ಒಂದು ಮುಂತಿಳಿಸುವಿಕೆ ಎಂದು ಕೆಲವರು ನಂಬುತ್ತಾರೆ; ಇನ್ನು ಕೆಲವರು ಈ ಚಿತ್ರಣವು ಜಯಿಸುವ ಯಾವದೇ ಶಕ್ತಿಯನ್ನು ಪ್ರತಿನಿಧಿಸುತ್ತದಷ್ಟೆ ಎಂದು ನಂಬುತ್ತಾರೆ - ಅದು ಪಾರ್ಥಿಯನ್ನರು ಆಗಿರಬಹುದು, ರೋಮ್, ಅಥವಾ ಇತರೆ ಯಾವದೇ ವಿಜಯಿಶಾಲಿ ದೇಶವಾಗಿರಬಹುದು.

ಈ ಸವಾರನು ಕೈಯಲ್ಲಿ **ಬಿಲ್ಲು** ಹೊಂದಿದ್ದನು, ಅದು ಮಿಲಿಟರಿ ಸಾಮರ್ಥ್ಯಕ್ಕೆ ಸಂಕೇತವಾಗಿದ್ದ ಒಂದು ಆಯುಧವಾಗಿದೆ (ನೋಡಿರಿ ಕೀರ್ತನೆ 46:9; ಯೆರೆಮೀಯ 51:56; ಯೆಹೆಜ್ಕೇಲ 39:3, 9; ಹೋಶೇಯ 1:5). ಈ ಮೊದಲೆಯ ಮುದ್ರೆಯ ಬಹುಪಾಲು ಸಂಕೇತಗಳು ಜಯದ ವಿಷಯಕ್ಕೆ ಸಂಬಂಧಿಸಿದವುಗಳಾಗಿವೆ: "ಪ್ರಾಚೀನ ಜನರ ಮಧ್ಯದಲ್ಲಿ ಬಿಳಿ ಕುದುರೆಯು ಜಯಕ್ಕೆ ಸಂಕೇತವಾಗಿತ್ತು."[3] ಸವಾರನಿಗೆ ಕೊಡಲ್ಪಟ್ಟ **ಜಯಮಾಲೆ** (ಕಿರೀಟ) ಆಳ್ವಿಕೆ ಮಾಡುವ ಕಿರೀಟ, διάδημα (*diadēma*) ಆಗಿರಲಿಲ್ಲ, ಆದರೆ ಜಯದ ಕಿರೀಟ, στέφανος (*stephanos*) ಆಗಿತ್ತು (2:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಷ್ಟುಮಾತ್ರವಲ್ಲದೆ, **ಜಯಿಸುತ್ತಿರುವವನಾಗಿ** ಮತ್ತು **ಜಯಿಸುವದಕ್ಕೋಸ್ಕರ** ಎಂಬ ಪದಗಳು "ವಿಜಯ" ಎಂದು ಅನುವಾದಿಸಲ್ಪಟ್ಟಿರುವ ಗ್ರೀಕ್ ಪದವಾದ νίκη (*nikē*) ಎಂಬುದರ ಕ್ರಿಯಾಪದ ರೂಪವಾಗಿರುತ್ತವೆ.

ಈ ಜಯಶಾಲಿಯಾದ ಸವಾರನನ್ನು ಗುರುತಿಸುವದು ನಮಗೆ ಸಾಧ್ಯವಿರುತ್ತದೋ? ನಾಲ್ಕನೆಯ ಸವಾರನು "ಮರಣ" ಎಂಬುದಾಗಿ ಗುರುತಿಸಲ್ಪಟ್ಟಿದ್ದಾನೆ (ವ. 8) ಎಂಬ ವಾಸ್ತವಾಂಶವು ಸೂಚಿಸುವದೇನೆಂದರೆ ಪ್ರತಿಯೊಬ್ಬ ಸವಾರನಿಗೆ ಒಂದು ಸಾಮಾನ್ಯವಾಗಿರುವ ಹೆಸರನ್ನು ಕೊಡಬಹುದು ಎಂಬದೆ. ವಿಷಯವು ಹೀಗಿರುವದರಿಂದ, ನಾವು ಕೇಳುವದೇನೆಂದರೆ, "ಬಿಳಿ ಕುದುರೆಯ ಸವಾರನು ಯಾವದನ್ನು ಅಥವಾ ಯಾರನ್ನು ಪ್ರತಿನಿಧಿಸುತ್ತಾನೆ?"

"ನಿರಂತರವಾದ-ಐತಿಹಾಸಿಕ" ಅರ್ಥೈಸುವ ದಾರಿಯನ್ನು ಬಳಸುವವರು **ಬಿಳಿ ಕುದುರೆ**ಯ ಮೇಲಿನ ಸವಾರನನ್ನು ನಿರ್ದಿಷ್ಟವಾದ ಐತಿಹಾಸಿಕ ವ್ಯಕ್ತಿಯನ್ನಾಗಿ ಗುರುತಿಸುವದಕ್ಕೆ ಪ್ರಯತ್ನವನ್ನು ಮಾಡಿರುತ್ತಾರೆ. "ಭವಿಷ್ಯತ್ವದ" ಅರ್ಥೈಸುವ ದಾರಿಯನ್ನು ಅನುಸರಿಸುವವರು (ಸಹಸ್ರವರ್ಷಪೂರ್ವಾಡಳಿತ ವಾದಿಗಳು) ಸಾಮಾನ್ಯವಾಗಿ ಈ ಸವಾರನನ್ನು "ಕ್ರಿಸ್ತವಿರೋಧಿ" ಎಂದು ಗುರುತಿಸುತ್ತಾರೆ (ಅವರು ಆತನನ್ನು ಒಬ್ಬ ನಿರ್ದಿಷ್ಟವಾದ ವ್ಯಕ್ತಿಯಾಗಿ ಭಾವಿಸುತ್ತಾರೆ), ಹೀಗಿದ್ದಾಗ್ಯೂ ವಾಕ್ಯವು ಎಲ್ಲಿಯೂ ಈ ರೀತಿಯಾಗಿ ಸೂಚಿಸುವದಿಲ್ಲ. ಕೆಲವೊಂದು ವಿನಾಯಿತಿಗಳಿದ್ದಾವಾದರೂ, ನಿಯಮದ ಪ್ರಕಾರ ನೋಡುವದಾದರೆ, ಅಂತ್ಯಾಕಲಿಕ ಬಣ್ಣನೆಗಳು ನಿರ್ದಿಷ್ಟವಾದ ವ್ಯಕ್ತಿಗಳೊಂದಿಗೆ ಸಂಬಂಧವನ್ನು ಹೊಂದಿರುವದಿಲ್ಲ.

ಈ ಸವಾರನು ಯೇಸುವೇ ಆಗಿದ್ದನೆಂದು ಕೆಲವರು ನಂಬುತ್ತಾರೆ. ಅಂತೂ, ಕ್ರಿಸ್ತನು 19ನೇ ಅಧ್ಯಾಯದಲ್ಲಿ ಬಿಳಿ ಕುದುರೆಯ ಮೇಲೆ ಕಾಣಿಸಿಕೊಳ್ಳುತ್ತಾನಷ್ಟೆ. ಈ ನಿಲುವಿಗೆ ಅನುಯಾಯಿಗಳ ಸಂಖ್ಯಾಬಲವು ಇರುತ್ತದೆ ಮತ್ತು ಇದು ಸರಿಯಾದದ್ದು ಆಗಿರಬಹುದಾಗಿದೆ.[4] ಹೇಗೂ, ಅನೇಕರು Frank Packನಿಂದ ವ್ಯಕ್ತಪಡಿಸಲ್ಪಟ್ಟಿರುವ ನಿಲುವನ್ನು ನಂಬುತ್ತಾರೆ: "ಈ ಕುದುರೆ ಮತ್ತು ಸವಾರನು ಹಾಗೂ 19:11ರಲ್ಲಿನ ಕುದುರೆ ಸವಾರರ ನಡುವೆ ಇರುವ ಏಕೈಕ ಹೋಲಿಕೆಯೆಂದರೆ ಅದು . . . ಕುದುರೆಯ ಬಣ್ಣವೇ."[5] ಕೆಲವೊಂದು ವಿರುದ್ಧ ಹೋಲಿಕೆಗಳನ್ನು ಪರಿಗಣಿಸಿರಿ:

| ಮೊದಲನೆಯ ಸವಾರನು (ಪ್ರಕಟನೆ 6:2) | ಯೇಸು (ಪ್ರಕಟನೆ 19:11-16) |
|---|---|
| ಒಂದು ಜಯಮಾಲೆ (ಕಿರೀಟ) | ಅನೇಕ ಕಿರೀಟಗಳು (ವ. 12) |
| ಜಯಮಾಲೆ (*stephanos*) | ಆಳ್ವಿಕೆಯ ಕಿರೀಟಗಳು (*diadē mata*) (ವ. 12) |
| ಒಂದು ಬಿಲ್ಲು ಹೊಂದಿದ್ದಾನೆ | ಒಂದು ಕತ್ತಿಯನ್ನು ಹೊಂದಿದ್ದಾನೆ (ವ. 15) |
| ಆತನ ಹಿಂದೆ ಮೂವರು ಕುದುರೆ ಸವಾರರು | ಆತನ ಹಿಂದೆ ಪರಲೋಕದ ಸೈನ್ಯ (ವ. 14) |
| ಹೆಸರಿಸಲ್ಪಟ್ಟಿಲ್ಲ | ಹೆಸರಿಸಲ್ಪಟ್ಟಿದ್ದಾನೆ (ವಚನಗಳು 11-13, 16) |
| ಉಡುಪುಗಳು ಪ್ರಸ್ತಾಪಿಸಲ್ಪಟ್ಟಿಲ್ಲ | ರಕ್ತಪ್ರೋಕ್ಷಿತವಾದ ವಸ್ತ್ರ (ವಚನಗಳು 13, 16) |
| ಜಯಿಸುತ್ತಿರುವವನು | ನ್ಯಾಯವನ್ನು ವಿತರಿಸುವವನು (ವಚನಗಳು 11, 15) |

ಸನ್ನಿವೇಶವು ಈ ಮೊದಲನೆಯ ಸವಾರನನ್ನು ಉಳಿದ ಮೂವರು ಸವಾರರೊಂದಿಗೆ ಗುರುತಿಸಲ್ಪಡಬೇಕೆಂಬ ನಿಲುವಿಗೆ ಒಲವು ತೋರಿಸುತ್ತದೆಂದು ಕಾಣಿಸುತ್ತದೆ, ಅವನು ಭೂಮಿಯ ಮೇಲೆ ಸ್ವಚ್ಛಂದವಾಗಿ ಬರಲಿದ್ದ ನಾಶನವನ್ನುಂಟು ಮಾಡುವ ಶಕ್ತಿಗಳ ಒಂದು ಮಹತ್ವಪೂರ್ಣವಾದ ಭಾಗವಾಗಿದ್ದನು. ಈ ಮೂರು ಅಂಶಗಳ ಕುರಿತು ಅವಲೋಕಿಸಿರಿ: ಎಲ್ಲಾ ಮೂರು ಸವಾರರನ್ನು ಒಂದೇ ರೀತಿಯಲ್ಲಿ ಪರಿಚಯಿಸಲಾಗುತ್ತದೆ, ಪ್ರತಿಯೊಬ್ಬೊಬ್ಬರನ್ನು ನಾಲ್ಕರಲ್ಲಿ ಒಂದು ಜೀವಿಯು ಪರಿಚಯಿಸುತ್ತದೆ; ನಾಲ್ಕು ಜೀವಿಗಳು ಇತರ ಯಾವದೇ ಮುದ್ರೆಗೆ ಪರಿಚಯವನ್ನು ಮಾಡಿಲಿಲ್ಲ. ನಾಲ್ಕು ಕುದುರೆ ಸವಾರರು ಒಂದು ಘಟಕವಾಗಿ ಕೆಲಸ ಮಾಡಿದರೆಂದು ತೋರುತ್ತದೆ: ಪ್ರತಿಯೊಬ್ಬನು ಮತ್ತೊಬ್ಬನಿಗೆ ಪೂರಕವಾಗಿದ್ದನು. ಅಷ್ಟುಮಾತ್ರವಲ್ಲದೆ, "ನಾಲ್ಕು" ಎಂಬುದು "ಬ್ರಹ್ಮಾಂಡ ಸಂಖ್ಯೆ" ಆಗಿದ್ದು - ಈ ಭೂಮಿಗೆ ಸಂಬಂಧ ಪಟ್ಟಿರುವ ಸಂಖ್ಯೆ - ನಾಲ್ಕು ಸವಾರರು ಒಂದು ಘಟಕವಾಗಿ ಭೂಮಿಯ ಮೇಲೆ ನಾಶನವನ್ನುಂಟು ಮಾಡಿದರು ಎಂಬುದನ್ನು ಸೂಚಿಸುತ್ತದೆ.

ಬಿಳಿ ಕುದುರೆಯ ಮೇಲಿನ ಸವಾರನು ಕ್ರಿಸ್ತನಲ್ಲ ಎಂದು ಸೂಚಿಸುವದಕ್ಕೆ ಇನ್ನು ಕೆಲವು ವಾದಗಳನ್ನು ಮಂಡಿಸಲಾಗಿರುತ್ತದೆ. ಉದಾಹರಣೆಗೆ, ಕುರಿಯಾದಾತನು (ಕ್ರಿಸ್ತನು) ಮೊದಲನೆಯ ಮುದ್ರೆಯನ್ನು ಒಡೆಯುವದು ಮತ್ತು ಒಡೆದ ತಕ್ಷಣವೇ ಒಂದು ಬಿಳಿ ಕುದುರೆಯನ್ನು ಏರಿ ಸವಾರಿ ಮಾಡುವದು ಎಂದರೆ ಅದು ಒಂದು ರೀತಿಯಲ್ಲಿ ಅಸಮಂಜಸವಾಗಿ ಕಾಣಿಸುತ್ತದೆ. ಪುನಃ, ಕ್ರಿಸ್ತನು 19ನೇ ಅಧ್ಯಾಯದಲ್ಲಿ ಬಿಳಿ ಕುದರೆಯ ಮೇಲೆ ಕಾಣಿಸಿಕೊಂಡಾಗ, ಯೋಹಾನನು "ಇದೋ" ಎಂಬ ಮಾತನ್ನು ಬಳಸುತ್ತಾನೆ (19:11), ಇದು ಒಂದು ಅನಿರೀಕ್ಷಿತ ಹಾಗೂ ರೋಮಾಂಚಕತೆಯನ್ನು ಸೂಚಿಸುವ ಪದವಾಗಿದೆ. ಯೋಹಾನನು ಒಂದು ಪುನಾರವರ್ತಿತ ಕ್ರಿಯೆಯನ್ನಲ್ಲದೆ, ಮೊಟ್ಟ ಮೊದಲ ಬಾರಿಗೆ ಜಯದ ಬಿಳಿ ಕುದುರೆಯ ಮೇಲೆ ಯೇಸುವನ್ನು ನೋಡುತ್ತಿದ್ದಲ್ಲಿ ಮಾತ್ರವೇ ಆತನು ಅನಿರೀಕ್ಷಿತವಾದ ವಿಸ್ಮಯ ಹಾಗೂ ರೋಮಾಂಚಕತೆಗೆ ಒಳಗಾಗುವ ಸಾಧ್ಯತೆಯಿರುವದಾಗಿತ್ತು.

ಒಬ್ಬನು ಬಿಳಿ ಕುದುರೆಯ ಸವಾರನು ಕ್ರಿಸ್ತನು ಎಂಬ ನಿಲುವನ್ನು ತೆಗೆದುಕೊಂಡರೂ ಸರಿಯೇ ಅಥವಾ ಕ್ರಿಸ್ತನಲ್ಲ ಎಂಬ ನಿಲುವನ್ನು ತೆಗೆದುಕೊಂಡರೂ ಸರಿಯೇ, ನಾಲ್ಕು ಕುದುರೆ ಸವಾರರ ಕುರಿತಾದ ಮೂಲಭೂತ ನಿರ್ಣಯವು ಒಂದೇ ಆಗಿರಲಿದೆ: *ಮೊದಲ ನಾಲ್ಕು ಮುದ್ರೆಗಳು ಒಬ್ಬ ನಂಬಿಗಸ್ತನಾದ ಕ್ರೈಸ್ತನಾಗಿರುವದರಲ್ಲಿರುವ ಕಠಿಣತೆಯನ್ನು ಘೋಷಿಸುತ್ತವೆ.* ಪ್ರಾಥಮಿಕ ವ್ಯತ್ಯಾಸವು ಏನೆಂದರೆ ಕ್ರೈಸ್ತನಿಗೆ ಸಮಸ್ಯೆಯು *ಮೊದಲನೆಯ* ಸವಾರನಿಂದ ಆರಂಭಗೊಳ್ಳುತ್ತದೋ ಅಥವಾ *ಎರಡನೆಯ* ಸವಾರನಿಂದ ಆರಂಭಗೊಳ್ಳುತ್ತದೋ ಎಂಬುದೆ.

6ನೇ ಅಧ್ಯಾಯದಲ್ಲಿ ಬಿಳಿ ಕುದುರೆಯ ಮೇಲಿನ ಸವಾರನು ಬಹುಶಃ 19ನೇ ಅಧ್ಯಾಯದಲ್ಲಿರುವ ಬಿಳಿ ಕುದುರೆಯ ಸವಾರನಿಗೆ (ಕ್ರಿಸ್ತನು) *ವಿರುದ್ಧ ಹೋಲಿಕೆ*ಯಾಗಿರಬೇಕೆಂಬ ಉದ್ದೇಶವಿರಬಹುದಾಗಿದೆ: 6ನೇ ಅಧ್ಯಾಯದಲ್ಲಿ ಕುದುರೆ ಸವಾರನು ಜಯಿಸುತ್ತಿರುವವನಾಗಿ *ಕಾಣಿಸಿಕೊಂಡನು*, ಆದರೆ *ನಿಜವಾದ* ಜಯಶಾಲಿಯು ಯೇಸುವೇ ಆಗಿರುವನು. ಪ್ರಕಟನೆ ಪುಸ್ತಕವು ದುಷ್ಟ ಶಕ್ತಿಗಳಿಗೆ ಸಿಕ್ಕುವ ಜಯವನ್ನು ಕುರಿತು ಬಣ್ಣಿಸುವದಕ್ಕೆ ಸಂಕೋಚ ಪಡುವದಿಲ್ಲ (13:7). ಈ ಜಯವು ಕ್ಷಣಿಕವಾಗಿತ್ತು, ಆದರೆ ಆಗಲೂ ಅದೊಂದು ಜಯವೇ ಆಗಿತ್ತು.

ಮೊದಲನೆಯ ಸವಾರನು ಕ್ರಿಸ್ತನು ಆಗಿರಲಿಲ್ಲವಾದರೆ, ಆತನಿಗೆ ಯಾವ ಹೆಸರು ಕೊಡಬಹುದಾಗಿದೆ? "ಸಾಮ್ರಾಜ್ಯಶಾಹಿ" ಅಥವಾ "ದುರಾಶೆ" ಎಂದರೆ ಹೇಗೆ? "ಸಾಮ್ರಾಜ್ಯಶಾಹಿ" ಎಂಬುದಕ್ಕೆ "ಒಂದು ದೇಶದ ಅಧಿಕಾರವನ್ನು ಬೇರೆ ಪ್ರಾಂತ್ಯಗಳನ್ನು

ಆಕ್ರಮಿಸಿಕೊಳ್ಳುವ ಮೂಲಕ ಅಥವಾ ಬೇರೆ ದೇಶಗಳ ಮೇಲೆ ಆರ್ಥಿಕ ಹಾಗೂ ರಾಜಕೀಯ (ಪ್ರಭಾವವನ್ನು) ಸ್ಥಾಪಿಸುವ ಮೂಲಕ ವಿಸ್ತರಿಸಿಕೊಳ್ಳುವ ರಾಜ್ಯನೀತಿ" ಎಂದು ಅರ್ಥನಿರೂಪಣೆ ಮಾಡಲ್ಪಟ್ಟಿರುತ್ತದೆ. ಆ ಪದವನ್ನು ನಮ್ಮ ಬಳಕೆಯಲ್ಲಿ ನೋಡುವದಾದರೆ, ನಮ್ಮ ಮನಸ್ಸಿನಲ್ಲಿ *ಬೇರೆಯವರ ಮೇಲೆ ನಿಯಂತ್ರಣವನ್ನು ಹೊಂದಬೇಕೆಂಬ ಬಯಕೆ* ಇರುತ್ತದೆಂದಾಗುತ್ತದೆ. ಒಂದು ಬೇರೊಂದು ಗುಂಪಿಗೆ ಸೇರಿರುವ ಸಂಗತಿಗಳ ಮೇಲೆ ಆಶೆ ಪಡುವದು ಜಾಗತಿಕವಾದ ಕಲಹಗಳಿಗೆ ಪ್ರಚೋದಕವಾಗಿರುತ್ತದೆ. ದುರಾಶೆಯು ಎಲ್ಲಾ ಸಮಯಗಳಲ್ಲಿಯೂ ವಿರೋಧವನ್ನು ಎದುರಿಸುತ್ತದೆ ಮತ್ತು ಕಾದಾಟದಲ್ಲಿ ಫಲಿತಗೊಳ್ಳುತ್ತದೆ. ಯಾಕೋಬನು ಕಾದಾಟಗಳಿಗೆ ಮೂಲಕಾರಣದ ಕುರಿತು - ಅಂತರ್‌ರಾಷ್ಟ್ರೀಯವಾಗಿರಬಹುದು, ರಾಷ್ಟ್ರೀಯವಾಗಿರಬಹುದು, ಅಥವಾ ವೈಯಕ್ತಿಕವಾಗಿರಬಹುದು - ಮಾತಾಡುವ ವೇಳೆ, ಆತನು ಹೀಗೆ ಬರೆಯುತ್ತಾನೆ, "ನಿಮ್ಮಲ್ಲಿ ಯುದ್ಧಗಳೂ ಕಾದಾಟಗಳೂ ಎಲ್ಲಿಂದ ಹುಟ್ಟುತ್ತವೆ? ನಿಮ್ಮ ಇಂದ್ರಿಯಗಳಲ್ಲಿ ಹೋರಾಡುವ ಭೋಗಾಶೆಗಳಿಂದಲೇ ಅಲ್ಲವೇ" (ಯಾಕೋಬ 4:1; KJV). ಮೊದಲನೆಯ ಸವಾರನು ಹೀಗೆ ಎರಡನೆಯ ಸವಾರನಿಗಾಗಿ ವೇದಿಕೆಯನ್ನು ಸಿದ್ಧಗೊಳಿಸಿದನು: ಯುದ್ಧ.

## ಎರಡನೆಯ ಮುದ್ರೆ (6:3, 4)

**[3]ಆತನು ಎರಡನೆಯ ಮುದ್ರೆಯನ್ನು ಒಡೆದಾಗ ಎರಡನೆಯ ಜೀವಿಯು - ಬಾ ಅನ್ನುವದನ್ನು ಕೇಳಿದೆನು. [4]ಆಗ ಮತ್ತೊಂದು ಕುದುರೆಯು ಹೊರಟು ಬಂತು; ಅದು ಕೆಂಪು ಕುದುರೆ. ಅದರ ಮೇಲೆ ಕೂತಿದ್ದವನಿಗೆ ಭೂಮಿಯಿಂದ ಸಮಾಧಾನವನ್ನು ತೆಗೆದುಬಿಡುವದಕ್ಕೂ ಒಬ್ಬರನ್ನೊಬ್ಬರು ಕೊಲ್ಲುವವರಾಗುವಂತೆ ಮಾಡುವದಕ್ಕೂ ಅಧಿಕಾರವು ಕೊಡಲ್ಪಟ್ಟಿತು; ಅವನಿಗೆ ದೊಡ್ಡ ಕತ್ತಿಯು ಕೊಡಲ್ಪಟ್ಟಿತು.**

**ವಚನ 3.** ಯೋಹಾನನು ತನ್ನ ದರ್ಶನವನ್ನು ಮುಂದುವರೆಸುತ್ತಾನೆ. **ಆತನು ಎರಡನೆಯ ಮುದ್ರೆಯನ್ನು ಒಡೆದಾಗ ಎರಡನೆಯ ಜೀವಿಯು-ಬಾ ಅನ್ನುವದನ್ನು ಕೇಳಿದೆನು** (ವ. 1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 4. ಆಗ ಮತ್ತೊಂದು ಕುದುರೆಯು ಹೊರಟು ಬಂತು; ಅದು ಕೆಂಪು ಕುದುರೆ, ಅದರ ಮೇಲೆ ಕೂತಿದ್ದವನಿಗೆ ಭೂಮಿಯಿಂದ ಸಮಾಧಾನವನ್ನು ತೆಗೆದುಬಿಡುವದಕ್ಕೂ ಒಬ್ಬರನ್ನೊಬ್ಬರು ಕೊಲ್ಲುವವರಾಗುವಂತೆ ಮಾಡುವದಕ್ಕೂ ಅಧಿಕಾರವು ಕೊಡಲ್ಪಟ್ಟಿತು; ಅವನಿಗೆ ದೊಡ್ಡ ಕತ್ತಿಯು ಕೊಡಲ್ಪಟ್ಟಿತು. ಕೆಂಪು** ಎಂಬುದು ಗ್ರೀಕ್ ಭಾಷೆಯ πυρρός (*purros*) ಎಂಬ ಪದದ ಅನುವಾದವಾಗಿದ್ದು, ಅದು πῦρ (*pur*), "ಬೆಂಕಿ" ಎಂಬ ಪದಕ್ಕೆ ಸಂಬಂಧ ಪಟ್ಟದ್ದಾಗಿದೆ. CEVಯಲ್ಲಿ "ಅಗ್ನಿಯಂತೆ ಕೆಂಪು" ಎಂದಿರುತ್ತದೆ. **ಕೊಲ್ಲು** ಎಂಬುದು σφάζω (*sphazō*) ಕ್ರಿಯಾಪದದಿಂದ ಬಂದದ್ದಾಗಿದ್ದು, ಅದು 5:6, 9, 12ರಲ್ಲಿ "ಕೊಯ್ಯಲ್ಪಟ್ಟ" ಎಂದು ಸಹ ಅನುವಾದಿಸಲ್ಪಟ್ಟಿದೆ. CEVಯಲ್ಲಿ "ಜನರು ಒಬ್ಬರನ್ನೊಬ್ಬರು ಕೊಲ್ಲುವವರಾಗುವಂತೆ" ಎಂದಿರುತ್ತದೆ. **ಕತ್ತಿ** ಎಂಬುದು 1:16 ಮತ್ತು 2:12ರಲ್ಲಿ "ಕತ್ತಿ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದಕ್ಕಿಂತಲೂ ವ್ಯತ್ಯಾಸವಾದ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ. ಈ ಮುಂಚಿನ ವಾಕ್ಯಭಾಗಗಳಲ್ಲಿ, ῥομφαία (*rhomphaia*) ಎಂಬ ಪದವು ಬಳಸಲ್ಪಟ್ಟಿದೆ. ಇಲ್ಲಿ ಬಳಸಲಾಗಿರುವ ಗ್ರೀಕ್ ಪದವು μάχαιρα (*machaira*) ಎಂದಾಗಿದ್ದು, ಇದು ರೋಮನ್ ಸೈನ್ಯವು ಬಳಸುತ್ತಿದ್ದ ಯುದ್ಧದ ಖಡ್ಗವಾಗಿರುತ್ತದೆ. *Machaira* ಎಂಬುದು ಕೆಲವರು ಭಾವಿಸಿದ್ದಿರಬಹುದಾದ ಪ್ರಕಾರ, ಪ್ರಾಥಮಿಕವಾಗಿ ಒಂದು ಬಾಗಿರುವ ಅಲಗು ಹೊಂದಿರುತ್ತಿದ್ದ

ಯುದ್ಧಕ್ಕೆ ಬಳಸುವ ಕತ್ತಿಯಾಗಿರಲಿಲ್ಲ. ಈ ಕತ್ತಿಯು ಬೃಹತ್ತಾಕಾರದಲ್ಲಿದ್ದ ಕಾರಣದಿಂದಾಗಿ **ದೊಡ್ಡ** ಎಂದು ಕರೆಯಲ್ಪಟ್ಟಿರುವದಿಲ್ಲ; Pompeii ಎಂಬ ಸ್ಥಳದಲ್ಲಿ ಭಗ್ನಾವಶೇಷಗಳಲ್ಲಿ ಸಿಕ್ಕಿರುವ *machaira*ದ ನಿದರ್ಶನಗಳು ಕೇವಲ ಹತ್ತೊಂಭತ್ತು ಮತ್ತು ಒಂದೂವರೆ ಇಂಚುಗಳಷ್ಟು ಉದ್ದ ಹಾಗೂ ಎರಡು ಇಂಚು ಅಗಲವಾಗಿರುತ್ತವೆ. ಬದಲಾಗಿ, ಈ ಕತ್ತಿಯು ರೋಮನ್ ಸಾಮ್ರಾಜ್ಯದ ಮಿಲಿಟರಿ ಜಯಗಳಲ್ಲಿ ಒಂದು ಪ್ರಮುಖ ಕಾರಣಾಂಶವಾಗಿದ್ದರಿಂದಾಗಿ ಅದು "ದೊಡ್ಡ" ಎಂದು ಕರೆಯಲ್ಪಟ್ಟಿದೆ.

ಬಿಳಿ ಕುದುರೆಯ ಸವಾರನ ಗುರುತಿನ ವಿಷಯವಾಗಿ ಭಿನ್ನಾಭಿಪ್ರಾಯಗಳಿರಬಹುದು, ಆದರೆ ಎರಡನೆಯ ಸವಾರನಿಗೆ ಹೆಸರು ಕೊಡುವದರಲ್ಲಿ ಯಾವದೇ ಸಮಸ್ಯೆಯು ಇರಬೇಕಾಗಿರುವದಿಲ್ಲ; ರಕ್ತವರ್ಣದ ಕೆಂಪು ಕುದುರೆಯನ್ನು ಏರಿದ್ದನು, ಆತನು ಭೂಮಿಯ ಮೇಲಿನಿಂದ ಸಮಾಧಾನವನ್ನು ಓಡಿಸಿ ಬಿಟ್ಟನು, ಆತನು ಯಾವದೇ ಹಗೆತನವಿಲ್ಲದ ಮನುಷ್ಯರು ಒಬ್ಬರನ್ನೊಬ್ಬರು ಕೊಲ್ಲುವಂತೆ ಪ್ರಚೋದಿಸಿದನು, ಮತ್ತು ಆತನು ರೋಮನ್ ಸೈನ್ಯಗಳ ಅಧಿಪತಿಯಿಂದ ಪ್ರಸಿದ್ಧಗೊಳಿಸಲ್ಪಟ್ಟ ಭಯಾನಕವಾದ ಯುದ್ಧದ ಕತ್ತಿಯನ್ನು ಝುಳಪಿಸುತ್ತಿದ್ದನು. ಸವಾರನು ಕ್ರೂರನು ಹಾಗೂ ರಕ್ತಸಿಕ್ತ ಕುದುರೆ ಸವಾರನಾಗಿದ್ದು ದೇಶಗಳನ್ನು ನಾಶಗೊಳಿಸುತ್ತಿದ್ದನು, ಕುಟುಂಬದ ವಲಯಗಳಲ್ಲಿ ಒಂದು ಶೂನ್ಯ ಸ್ಥಳವನ್ನು ಬಿಟ್ಟು ಹೋಗುತ್ತಿದ್ದನು, ತಾಯಂದಿರ ಹೃದಯಗಳನ್ನು ಒಡೆಯುವವನು ಆಗಿದ್ದನು. ಈ ಸವಾರನು ಯುದ್ಧಕ್ಕೆ ಸಂಕೇತವಾಗಿದ್ದಾನೆ, ಸಹಸ್ರಾರು ಜನರನ್ನು - ಮಕ್ಕಳು ಮತ್ತು ಮುಗ್ಧರು ಸೇರಿದಂತೆ - ನಾಶಗೊಳಿಸುವವನು. ಮನುಷ್ಯರು **ಒಬ್ಬರನ್ನೊಬ್ಬರು** ಕೊಲ್ಲುವ ವಿಷಯವಾಗಿ ವಾಕ್ಯಭಾಗವು ಮಾತಾಡುತ್ತದಾದ್ದರಿಂದ, ಇಲ್ಲಿ ವಿಶೇಷವಾಗಿ ನಾಗರೀಕ ಯುದ್ಧವು ದೃಶ್ಯದಲ್ಲಿದೆ ಎಂದು ಕೆಲವರು ಭಾವಿಸುತ್ತಾರೆ. ನಾಗರೀಕ ಯುದ್ಧವು ಅತ್ಯಂಥ ಭಯಂಕರ ವಿಧವಾದ ಯುದ್ಧವಾಗಿರುತ್ತದೆ, ಇದರಲ್ಲಿ ಸಹೋದರನು ಮತ್ತೊಬ್ಬ ಸಹೋದರನ ವಿರುದ್ಧವಾಗಿ ವ್ಯೂಹ ರಚಿಸಿರುತ್ತಾನೆ.

## ಮೂರನೆಯ ಮುದ್ರೆ (6:5, 6)

**5ಆತನು ಮೂರನೆಯ ಮುದ್ರೆಯನ್ನು ಒಡೆದಾಗ ಮೂರನೆಯ ಜೀವಿಯು - ಬಾ ಅನ್ನುವದನ್ನು ಕೇಳಿದೆನು. ಆಗ ಇಗೋ, ಕಪ್ಪು ಕುದುರೆಯು ಕಾಣಿಸಿತು; ಅದರ ಮೇಲೆ ಕೂತಿದ್ದವನ ಕೈಯಲ್ಲಿ ತ್ರಾಸು ಇತ್ತು. 6ಆ ಮೇಲೆ ನಾಲ್ಕು ಜೀವಿಗಳ ಮಧ್ಯದಿಂದ ಒಬ್ಬನ ಧ್ವನಿಯು ಹೊರಟ ಹಾಗೆ ಕೇಳಿದೆನು. ಅದು - ರೂಪಾಯಿಗೆ ಒಂದು ಸೇರು ಗೋದಿ; ರೂಪಾಯಿಗೆ ಮೂರು ಸೇರು ಜವೆ ಗೋದಿ; ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಕೆಡಿಸಬೇಡ ಎಂದು ಹೇಳಿತು.**

**ವಚನ 5.** ಯುದ್ಧದಿಂದಾಗುವ ಒಂದು ತಪ್ಪಿಸಿಕೊಳ್ಳಲಾಗದ ಪರಿಣಾಮವೆಂದರೆ ಆರ್ಥಿಕ ಸಂಕಷ್ಟವಾಗಿದೆ. ಯುದ್ಧದಿಂದ ಛಿದ್ರಗೊಂಡಿರುವ ದೇಶಗಳಲ್ಲಿ ಜೀವಿಸಿರುವವರು ಈ ಹೇಳಿಕೆಯು ಎಷ್ಟು ಸತ್ಯದಿಂದ ಕೂಡಿದ್ದೆಂಬುದಕ್ಕೆ ಸಾಕ್ಷಿಯನ್ನು ಹೇಳಬಲ್ಲರು. ಖಂಡಿತವಾಗಿಯೂ, ಎಲ್ಲೋ ಒಂದು ಕಡೆಯಲ್ಲಿ ಯುದ್ಧವು ನಡೆಯುತ್ತಿದ್ದರೆ, ಒಂದು ದೇಶದ ಆರ್ಥಿಕ ಸ್ಥಿತಿಯು ತಾತ್ಕಾಲಿಕವಾಗಿ ಸುಧಾರಣೆಗೊಳ್ಳಬಹುದು, ಆಗ ಕೇಲವೇ ಕೆಲವು ಜನರು ಐಶ್ವರ್ಯವಂತರಾಗಬಹುದು. ಹೇಗೂ, ಅಂತಿಮವಾಗಿ, ಯುದ್ಧವು ದೇಶದ ಆಂತರೀಕ ಸಮಸ್ಯೆಯನ್ನು ಬಗೆಹರಿಸುವದರ ಬದಲಾಗಿ ಹಣ, ಸಮಯ, ಮತ್ತು ಪ್ರಯತ್ನಗಳನ್ನು ಬೇರೆ ಕಡೆಗೆ ಹರಿಯುವಂತೆ ಮಾಡುತ್ತದೆ - ಮತ್ತು ದೇಶವು ಬಾಧೆಗೊಳಗಾಗುತ್ತದೆ. ಆದುದರಿಂದ ಮೂರನೆಯ ಸವಾರನು ಕಳುಹಿಸಲ್ಪಟ್ಟನು; **ಆತನು ಮೂರನೆಯ ಮುದ್ರೆಯನ್ನು ಒಡೆದಾಗ**

**ಮೂರನೆಯ ಜೀವಿಯು - ಬಾ ಅನ್ನುವದನ್ನು ಕೇಳಿದೆನು. ಆಗ ಇಗೋ, ಕಪ್ಪು ಕುದುರೆಯು ಕಾಣಿಸಿತು; ಅದರ ಮೇಲೆ ಕೂತಿದ್ದವನ ಕೈಯಲ್ಲಿ ತ್ರಾಸು ಇತ್ತು** (ವ. 1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಶಾಸ್ತ್ರಗಳಲ್ಲಿ, **ಕಪ್ಪು** ಬಣ್ಣವು ಸಾಮಾನ್ಯವಾಗಿ ದುಃಖ ಮತ್ತು ಗೋಳಾಟಗಳೊಂದಿಗೆ ಸಂಬಂಧಗೊಳಿಸಲ್ಪಟ್ಟಿ ರುತ್ತದೆ (ನೋಡಿರಿ ಯೆಶಾಯ 50:3; ಯೆರೆಮೀಯ 4:28; 14:2; KJV). ಈ ಬಣ್ಣವು ಕೆಲವು ಸಾರಿ ಆಹಾರದ ಕ್ಷಾಮದೊಂದಿಗೆ ಜೋಡಿಸಲ್ಪಟ್ಟಿರುತ್ತದೆ (ಯೆರೆಮೀಯ 14:1, 2; ಪ್ರಲಾಪಗಳು 5:10; KJV), ಈ ವಾಕ್ಯಭಾಗದಲ್ಲಿಯೂ ಅದೇ ರೀತಿಯಲ್ಲಿರುತ್ತದೆ.

ಈ ಸವಾರನು ಒಬ್ಬ ಕುದುರೆ ಸವಾರನಿಗೆ ಅಸಹಜವಾಗಿದ್ದಂಥ ಒಂದು ಸಾಧನವನ್ನು ಹೊಡಿದುಕೊಂಡಿದ್ದನು: ಮೊದಲನೆಯ ಸವಾರನು ಬಿಲ್ಲನ್ನು ಮತ್ತು ಎರಡನೆಯ ಸವಾರನು ಕತ್ತಿಯನ್ನು ಹಿಡಿದುಕೊಂಡಿದ್ದರು, ಆದರೆ ಈ ಕುದುರೆ ಸವಾರನು **ಕೈಯಲ್ಲಿ ತ್ರಾಸು** ಹಿಡಿದುಕೊಂಡಿದ್ದನು – ಬಹುಶಃ ಉಲ್ಲೇಖಿಸಲಾಗಿರುವ ಧಾನ್ಯಗಳನ್ನು ಅಳೆದು ಕೊಡುವದಕ್ಕೆ ಇರಬಹುದೆಂದು ಕಾಣಿಸುತ್ತದೆ. ಒಬ್ಬನ ಆಹಾರವನ್ನು ಅಳೆದು ಕೊಡಬೇಕಾದ ಅವಶ್ಯಕತೆಯು ಮಿತವಾದ ಆಹಾರವೊಂದನ್ನು ಸೂಚಿಸುತ್ತದೆ (ನೋಡಿರಿ ಯಾಜಕಕಾಂಡ 26:26; ಯೆಹೆಜ್ಕೇಲ 4:16). ಕನಿಷ್ಠ ಸರಾಸರಿ ಮನುಷ್ಯನು *ಖರೀದಿಸಲು ಶಕ್ತವಾಗಿದ್ದ* ಆಹಾರವು ಮಿತವಾಗಿತ್ತು – ಅದು ಈ ಹೇಳಿಕೆಯಿಂದ ಸ್ಪಷ್ಟಗೊಳ್ಳುತ್ತದೆ "ರೂಪಾಯಿಗೆ ಒಂದು ಸೇರು ಗೋದಿ; ರೂಪಾಯಿಗೆ ಮೂರು ಸೇರು ಜವೆಗೋದಿ (ವ. 6)."

**ವಚನ 6. ಆ ಮೇಲೆ ನಾಲ್ಕು ಜೀವಿಗಳ ಮಧ್ಯದಿಂದ ಒಬ್ಬನ ಧ್ವನಿಯು ಹೊರಟ ಹಾಗೆ ಕೇಳಿದೆನು. ಅದು - ರೂಪಾಯಿಗೆ ಒಂದು ಸೇರು ಗೋದಿ; ರೂಪಾಯಿಗೆ ಮೂರು ಸೇರು ಜವೆ ಗೋದಿ; ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಕೆಡಿಸಬೇಡ ಎಂದು ಹೇಳಿತು.** ಯೋಹಾನನು ಕೇಳಿಸಿಕೊಂಡ ಆ ಮಾತಾಡುವ ವ್ಯಕ್ತಿಯು ಯಾರೆಂಬುದು ಗುರುತಿಸಲ್ಪಟ್ಟಿರುವದಿಲ್ಲ. ಅದು ದೇವರೇ ಆಗಿರಬಹುದು, ಆದರೆ ಆ ಜೀವಿಗಳಲ್ಲೊಂದು ಮಾತಾಡಿರುವ ಸಾಧ್ಯತೆಯು ಅಧಿಕವಾಗಿರುತ್ತದೆ.

**ಸೇರು** ("ಅಳತೆ"; KJV) ಎಂದು ಅನುವಾದಿಸಲ್ಪಟ್ಟಿರುವ χοῖνιξ (*choinix*) ಎಂಬ ಗ್ರೀಕ್ ಪದವನ್ನು ನಿಖರವಾಗಿ ಅನುವಾದಿಸುವದು ಕಠಿಣವಾಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿದ್ದ ಅಳತೆಗಳು ಅನೇಕ ಸಾರಿ ಈ ದಿನಗಳಲ್ಲಿರುವ ಅಳತೆಗಳಂತೆಯೇ ಇರಲಿಲ್ಲ, ಮತ್ತು ಆಧುನಿಕ ಕಾಲದ ಅಳತೆಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ವ್ಯತ್ಯಾಸವಾಗಿರುತ್ತವೆ. ಉದಾಹರಣೆಗೆ, ಬ್ರಿಟಿಷ್ ಸಾಮ್ರಾಜ್ಯದ ಸೇರು ಮತ್ತು ಅಮೆರಿಕದ ಸೇರು ಒಂದೇ ರೀತಿಯಾಗಿರುವದಿಲ್ಲ. ಹಾಗಿದ್ದರೂ, ನೀವು ವಾಸಿಸುವ ದೇಶದ ಸೇರನ್ನು ಯೋಚಿಸಿಕೊಂಡರೆ ನಿಮಗೆ ಅಳತೆಯ ಗಾತ್ರದ ಕುರಿತು ಒಂದು ಅಂದಾಜು ಉಪಾಯವು ಹೊಳೆಯುತ್ತದೆ.

**ದಿನಾರಿಯಸ್** (ಪಾವಲಿ) ಎಂಬುದು ಗ್ರೀಕ್ ಭಾಷೆಯ δηνάριον (*dēnarion*) ಎಂಬ ಪದದ ಲಿಪ್ಯಂತರಣವಾಗಿದೆ. NIVಯಲ್ಲಿ "ಒಂದು ದಿನದ ಕೂಲಿ" ಎಂದು ಇರುತ್ತದೆ. ಪಾವಲಿಯು ಸಾಮಾನ್ಯ ಕೂಲಿಕಾರನಿಗೆ ಕೊಡಲಾಗುತ್ತಿದ್ದ ದಿನದ ಕೂಲಿಯಾಗಿರುತ್ತಿತ್ತು (ನೋಡಿರಿ ಮತ್ತಾಯ 20:2). ಆದದರಿಂದ, ಒಂದು ಸೇರು **ಗೋದಿ**ಯು "ಒಬ್ಬ ವ್ಯಕ್ತಿಯ ಹಸಿವೆಯನ್ನು ಒಂದು ದಿನಕ್ಕಾಗಿ ತೃಪ್ತಿಗೊಳಿಸುವದಕ್ಕಾಗುವಷ್ಟು"[6] ಆಗಿರುತ್ತಿತ್ತು. ಬಣ್ಣಿಸಲ್ಪಟ್ಟಿರುವಂತಹ ಕಷ್ಟಕರ ಸಮಯಗಳಲ್ಲಿ, ಒಬ್ಬ ಕೆಲಸಗಾರನು ತನಗೆ ಆಹಾರವನ್ನು ಒದಗಿಸಿಕೊಳ್ಳುವದಕ್ಕಾಗುವಷ್ಟು – ಆತನ ಕುಟುಂಬಕ್ಕೆ ಏನೂ ಉಳಿಯದ ರೀತಿಯಲ್ಲಿ –

ಗೋದಿಯನ್ನು ಕೊಂಡುಕೊಳ್ಳಲು ಆಗತ್ಯವಿರುತ್ತಿದ್ದ ಕೂಲಿಯನ್ನು ಮಾತ್ರವೇ ಸಂಪಾದಿಸಿಕೊಳ್ಳಲು ಶಕ್ತನಾಗುತ್ತಿದ್ದನು. ಒಬ್ಬ ವ್ಯಕ್ತಿಯು ಪೋಷಣೆ ಅಗತ್ಯವಿರುವ ಕುಟುಂಬಗಳನ್ನು ಹೊಂದಿದ್ದರೆ, ಆತನು **ಜವೆ ಗೋದಿ**ಯನ್ನು ಖರೀದಿಸಿಕೊಳ್ಳಬೇಕಾಗುತ್ತಿತ್ತು. ಜವೆ ಗೋದಿಯು ಆಮಾನ್ಯವಾಗಿ ಪ್ರಾಣಿಗಳು ಅಥವಾ ಪ್ರಾಣಿಗಳಂತೆ ಜೀವಿಸುವ ಅನಿವಾರ್ಯತೆಯನ್ನು ಹೊಂದಿದವರು ಮಾತ್ರವೇ ತಿನ್ನುವದಕ್ಕೆ ಯೋಗ್ಯವೆಂದು ಪರಿಗಣಿಸಲ್ಪಟ್ಟಿದ್ದ ಕಳಪೆ ದರ್ಜೆಯ ಧಾನ್ಯವಾಗಿತ್ತು. ಹೇಗೂ, ಅದು ಅಗ್ಗವಾಗಿ ದೊರಕುತ್ತಿದ್ದ ಧಾನ್ಯವಾಗಿತ್ತು: **ರೂಪಾಯಿಗೆ ಮೂರು ಸೇರು.** ಯೇಸುವು ಜನಸಮೂಹಗಳಿಗೆ ಊಟವನ್ನು ತಿನ್ನಿಸಿದ ವೇಳೆ, ಆತನು ಜವೆ ಗೋದಿಯಿಂದ ತಯಾರಿಸಿದ ರೊಟ್ಟಿಗಳುಳ್ಳ ಬಾಲಕನ ಊಟವನ್ನು ಬಳಸಿದನು (ಯೋಹಾನ 6:9) - ಅದು ಬಾಲಕನ ಕುಟುಂಬದವರ ಆರ್ಥಿಕ ಸ್ಥಿತಿಯ ಕುರಿತು ತಿಳಿಸುವದಾಗಿದೆ. ಪ್ರಾಚೀನ ಲೇಖಕರ ಪ್ರಕಾರವಾಗಿ, 6ನೇ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿರುವ ಬೆಲೆಗಳು ಗೋದಿ ಮತ್ತು ಜವೆ ಗೋದಿಗಳ ಸಾಮಾನ್ಯ ಬೆಲೆಗಳಿಗಿಂತ ಆರು ಪಟ್ಟು ಹೆಚ್ಚಾಗಿರುತ್ತವೆ. ಇಲ್ಲಿ ಲಂಗುಲಗಮಿಲ್ಲದ ಹಣದುಬ್ಬರದ ಒಂದು ಚಿತ್ರಣವು ಇರುತ್ತದೆ.

ಇತರ ಅತ್ಯಾವಶ್ಯಕ ಆಹಾರ ಪದಾರ್ಥಗಳ ವಿಷಯವೇನು, ಉದಾಹರಣೆಗೆ ಒಲೀವ್ ಎಣ್ಣೆ ಮತ್ತು ದ್ರಾಕ್ಷಾರಸ? ಸಾಮಾನ್ಯ ನಾಗರಿಕರಿಗೆ ಇವುಗಳನ್ನು ಖರೀದಿಸುವ ಶಕ್ತಿಯಿರುತ್ತಿರಲಿಲ್ಲ - ಅದು ಬಹುಶಃ **ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಕೆಡಿಸಬೇಡ** ಎಂಬ ಗೂಢ ಆಜ್ಞೆಗೆ ಮಹತ್ವಪೂರ್ಣವಾಗಿತ್ತೆಂದು ಕಾಣಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, "ಎಣ್ಣೆ ಮತ್ತು ದ್ರಾಕ್ಷಾರಸಗಳ ಮೇಲೆ ಕೈ ಯಿಡಬೇಡ - ಅವುಗಳು ನಿನ್ನ ಆಯವ್ಯಯದೊಳಗೆ ಅದು ಸರಿ ಹೊಂದುವದಿಲ್ಲ!" ಕೆಲವರು ದರ್ಶನದ ಈ ಭಾಗವು, ಧಾನ್ಯದ ಕೊರತೆಯು ಇದ್ದಾಗ್ಯೂ, ಅದೇ ವೇಳೆಯಲ್ಲಿ ಎಣ್ಣೆ ಮತ್ತು ದ್ರಾಕ್ಷಾರಸಗಳು ಸಮೃದ್ಧವಾಗಿ ಲಭ್ಯವಿರುವದನ್ನು ಬಣ್ಣಿಸುತ್ತದೆಂದು ಯೋಚಿಸುತ್ತಾರೆ. Eugene Petersonನು ಇದನ್ನು ಈ ವಿಧವಾಗಿ ಭಾವಾನುವಾದ ಮಾಡಿರುತ್ತಾನೆ: "ಆದರೆ ಎಷ್ಟು ಬೇಕೋ ಅಷ್ಟು ಎಣ್ಣೆ ಮತ್ತು ದ್ರಾಕ್ಷಾರಸಗಳನ್ನು [ನೀನು ತೆಗೆದುಕೊಳ್ಳಬಹುದು]."[7]

ಮೂರನೆಯ ಕುದುರೆ ಸವಾರನು ಭೂಮಿಯಲ್ಲೆಲ್ಲಾ ಗುಡುಗಿದಾಗ, ಒಬ್ಬ ಸಾಮಾನ್ಯ ಕೆಲಸಗಾರನು ತನ್ನ ಕುಟುಂಬಕ್ಕೆ ಆಹಾರವನ್ನು ಒದಗಿಸುವದಕ್ಕಾಗಿ ಸೂರ್ಯೋದಯದಿಂದ ಆರಂಭಿಸಿ ಸೂರ್ಯಾಸ್ತಮದ ತನಕ ದುಡಿಯಬೇಕಿತ್ತು, ಬಟ್ಟೆ, ಮನೆ, ಅಥವಾ ಜೀವನದ ಇತರೆ ಅವಶ್ಯಕತೆಗಳಿಗಾದರೋ ಏನೂ ಉಳಿಯುತ್ತಿರಲಿಲ್ಲ. ಆತನ ಈ ಅವಸ್ಥೆಯು ಎಂಥದ್ದಾಗಿತ್ತೆಂಬುದನ್ನು ತಿಳಿಯಬೇಕಾದರೆ, ನಿಮ್ಮ ಸಂಬಳ ಯಥಾಃರೀತಿಯಿದ್ದು ದಿನಸಿ ವಸ್ತುಗಳು ಮತ್ತು ಇತರೆ ಪದಾರ್ಥಗಳ ಬೆಲೆಯು ಹದಿನಾರು ಪಟ್ಟು ಹೆಚ್ಚಾಗುವಾಗ ಹೇಗಿರುತ್ತದೆಂಬುದನ್ನು ಊಹಿಸಿಕೊಳ್ಳಿರಿ.

## ನಾಲ್ಕನೆಯ ಮುದ್ರೆ (6:7, 8)

**[7]ಆತನು ನಾಲ್ಕನೆಯ ಮುದ್ರೆಯನ್ನು ಒಡೆದಾಗ ನಾಲ್ಕನೆಯ ಜೀವಿಯು ಬಾ ಅನ್ನುವ ಶಬ್ದವನ್ನು ಕೇಳಿದೆನು. [8]ಆಗ ಇಗೋ, ಬೂದಿಬಣ್ಣದ ಕುದುರೆಯು ಕಾಣಿಸಿತು. ಅದರ ಮೇಲೆ ಕೂತಿದ್ದವನ ಹೆಸರು ಮೃತ್ಯುವು; ಅವನ ಹಿಂದೆ ಪಾತಾಳವೆಂಬವನು ಬಂದನು. ಅವರಿಗೆ ಭೂಮಿಯ ಕಾಲುಭಾಗದಲ್ಲಿ ಕತ್ತಿಯಿಂದಲೂ ಬರದಿಂದಲೂ ಅಂಟುರೋಗದಿಂದಲೂ ಕಾಡುಮೃಗಗಳಿಂದಲೂ ಕೊಲ್ಲುವದಕ್ಕೆ ಅಧಿಕಾರವು ಕೊಡಲ್ಪಟ್ಟಿತು.**

**ವಚನ 7.** ನಾವು ಇನ್ನೂ ಯುದ್ಧದ ನಂತರ ಪರಿಸ್ಥಿತಿಗಳ ಕುರಿತು ನೋಡುತ್ತಿದ್ದೇವೆ. ನಾಲ್ಕನೆಯ ಕುದುರೆ ಸವಾರನು ಬರಲಿದ್ದನು, ಆತನು ಬೂದಿ ಬಣ್ಣದ ಕುದುರೆಯ ಮೇಲಿರುವ ಭಯಾನಕ ಸವಾರನಾಗಿದ್ದನು. **ಆತನು ನಾಲ್ಕನೆಯ ಮುದ್ರೆಯನ್ನು ಒಡೆದಾಗ ನಾಲ್ಕನೆಯ ಜೀವಿಯು ಬಾ ಅನ್ನುವ ಶಬ್ದವನ್ನು ಕೇಳಿದೆನು** (ವ. 1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 8.** ಯೋಹಾನನು ನೋಡಿದಾಗ ಇಗೋ, **ಬೂದಿಬಣ್ಣದ ಕುದುರೆಯು ಕಾಣಿಸಿತು. ಅದರ ಮೇಲೆ ಕೂತಿದ್ದವನ ಹೆಸರು ಮೃತ್ಯುವು; ಅವನ ಹಿಂದೆ ಪಾತಾಳವೆಂಬವನು ಬಂದನು. ಅವರಿಗೆ ಭೂಮಿಯ ಕಾಲುಭಾಗದಲ್ಲಿ ಕತ್ತಿಯಿಂದಲೂ ಬರದಿಂದಲೂ ಅಂಟುರೋಗದಿಂದಲೂ ಕಾಡುಮೃಗಗಳಿಂದಲೂ ಕೊಲ್ಲುವದಕ್ಕೆ ಅಧಿಕಾರವು ಕೊಡಲ್ಪಟ್ಟಿತು.** ನಾಲ್ಕನೆಯ ಸವಾರನ ಕುದುರೆಯು ಒಂದು ಭಯಾನಕ ಬಣ್ಣದ್ದಾಗಿತ್ತು. **ಬೂದಿಬಣ್ಣ** ("ಮಂಕಾದ ಬಣ್ಣದ"; KJV) ಎಂಬುದನ್ನು ಅನುವಾದಿಸಿರುವ *χλωρός* (*chlōros*) ಎಂಬದಾಗಿದ್ದು ಇದು "ಹಸಿರು" ಎಂಬುದಕ್ಕೆ ಬಳಸಲ್ಪಡುವ ಗ್ರೀಕ್ ಪದವಾಗಿದೆ. ಈ ಕುದುರೆಯು "ಮಂಕಾದ ಹಸಿರು ಬಣ್ಣ" ದ (NRSV), ಬಹುಕಾಲದಿಂದ ಮೃತವಾಗಿರುವ ಭೀಕರ ಚರ್ಮದ ವರ್ಣವಾಗಿದೆ.

ಹಸಿರು ಬಣ್ಣದ ಕುದುರೆಯ ಮೇಲಿದ್ದ ಮಂಕಾದ ಸವಾರನು **ಮೃತ್ಯು** ಆಗಿದ್ದನು, ಆತನ ಕೆಲಸವು ಇತರ ಮೂವರು ಸವಾರರು ಹಿಂದಕ್ಕೆ ಬಿಟ್ಟು ಹೋಗಿದ್ದ ಕರಾಳವಾದ ಪೈರನ್ನು ಶೇಖರಣೆ ಮಾಡುವದಾಗಿತ್ತು. ಮೃತ್ಯುವಿಗೆ ಸಮೀಪದಲ್ಲಿಯೇ ಹಿಂಬಾಲಿಸುತ್ತಿದ್ದದ್ದೆಂದರೆ **ಪಾತಾಳ**, ಅದು ದೇಹವನ್ನು ಕಳಚಿಕೊಂಡ ಆತ್ಮಗಳ ನಿವಾಸ ಸ್ಥಾನವಾಗಿದೆ (1:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪಾತಾಳವನ್ನು "ಐದನೆಯ ಕುದುರೆ ಸವಾರನು" ಅಥವಾ ಒಂದು ಪ್ರತ್ಯೇಕ ಘಟಕವೆಂದು ಯೋಚಿಸದಿರಿ. ಪ್ರಕಟನೆ ಪುಸ್ತಕದಲ್ಲಿ, ಪಾತಾಳವು ಯಾವಾಗಲೂ ಮರಣದ ಜೊತೆಯಾಗಿರುತ್ತದೆ (1:18; 20:13, 14). ಇವೆರಡೂ ಜೊತೆಜೊತೆಯಾಗಿ ಕೆಲಸ ಮಾಡುತ್ತವೆ, ಮರಣವು ದೇಹದ ಮೇಲೆ ಹಕ್ಕು ಸಾಧಿಸಿದರೆ, ಪಾತಾಳವು ಆತ್ಮದ ಮೇಲೆ ಹಕ್ಕು ಸಾಧಿಸುತ್ತದೆ (20:13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಮರಣವನ್ನು ಅನೇಕ ಸಾರಿ ಬುರುಡೆ ಮುಖವಿದ್ದು ಕುಂಚಿಗೆಯನ್ನು ತೊಟ್ಟಿರುವ ಸವಾರನಂತೆ ಚಿತ್ರಿಸಲ್ಪಟ್ಟಿರುತ್ತದೆ. ಪಾತಾಳವನ್ನು ಒಂದು ತೆರೆದಿರುವ ಸಮಾಧಿ ಅಥವಾ "ಕುಂಟುತ್ತಾ ಮತ್ತು ತನ್ನ ತಿರುಚಿಕೊಂಡಿರುವ ಕಾಲೊಂದನ್ನು ಎಳೆಯುತ್ತಾ"[8] ಜೊತೆಯಲ್ಲಿ ಎಡವುತ್ತಾ ಬರುತ್ತಿರುವ ಪಿಶಾಚಿತಂಥ ಜೀವಿಯಾಗಿ ಬಣ್ಣಿಸಲ್ಪಟ್ಟಿರುತ್ತದೆ. ಅಲ್ಲದೆ ಪಾತಾಳವನ್ನು ಮಂಕಾದ ಸವಾರನಿಂದ ಬಾಚಿ ಹಾಕುವವರೆಲ್ಲರನ್ನೂ ನುಂಗುತ್ತಾ ಮರಣದ ಹತ್ತಿರದಲ್ಲಿ ಹಿಂಬಾಲಿಸುತ್ತಾ ಬರುತ್ತಿರುವ ಅಶುಭಕರವಾದ ಕಪ್ಪು ಬಣ್ಣದ ಮೋಡದಂತೆ, ಪ್ರತಿ ಕ್ಷಣದಲ್ಲಿ ಹೆಚ್ಚೆಚ್ಚು ದೊಡ್ಡದಾಗುತ್ತಾ ಸಾಗುವ ಸುಂಟರಗಾಳಿಯಂತೆ ಸುತ್ತುತ್ತಿರುವ ಇಬ್ಬನಿಯಂತೆ ಸಹ ಕಾಣಬಹುದು. ಇವೆರಡರ ಕಾಣಿಸಿಕೊಳ್ಳುವಿಕೆಯು ಒಂದು ಭಯವನ್ನುಂಟು ಮಾಡುವ ಜೋಡಿಯಂತಿರುತ್ತದೆ.

ಮೊದಲ ಮೂರು ಸವಾರರಿಂದ ಹಿಂದಕ್ಕೆ ಬಿಟ್ಟು ಹೋದ ಫಸಲನ್ನು ಕೊಯ್ಯುವದರ ಜೊತೆಯಲ್ಲಿ, ಮೃತ್ಯು ಮತ್ತು ಪಾತಾಳಗಳಿಗೆ **ಕತ್ತಿಯಿಂದಲೂ ಬರದಿಂದಲೂ ಅಂಟುರೋಗದಿಂದಲೂ ಕಾಡುಮೃಗಗಳಿಂದಲೂ ಕೊಲ್ಲುವಂತೆ** ಹೇಳಲಾಯಿತು. **ಕೊಲ್ಲು** ಎಂಬುದನ್ನು ಅನುವಾದಿಸಿರುವ ἀποκτείνω (*apokteinō*) ಎಂಬ ಗ್ರೀಕ್ ಪದವು 4ನೇ ವಚನದಲ್ಲಿ "ಕೊಲ್ಲು" ಎಂಬ ಪದದ ರೀತಿಯಲ್ಲಿಯೇ ಆಗಿರುವದಿಲ್ಲ. ಈ ಪದವನ್ನು ಬಳಸುವದಕ್ಕೆ ಆಯ್ಕೆ ಮಾಡಿಕೊಂಡಿರುವದು ತೋರಿಸುವದೇನೆಂದರೆ ಈ ಮರಣಗಳು ಕ್ರೈಸ್ತರಿಗಾಗುವ ನಿರ್ದಿಷ್ಟವಾದ ಹಿಂಸೆಯ ಫಲಿತಗಳಂತೆಯೇ ಆಗಿರುವದಿಲ್ಲ, ಯಾಕೆಂದರೆ

ಇವುಗಳು ಮಾನವರನ್ನು ಸಾಮಾನ್ಯವಾಗಿ ನಡಿಸಿಕೊಳ್ಳುವ ಕೆಟ್ಟ ರೀತಿಯಾಗಿರುತ್ತವೆ. **ಕತ್ತಿ** ಎಂಬುದನ್ನು ಅನುವಾದಿಸಿರುವ ῥομφαία (*rhomphaia*) ಎಂಬ ಗ್ರೀಕ್ ಪದವು ಮತ್ತು 4ನೇ ವಚನದಲ್ಲಿರುವ "ಕತ್ತಿ" ಎಂಬುದನ್ನು ಅನುವಾದಿಸಿರುವ ಪದವು ಒಂದೇ ಆಗಿರುವದಿಲ್ಲ (ವ. 4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). *Rhomphaia* ಕತ್ತಿಯು ಬೃಹತ್ತಾಕಾರದ ಯುದ್ಧ ಕತ್ತಿಯಾಗಿತ್ತು (1:16; 2:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ಅಂಟುರೋಗ** ಎಂಬುದನ್ನು ಅನುವಾದಿಸಿರುವ θάνατος (*thanatos*) ಎಂಬ ಗ್ರೀಕ್ ಪದವು, "ಮರಣ" (ನೋಡಿರಿ KJV) ಎಂಬುದಕ್ಕಾಗಿರುವ ಪದವಷ್ಟೆ ಆಗಿದೆ. "ಮರಣ" ಎಂಬ ಪದವು ಅನೇಕ ಸಾರಿ ಬೃಹತ್ ಸಂಖ್ಯೆಯಲ್ಲಿ ಮಾನವರನ್ನು ಕೊಲ್ಲುತ್ತಿದ್ದ ಸಾಂಕ್ರಾಮಿಕ ರೋಗಗಳನ್ನು ಕರೆಯುವದಕ್ಕೆ ಪ್ರಾಚೀನ ಜನರು ಬಳಸುತ್ತಿದ್ದ ಪದವಾಗಿತ್ತು: ಕಪ್ಪು ಮರಣ (ಗೆಡ್ಡೆ ಪ್ಲೇಗು), ಕೆಂಪು ಮರಣ (ಸ್ಮಾಲ್ ಪಾಕ್ಸ್; ಸಿಡುಬು), ಬಿಳಿ ಮರಣ (ಕ್ಷಯರೋಗ). 8ನೇ ವಚನವು ಈಗಾಗಲೇ "ಮೃತ್ಯು" ಮತ್ತು "ಕೊಲ್ಲು" ಎಂಬ ಪದಗಳನ್ನು ಬಳಸಿರುತ್ತದಾದ್ದರಿಂದ, "ಮರಣ" ಎಂಬ ಪದವು ಬಹುಶಃ ವಿವಿಧ ಅಂಟುರೋಗಗಳನ್ನು ಸೂಚಿಸುತ್ತಿರಬಹುದಾಗಿದೆ. ಇವುಗಳ ಜೊತೆಯಲ್ಲಿ **ಕಾಡುಮೃಗಗಳಿಂದ** ಉಂಟಾಗುವ ಅಪಾಯವು ಸೇರಿತ್ತು. ಪ್ರಾಚೀನ ಪಟ್ಟಣಗಳು ನಾಶಗೊಳಿಸಲ್ಪಡುವ ವೇಳೆಯಲ್ಲಿ, ಕಾಡುಮೃಗಗಳು ಅಧಿಕಗೊಂಡು ಆ ಪ್ರಾಂತ್ಯವನ್ನು ಆಕ್ರಮಿಸಿಕೊಳ್ಳುತ್ತಿದ್ದವು (ಯೆರೆಮೀಯ 9:11; 10:22; 49:33; 50:39). ಕದನವು ನಿಂತು ಹೋಗುವಾಗ ಯುದ್ಧ ದುಷ್ಪರಿಣಾಮಗಳು ಮುಗಿದು ಹೋಗುವದಿಲ್ಲ. ಕಾದಾಟದಲ್ಲಿ ಸತ್ತವರಿಗಿಂತಲೂ ಯುದ್ಧದಲ್ಲಿ ಕೊನೆಯ ಗುಂಡು ಹಾರಿಸಲ್ಪಟ್ಟಾದ ಬಳಿಕ ಹೆಚ್ಚೆಚ್ಚು ಜನರು ಸಾಯುವದು ಸರ್ವಸಾಧಾರಣವಾಗಿರುತ್ತದೆ-ಯಾಕೆಂದರೆ ರೋಗ, ಹಸಿವೆ, ಮತ್ತು ಹಿಂಸಾಚಾರಗಳು ಯುದ್ಧದಿಂದ ಛಿದ್ರಗೊಂಡಿರುವ ದೇಶವನ್ನು ಬಾಧಿಸುತ್ತವೆ. **ಭೂಮಿಯ ಕಾಲುಭಾಗ** ಎಂಬ ಪದಗುಚ್ಛವು ಜೀವಿಸುವವರೊಳಗಿನ ಮಹತ್ವಪೂರ್ಣವಾದ ಪಾಲನ್ನು ಸೂಚಿಸುತ್ತದೆ.

ಬಹುಶಃ ಇದು ಮಹತ್ವಪೂರ್ಣವಾದದ್ದು ಯಾಕೆಂದರೆ ಮರಣದ ನಾಲ್ಕು ಪ್ರತಿನಿಧಿಗಳು ಮತ್ತು ದೇವರು ಯೆರೂಸಲೇಮ್ ಪಟ್ಟಣವನ್ನು ಆಕೆಯ ಪಾಪಗಳಿಗೋಸ್ಕರ ದಂಡಿಸುವದಕ್ಕೆ ಬಳಸಿದಿ ಪ್ರತಿನಿಧಿಗಳು ಒಂದೇ ಆಗಿದ್ದರು. ಯೆಹೆಜ್ಕೇಲ 14ರಲ್ಲಿ ಕರ್ತನು ಪ್ರವಾದಿಗೆ ತಾನು "ಖಡ್ಗ ಕ್ಷಾಮ ದುಷ್ಟಮೃಗ ವ್ಯಾಧಿ ಎಂಬೀ ನಾಲ್ಕು ಬಾಧೆಗಳನ್ನು ಯೆರೂಸಲೇಮಿನ ಮೇಲೆ ಒಟ್ಟಿಗೆ" ತರುವೆನೆಂದು ಹೇಳಿದನು (ಯೆಹೆಜ್ಕೇಲ 14:21). ಪಾಪವು ಅಂತರ್ಗತವಾದ ದುಷ್ಪರಿಣಾಮಗಳನ್ನು ಹೊಂದಿರುತ್ತದೆ. "ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯುವನು" (ಗಲಾತ್ಯ 6:7). ಒಂದು ದೇಶದ ವಿಷಯದಲ್ಲಿಯೂ ಅದು ಅಷ್ಟೇ ಸತ್ಯವಾಗಿರುತ್ತದೆ.

*ನಾಲ್ಕು ಕುದುರೆ ಸವಾರರು ಏನನ್ನು ಪ್ರತಿನಿಧಿಸುತ್ತಾರೆ?* ನಾವು ವಾಕ್ಯಭಾಗದ ಕುರಿತು ಕ್ಲುಪ್ತವಾಗಿ ಕಲಿತಿದ್ದೇವೆ, ಆದರೆ ನಾಲ್ಕು ಕುದುರೆ ಸವಾರರ ಕುರಿತು ಒಂದು ಸಾಮಾನ್ಯವಾದ ಚರ್ಚೆಯು ಸೂಕ್ತವಾಗಿರುತ್ತದೆ. ಸ್ಪಷ್ಟವಾಗಿರುವಂತೆ, ನಾಲ್ಕು ಸವಾರರು ಸಮಸ್ಯೆಯನ್ನು ದೊಡ್ಡದಾಗಿ ಪ್ರತಿನಿಧಿಸುತ್ತಾರೆ, ಆದರೆ ಸವಾರರು ಮತ್ತು ದೇವರ ಯೋಜನೆಯಲ್ಲಿ ಅವರ ಪಾತ್ರದ ಕುರಿತಾಗಿ ಒಬ್ಬನು ಹೆಚ್ಚು ನಿರ್ದಿಷ್ಟವಾಗಿ ಹೇಳಲು ಸಾಧ್ಯವೋ?

ನಾಲ್ಕು ಮುದ್ರೆಗಳ ಉದ್ದೇಶವು ರೋಮನ್ ಸಾಮ್ರಾಜ್ಯವನ್ನು ದಂಡಿಸುವದಕ್ಕೆ ದೇವರು ಮಾಡಿರುವ ಯೋಜನೆಯನ್ನು ಪ್ರಕಟಗೊಳಿಸುವದಾಗಿತ್ತೆಂದು ಕೆಲವರು ನಂಬುತ್ತಾರೆ. ಏಳು ತುತೂರಿಗಳು ಮತ್ತು ಏಳು ಪಾತ್ರೆಗಳ ಘಟನಾವಳಿಗಳಲ್ಲಿ, ರೋಮನ್ ಸಾಮ್ರಾಜ್ಯಕ್ಕೆ

ಎಚ್ಚರಿಸಲು ಮತ್ತು ಬಳಿಕ ದಂಡಿಸುವದಕ್ಕೆ ಅದೇ ರೀತಿಯ ವಿನಾಶತೆಗಳನ್ನು ಬಳಸಲಾಗಿರುತ್ತದೆ. ದುಷ್ಟತ್ವಕ್ಕೆ ದಂಡನೆಯಾಗುವದು ಕೈಬಿಡಲ್ಪಟ್ಟಿರುವದಿಲ್ಲವಾದರೂ, ದಂಡನೆಯೇ ದರ್ಶನದ ಪ್ರಮುಖ ಒತ್ತು ಆಗಿರಲಿಲ್ಲ ಎಂಬುದನ್ನು ಮೂರು ಕಾರಣಾಂಶಗಳು ಸೂಚಿಸುತ್ತವೆ: (1) ಪ್ರಕಟಗೊಳಿಸಲ್ಪಟ್ಟಿರುವ ವಿನಾಶತೆಗಳು ಕುದುರೆ ಸವಾರರ ದಾರಿಯಲ್ಲಿ ಸಿಕ್ಕುವಂಥ, ರೋಮನ್ನರಾಗಿರಬಹುದು ಅಥವಾ ಕ್ರೈಸ್ತರಾಗಿರಬಹುದು, ಎಲ್ಲರೂ ಅನುಭವಿಸಿದ ಜಾಗತಿಕ ವಿನಾಶತೆಗಳಾಗಿರುತ್ತವೆ. "ನಾಲ್ಕು" ಎಂಬುದು ಬ್ರಹ್ಮಾಂಡ ಸಂಖ್ಯೆಯಾಗಿದೆ, ಮಾನವರ ಸಂಖ್ಯೆಯಾಗಿದೆ ಎಂಬುದನ್ನು ನೆನಪಿಸಿಕೊಳ್ಳಿರಿ. ಎಲ್ಲಾ ಜನರೂ ನಾಲ್ಕು ಕುದುರೆ ಸವಾರರಿಂದ ಸ್ವಲ್ಪ ಮಟ್ಟಿಗಾದರೂ ಬಾಧೆಗೊಳಗಾಗುತ್ತಾರೆ. (2) ಸವಾರರ ಬಳಿಕ ತಕ್ಷಣದಲ್ಲೇ ಐದನೆಯ ಮುದ್ರೆಯು ಒಡೆಯಲ್ಪಡುತ್ತದೆ, ಅದು ರಕ್ತಸಾಕ್ಷಿಯಾಗಿ ಮರಣಿಸಿರುವ ದೇವಜನರು "ಒಡೆಯನೇ, . . . ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀನು ಇನ್ನು ಎಷ್ಟು ಕಾಲದ ವರೆಗೂ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ?" ಎಂದು ಕೂಗುತ್ತಾರೆ ಎಂಬುದನ್ನು ಪ್ರಕಟಗೊಳಿಸುತ್ತದೆ (ವ. 10). ಇವರು ಕುದುರೆ ಸವಾರರು ಪ್ರಯಾಣಿಸಿದ ಆ ರಕ್ತಸಿಕ್ತವಾದ ಮಾರ್ಗದಲ್ಲಿಯೇ ಕೊಲ್ಲಲ್ಪಟ್ಟವರೆಂಬುದನ್ನು ಊಹಿಸಿಕೊಳ್ಳುವದು ಸಹಜವಾದದ್ದಾಗಿದೆ. 6:4ರಲ್ಲಿ ಬಳಸಲ್ಪಟ್ಟಿರುವ "ಕೊಲ್ಲು" ಎಂಬ ಪದ ಹಾಗೂ 5:6, 9, 12ರಲ್ಲಿ ಯೇಸುವಿನ ಮರಣವನ್ನು ಹಾಗೂ 6:9ರಲ್ಲಿ ರಕ್ತಸಾಕ್ಷಿಗಳ ಮರಣವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುವ ಪದ ಒಂದೇ ಆಗಿರುತ್ತದೆಂಬ ವಾಸ್ತವಾಂಶವು 6:4ರ ಸೂಚ್ಯಾರ್ಥವು ವಿಶೇಷವಾಗಿ ಯೇಸುವಿನ ಹಿಂಬಾಲಕರು ಕೊಲ್ಲಲ್ಪಡುತ್ತಿದ್ದಾರೆಂಬುದೇ ಆಗಿದೆ. (3) ರಕ್ತಸಾಕ್ಷಿಗಳ ಬಣ್ಣನೆಯು ಆರನೆಯ ಮುದ್ರೆಯ ಬಳಿಕ ಮಾಡಲ್ಪಡುತ್ತದೆ (ವಚನಗಳು 12-17), ಅದು ದುಷ್ಟರಿಗೆ ದಂಡನೆಯಾಗುವದಕ್ಕೆ ಸಂಬಂಧಪಟ್ಟಿರುತ್ತದೆ - ಈ ಮುಂಚಿನ ಮುದ್ರೆಗಳು ಬೇರೆ ಏನನ್ನೋ ಸೂಚಿಸುತ್ತದೆಂಬುದನ್ನು ಪರೋಕ್ಷವಾಗಿ ತಿಳಿಸುತ್ತದೆ.

ಇಲ್ಲಿ ನಾಲ್ಕು ಕುದುರೆ ಸವಾರರ ಕುರಿತು ಒಂದು ಸಾಮಾನ್ಯವಾದ ಅರ್ಥನಿರೂಪಣೆ-ಜಾಗತಿಕ ದುರಂತವನ್ನು ಪ್ರಥಮ ಶತಮಾನದಲ್ಲಿ ಕ್ರೈಸ್ತರಿಂದ ಎದುರಿಸಲ್ಪಡುತ್ತಿದ್ದ ವಿಶಿಷ್ಟ ಸಮಸ್ಯೆಗಳ ವಾಸ್ತವಿಕತೆಯೊಂದಿಗೆ ಸಮರಸವಾಗಿ ಬೆರಸುವಂತಹ ಒಂದು ನಿರೂಪಣೆ-ಮಾಡುವದು ಅಗತ್ಯವೆಂದು ತೋರುತ್ತದೆ. ಅಂತಹ ಒಂದು ವ್ಯಕ್ತಪಡಿಸುವಿಕೆಯು ಇಲ್ಲಿದೆ:

> ಮನುಷ್ಯನ ದುರಾಶೆಯ ಫಲಿತವಾಗಿ (ಮೊದಲನೆಯ ಕುದುರೆ ಸವಾರ), ಕ್ಷೋಬೆ ಮತ್ತು ಸಂಕಷ್ಟಗಳು (ಎರಡನೆಯ ಮತ್ತು ಮೂರನೆಯ ಕುದರೆ ಸವಾರರು) ಲೋಕದ ಮೇಲೆ ಲಗಾಮಿಲ್ಲದೆ ಕಳುಹಿಸಲ್ಪಟ್ಟವು. ಪಾಪಭರಿತ ಲೋಕವೊಂದರಲ್ಲಿ ಅನಿವಾವಾರ್ಯವಾಗಿರುವ ಸಂಕಷ್ಟಗಳಿಗೆ ಇನ್ನಷ್ಟು ಬಾಧೆಯನ್ನು ಕೂಡಿಸಿತ್ತು (ನಾಲ್ಕನೆಯ ಕುದುರೆ ಸವಾರ).
>
> ಕ್ಷೋಬೆಗಳು, ಪರಿಶೋಧನೆಗಳು, ಮತ್ತು ಸಂಕಷ್ಟಗಳಲ್ಲಿ ಎಲ್ಲಾ ಮನುಷ್ಯರಿಗೂ ಪಾಲು ಇರುತ್ತದೆ, ಆದರೆ *ಕ್ರೈಸ್ತರು* ಇಮ್ಮಡಿ ಪಾಲನ್ನು ಪಡೆಯುತ್ತಾರೆ: ಯೇಸುವಿನ ಹಿಂಬಾಲಕರು ಜೀವಿತದ ಸಾಮಾನ್ಯವಾಗಿರುವ ಸ್ಥಿತಿಗತಿಯ ವ್ಯತ್ಯಯಗಳಿಗೆ ಅಧೀನರಾಗಿದ್ದಾರೆಂಬುದು ಮಾತ್ರವೇ ಅಲ್ಲ, ಆದರೆ ಅವರು ಅನೇಕ ಸಾರಿ ಅವರ ನಂಬಿಕೆ ನಿಮಿತ್ತವಾಗಿ ಅಪಾರ್ಥಕ್ಕೆ ಹಾಗೂ ಹಿಂಸಿಗೆ ಸಹ ಒಳಗಾಗುತ್ತಾರೆ.

"ಕ್ರೈಸ್ತರು ಇಮ್ಮಡಿ ಪಾಲನ್ನು ಪಡೆದುಕೊಳ್ಳುತ್ತಾರೆ" ಎಂಬುದಕ್ಕೆ ಒಂದು ದೃಷ್ಟಾಂತವಾಗಿ, ಮೂರನೆಯ ಕುದುರೆ ಸವಾರನಲ್ಲಿ ವ್ಯಕ್ತಿಕರಣಗೊಳಿಸಲ್ಪಟ್ಟಿರುವ ಆರ್ಥಿಕ ಸಂಕಷ್ಟವನ್ನು ಪರಿಗಣಿಸಿರಿ: "ಕ್ರೈಸ್ತ ಸಮುದಾಯದ ವಿರುದ್ಧವಾಗಿ ಬಳಸಲ್ಪಟ್ಟಿರುವ ಒಂದು ಪ್ರಾಥಮಿಕ ಆಯುಧವೆಂದರೆ ವಿರೋಧಿಸುವವರನ್ನು ನಂಬಿಕೆಭ್ರಷ್ಟಗೊಳ್ಳುವಂತೆ ಒತ್ತಾಯಿಸುವದಕ್ಕಾಗಿ

ಅವರನ್ನು ಮಾರುಕಟ್ಟೆಯಿಂದ, ಆರ್ಥಿಕ ಅನುಕೂಲಗಳಿಂದ ಹೊರಗಿಡುವದು ಆಗಿತ್ತು."[9] (13:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.)

ಪ್ರಕಟನೆ ಪುಸ್ತಕದಲ್ಲಿ ಯೇಸುವಿನ ಸಂದೇಶವು ಮೊಟ್ಟ ಮೊದಲನೆಯದಾಗಿ "ತನ್ನ ದಾಸರಿಗೆ" (1:1) ಅಗಿತ್ತಾದ್ದರಿಂದ, ಬಹುಶಃ 6:1-8ರಲ್ಲಿ ನಾಲ್ಕು ಕುದರೆ ಸವಾರರು *ಅವರನ್ನು* ತುಳಿದು ಬಿಡುವ ಇಂಗಿತದಿಂದ *ಅವರ* ಕಡೆಗೆ ಭರಾಟೆಯಿಂದ ನುಗ್ಗುತ್ತಿದ್ದಾರೆ ಎಂಬುದನ್ನು ಯೋಹಾನನು ಮತ್ತು ಇತರ ಕ್ರೈಸ್ತರು ಅರಿತುಕೊಳ್ಳಬೇಕೆಂದು ಯೇಸುವಿನ ಬಯಕೆಯಾಗಿತ್ತು.

ಯೋಹಾನನಿಗೆ ಕಾಣಿಸಿರಬಹುದಾದ ರೀತಿಯಲ್ಲಿ ಆ ದೃಶ್ಯವನ್ನು ಕಲ್ಪನೆ ಮಾಡಿಕೊಳ್ಳಲು ಪ್ರಯತ್ನಿಸಿರಿ. ಬೃಹತ್ತಾಕಾರದ ಯುದ್ಧ ಕುದುರೆಗಳು ಮೂಗಿನ ಹೊಳ್ಳೆಗಳನ್ನು ಉಬ್ಬಿಸಿಕೊಂಡು, ಬೆನ್ನನ್ನು ಹಿಂಬಾಗದಲ್ಲಿ ಎತ್ತರಿಸಿಕೊಂಡು, ತಮ್ಮ ತೀಕ್ಷ್ಣವಾದ ಗೊರಸುಗಳನ್ನು ಗಾಳಿಯಲ್ಲಿ ಗುದ್ದುತ್ತಾ ಬರುತ್ತಿರುವದನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ. "ಸವಾರರು . . . ಐತಿಹಾಸಿಕ ಕಾಲಾವಧಿಗಳನ್ನು ಪ್ರತಿನಿಧಿಸುವದಿಲ್ಲ"[10] ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. *ಕಾಲಾವೃತ್ತಾಂತಿಕ ಕ್ರಮ*ದಲ್ಲಿ ಕಾಣಿಸಿಕೊಳ್ಳುವದರ ಬದಲಾಗಿ, ಅವುಗಳು *ತಾರ್ಕಿಕವಾದ* ಕ್ರಮದಲ್ಲಿ ಕಾಣಿಸಿಕೊಳ್ಳುತ್ತವೆ. ಸಾಮ್ರಾಜ್ಯಶಾಹಿ ಬಳಿಕ ಯುದ್ಧವು ಬರುತ್ತದೆ, ಯುದ್ಧದ ಬಳಿಕ ಆರ್ಥಿಕ ಸಂಕಷ್ಟ, ಮತ್ತು ಅದಾದ ಮೇಲೆ ಮತ್ತೊಂದು ಹೀಗೆ ಮುಂದುವರೆಯುತ್ತದೆ. ಹಾಗಾದರೆ, ನಾಲ್ಕು ಯುದ್ಧ ಕುದುರೆಗಳು ಪಕ್ಕ ಪಕ್ಕದಲ್ಲಿ ದೌಡಾಯಿಸುತ್ತಿರುವದನ್ನು - ಗೊರಸುಗಳನ್ನು ಗುದ್ದುತ್ತಾ, ಕಣ್ಣುಗಳನ್ನು ಝುಳಪುತ್ತಾ, ಅವುಗಳು ಸವಾರರು ಓಡುವಂತೆ ಹುರದುಂಬಿಸುತ್ತಿರುವಂತೆ ಗಾಳಿಯಲ್ಲಿ ಅವುಗಳ ಕುತ್ತಿಗೆಯ ಸುತ್ತಲಿನ ಕೂದಲು ಹಾರಾಡುತ್ತಾ ವೇಗವಾಗಿ ಬರುತ್ತಿರುವದನ್ನು - ಒಮ್ಮೆ ಊಹಿಸಿಕೊಳ್ಳಿರಿ. ಅವುಗಳ ಗೊರಸು ನಿಮ್ಮ ಶರೀರವನ್ನು ಹರಿದು, ನಿಮ್ಮ ಮೂಳೆಗಳನ್ನು ಮುರಿದು, ನಿಮ್ಮ ದೇಹದಿಂದ ಜೀವವನ್ನು ಪುಡಿ ಮಾಡುವದಕ್ಕೆ ಮುಂಚೆ ಅವುಗಳ ಮೂಗಿನ ಹೊಳ್ಳೆಗಳಿಂದ ಬರುವ ಬಿಸಿಯಾದ ಉಸಿರನ್ನು ಅನುಭವ ಮಾಡಿರಿ. Earl Palmerನು ಹೀಗೆ ಹೇಳಿದನು, "ಈ ಅಂತ್ಯಕಾಲಿಕದ ನಾಲ್ಕು ಕುದುರೆಗಳು ಮತ್ತು ಅವುಗಳ ಸವಾರರಷ್ಟು ಅಧಿಕ ಭಯೋತ್ಪಾದಕವಾದ ಚಿತ್ರಣವು ಬಹುಶಃ ಇನ್ನೊಂದು ಇರಲಿಕ್ಕಿಲ್ಲ."[11] ಇದರ ನಂತರದಲ್ಲಿ ಬರಲಿರುವ ಮುದ್ರೆಗಳಿಂದ ಪ್ರಕಟಗೊಳಿಸಲ್ಪಡುವದನ್ನು ಅರ್ಥಮಾಡಿಕೊಳ್ಳಬೇಕಾದರೆ, ನೀವು ಆ ಭಯಾನಕತೆಯನ್ನು *ಅನುಭವ* ಮಾಡಬೇಕಾಗುತ್ತದೆ. ನಿಮ್ಮನ್ನು ಪ್ರಥಮ ಶತಮಾನದ ಕ್ರೈಸ್ತರ ಸ್ಥಾನದಲ್ಲಿ ಊಹಿಸಿಕೊಳ್ಳಿರಿ ಮತ್ತು ಅವರು ಜೀವಿಸಿದ ಅಪಾಯವನ್ನು ಅನುಭವಿಸಿರಿ!

ದೇವರು ಕ್ರೈಸ್ತರಿಗೆ ತಾನು ನೀಡುವ ಸಂದೇಶವನ್ನು ಏಕೆ ಇಂತಹ ಭಯಾನಕವಾದ ದರ್ಶನದೊಂದಿಗೆ ಆರಂಭಿಸುತ್ತಾನೆ? ಮುದ್ರೆಗಳು ಒಡೆಯಲ್ಪಡುವದಕ್ಕೆ ಆರಂಭಗೊಂಡಾಗ, ಯೋಹಾನನು ಒಂದು ಸಮಾಧಾನದ ಸಂದೇಶಕ್ಕಾಗಿ ಎದುರು ನೋಡಿರಬಹುದಾಗಿದೆ; ಬದಲಾಗಿ ಆತನಿಗೆ ಸಮಸ್ಯೆಗಳನ್ನು ಜ್ಞಾಪಕಕ್ಕೆ ತರಲಾಯಿತು. ಏಕೆ? ದೇವರ ಮನಸ್ಸನ್ನು ಅರ್ಥಮಾಡಿಕೊಳ್ಳುವದು ಒಬ್ಬನಿಗೆ ಅಸಾಧ್ಯವಾಗಿರುತ್ತದೆ, ಆದರೆ ನಾಲ್ಕು ಸವಾರರನ್ನು ಕಳುಹಿಸಿ ಕೊಡುವದಕ್ಕೆ ಕೆಲವು ಕಾರಣಗಳಿರುವ ಸಾಧ್ಯತೆಯಿದೆ.

1. *ಮುಂದೆ ಬರಲಿರುವಂಥದ್ದಕ್ಕಾಗಿ ಕ್ರೈಸ್ತರನ್ನು ಸಿದ್ಧಗೊಳಿಸುವದು.* ಒಂದು ಹಳೆಯ ಮಾತಿನಲ್ಲಿ ಜ್ಞಾನೋಕ್ತಿಯೊಂದು ಇರುತ್ತದೆ, ಏನೆಂದರೆ "ಮುಂದಾಗಿ ಎಚ್ಚರಿಸುವದೆಂದರೆ ಮುಂದಾಗಿ ಶಸ್ತ್ರ ಸುಸಜ್ಜಿತಗೊಳಿಸುವದು."

2. *ದೇವರು ಈಗಲೂ ಅಧಿಕಾರದಲ್ಲಿದ್ದಾನೆಂಬುದನ್ನು ಒತ್ತಿ ಹೇಳುವದು.* ಮೊದಲ ಎಂಟು ವಚನಗಳಲ್ಲಿ "ಬಾ!" ಮತ್ತು "ಕೊಡಲ್ಪಟ್ಟಿತು [ಅಥವಾ ಅನುಗ್ರಹಿಸಲ್ಪಟ್ಟಿತು]" ಎಂಬ

ಪದಗುಚ್ಛಗಳು ತುಂಬಿರುತ್ತವೆ. ಕುದುರೆ ಸವಾರರು ತಮಗೆ ದೇವರು ಮಾಡು ಎಂದು *ಅನುಮತಿಯನ್ನು* ಕೊಡದಿರುವ ಯಾವದನ್ನು ಅವರು ಮಾಡಲಿಲ್ಲ.

3. *ದೇವರು ಕ್ರೈಸ್ತರ ಸಮಸ್ಯೆಗಳನ್ನು ಮಿತಿಗೊಳಿಸುತ್ತಾನೆಂಬುದನ್ನು ಒತ್ತಿ ಹೇಳುವದು.* ನಂಬಿಗಸ್ತ ಕ್ರೈಸ್ತರು ಎಷ್ಟು ಸಹಿಸಿಕೊಳ್ಳುವದಕ್ಕೆ ಶಕ್ತರೋ ಅದಕ್ಕಿಂತ ಹೆಚ್ಚಿನದನ್ನು ದೇವರು ಅವರ ಮೇಲೆ ಬರುವಂತೆ ಬಿಡುವದಿಲ್ಲ ಎಂಬುದಾಗಿ 1 ಕೊರಿಂಥ 10:13 ಹೇಳುತ್ತದೆ. ಅದೇ ವಿಧವಾದ ಯೋಚನೆಯು 6:8ರಲ್ಲಿ ಸಾಂಕೇತಿಕವಾಗಿ ವ್ಯಕ್ತಗೊಳಿಸಲ್ಪಟ್ಟಿದ್ದು, ಅದು ಮರಣ ಹಾಗೂ ಪಾತಾಳದ ಅಧಿಕಾರವು "ಭೂಮಿಯಲ್ಲಿರುವ ಕಾಲುಭಾಗ" ಕ್ಕೆ ಮಾತ್ರ ಸಿಮಿತಗೊಳಿಸಲ್ಪಟ್ಟಿತ್ತೆಂದು ಹೇಳುತ್ತದೆ. "ಭೂಮಿಯ ಕಾಲುಭಾಗ" ಎಂಬುದು ಬೃಹತ್ತಾಗಿ ಕಾಣಿಸಬಹುದು, ಆದರೆ ನಾವು ಇಲ್ಲಿ ಮರಣದ ಕುರಿತು ಮಾತಾಡುತ್ತಿದ್ದೇವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಎಲ್ಲಾ ಜನರೂ ಕ್ರಮೇಣವಾಗಿ ಸತ್ತೇ ಸಾಯುವರು. ಪ್ರಕಟನೆ ಪುಸ್ತಕದ ಸಾಂಕೇತಿಕತೆಯಲ್ಲಿ, "ನಾಲ್ಕನೆಯ" ಭಾಗವು "ಎಲ್ಲವೂ ಅಲ್ಲ" ಎಂಬುದನ್ನು ಸೂಚಿಸುತ್ತದೆ. ದೇವರು ನಮ್ಮನ್ನು ದಬ್ಬಾಳಿಕೆ ಮಾಡುವವರ ಸಂಖ್ಯೆಯನ್ನು ಮಿತಿಗೊಳಿಸುತ್ತಾನೆ.

4. *ಸಕಲ ಘಟನೆಗಳಲ್ಲಿಯೂ, ಒಬ್ಬನು ಅವುಗಳನ್ನು "ಒಳ್ಳೇದು" ಅಥವಾ "ಕೆಟ್ಟದ್ದು" ಎಂದು ಯೋಚಿಸಿದರೂ ಸರಿಯೇ, ಅವುಗಳೆಲ್ಲದರಲ್ಲಿಯೂ ದೇವರು ಸಕ್ರಿಯನಾಗಿದ್ದಾನೆ ಎಂಬುದನ್ನು ಕಲಿಸುವದು.* ಈ ಭಾವನೆಯು 6:1-8ರಲ್ಲಿ ಅತ್ಯಂಥ ಪ್ರಾಮುಖ್ಯವಾದ ಪಾಠಗಳಲ್ಲಿ ಒಂದಾಗಿದೆ. ದೇವರು ತನ್ನ ಉದ್ದೇಶಗಳನ್ನು ಕಾರ್ಯಸಾಧಿಸುತ್ತಿದ್ದನು. ತಾನೇನು ಮಾಡುತ್ತಿದ್ದಾನೆಂಬುದನ್ನು ದೇವರು ಬಲ್ಲವನಾಗಿದ್ದಾನೆ. ನಮ್ಮ ಮುಂದಿರುವ ಸವಾಲು ಎಂದರೆ ಆತನಲ್ಲಿ ಭರವಸವಿಡುವದಕ್ಕೆ ಕಲಿತುಕೊಳ್ಳುವದೇ.

## ಐದನೆಯ ಮುದ್ರೆ (6:9-11)

**9ಆತನು ಐದನೆಯ ಮುದ್ರೆಯನ್ನು ಒಡೆದಾಗ ದೇವರ ವಾಕ್ಯದ ನಿಮಿತ್ತವಾಗಿಯೂ ತಾವು ಹೇಳಿದ ಸಾಕ್ಷಿಯ ನಿಮಿತ್ತವಾಗಿಯೂ ಹತವಾದವರ ಆತ್ಮಗಳು ಯಜ್ಞವೇದಿಯ ಕೆಳಗಿರುವದನ್ನು ಕಂಡೆನು. 10ಅವರು - ಒಡೆಯನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ, ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀನು ಎಷ್ಟು ಕಾಲದ ವರೆಗೂ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ? ಎಂದು ಮಹಾ ಶಬ್ದದಿಂದ ಕೂಗಿದರು. 11ಅವರಲ್ಲಿ ಒಬ್ಬೊಬ್ಬನಿಗೆ ಒಂದೊಂದು ಬಿಳಿ ನಿಲುವಂಗಿಯು ಕೊಡಲ್ಪಟ್ಟಿತು. ಇದಲ್ಲದೆ - ನಿಮ್ಮ ಹಾಗೆ ಕೊಲೆಯಾಗಬೇಕಾಗಿರುವ ನಿಮ್ಮ ಸಹೋದರರ ಮತ್ತು ನಿಮ್ಮ ಜೊತೆದಾಸರ ಸಂಖ್ಯೆಯೂ ಪೂರ್ಣವಾಗುವ ತನಕ ಇನ್ನೂ ಸ್ವಲ್ಪ ಕಾಲ ವಿಶ್ರಮಿಸಿಕೊಂಡಿರಬೇಕೆಂದು ಅವರಿಗೆ ಉತ್ತರವಾಯಿತು.**

"ಪ್ರಥಮ ಕ್ರೈಸ್ತ ನಾಟಕ"[12] ತೆರೆಯು ನಾಲ್ಕು ಸಾರಿ ಎತ್ತಲ್ಪಟ್ಟಿತ್ತು. ನಾಲ್ಕು ಸಾರಿಯೂ ಯೋಹಾನನು ಭೂಮಿಯ ಮೇಲೆಲ್ಲಾ ಒಂದು ಭಯಾನಕ ಕುದುರೆಯು ವೇಗವಾಗಿ ಓಡಾಡುತ್ತಾ ನಾಶನದ ಕುರುಹುಗಳನ್ನು ಬಿಟ್ಟು ಹೋಗುವದನ್ನು ಕಂಡಿದ್ದನು.

ಗೊರಸಿನ ಶಬ್ದಗಳು ತಗ್ಗುತ್ತಿದ್ದ ಹಾಗೆ, ತೆರೆಯು ಐದನೆಯ ಬಾರಿಗೆ ನಿಧಾನವಾಗಿ ಎತ್ತಲ್ಪಡಲಾರಂಭಿಸಿತ್ತು. ಯೋಹಾನನು ನಾಲ್ಕು ವಿನಾಶಕಾರಿ ಸವಾರಿಗಳ ನಂತರದ ಒಂದು ಸಂಹಾರದ ದೃಶ್ಯವನ್ನು ಕಂಡಿದ್ದರೆ ಆಶ್ಚರ್ಯಗೊಳ್ಳುತ್ತಿರಲಿಲ್ಲ. ಆತನು ದೇಹಗಳು

ಒಂದಕ್ಕೊಂದು ಸಿಲುಕಿಕೊಂಡು ದೂಳಿನಲ್ಲಿ ಬಿದ್ದುಕೊಂಡಿರುವ ನಿಶ್ಯಬ್ದವಾದ ಹಾಗೂ ಮಬ್ಬು ಮುಸುಕಿದ ದೃಶ್ಯಾವಳಿಯನ್ನು ಎದುರು ನೋಡಿರಬಹುದಾಗಿದೆ. ಬದಲಾಗಿ, ಯೋಹಾನನು ಕಿವಿಗಳಲ್ಲಿ ಒಂದು ಗದ್ದಲವು - ಕಳವಳದಿಂದ ಕೂಡಿದ ಸ್ವರಗಳ ಒಂದು ಒಕ್ಕೊರಲು - ಸತತವಾಗಿ ಕೇಳಿಸುತ್ತಿತ್ತು.

ತೆರೆಯು ಎತ್ತಲ್ಪಟ್ಟಾಗ, ಯೋಹಾನನು ಖಂಡಿತವಾಗಿಯೂ ನಾಲ್ಕು ಕುದುರೆ ಸವಾರರ ಕೈ ಕೆಲಸವನ್ನು ಕಂಡಿದ್ದನು, ಆದರೆ ಇಲ್ಲಿ ಶಾರೀರಿಕ ಲೋಕವು ಮುಖ್ಯ ವೇದಿಕೆಯಾಗಿರಲಿಲ್ಲ. ಬದಲಾಗಿ, ಆತನು ಆತ್ಮಗಳ ಲೋಕವನ್ನು ನೋಡುತ್ತಿದ್ದನು. ಅದರ ಹಿಂದುಗಡೆಯಲ್ಲಿ ದೇವರ ಪವಿತ್ರ ಸನ್ನಿಧಿಯಿತ್ತು, ಮತ್ತು ಮಧ್ಯಭಾಗದಲ್ಲಿ ಯಜ್ಞದ ಮಹಾ ವೇದಿಕೆಯು ಇತ್ತು. ಧ್ವನಿಗಳು ಯಜ್ಞವೇದಿಯ ಸುತ್ತಲಿನ ನೆಲದಿಂದ ಬರುತ್ತಿದ್ದವೆಂದು ತೋರಿತು.

ಯೋಹಾನನು ಕಣ್ಣುಗಳನ್ನು ಸರಿ ಪಡಿಸಿಕೊಂಡು ನೋಡಿದಾಗ, ಆತನಿಗೆ ಯಜ್ಞವೇದಿಯ ಅಡಿಭಾಗದಲ್ಲಿ ಆಕಾರಗಳ ನೆರಳುಗಳು ಕಂಡವು: ಕುದುರೆ ಸವಾರರ ವ್ಯಾಗ್ರವಾದ ಸವಾರಿಗಳಿಂದ ಉಂಟಾದ ಹಿಂಸೆಯಿಲ್ಲಿ ತಮ್ಮ ಪ್ರಾಣಗಳನ್ನು ಅರ್ಪಿಸಿದ್ದ ಕ್ರೈಸ್ತರ ಆತ್ಮಗಳು. ಈ ರಕ್ತಸಾಕ್ಷಿಗಳ ಬಾಹುಗಳು ದೇವರ ಪವಿತ್ರ ಸನ್ನಿಧಿಯ ಕಡೆಗೆ ಚಾಚಿದ್ದವು, ಮತ್ತು ಅವರ ಸ್ವರಗಳು ಗೊಂದಲದಿಂದ ತುಂಬಿದ್ದವು.

ಯೋಹಾನನಿಗೆ ಅವರ ಹತಾಶೆಯು ಅರ್ಥವಾಗಿರಬೇಕು. ದೇವರು "ತನ್ನ ಸೇವಕರ ರಕ್ತವನ್ನು ಚೆಲ್ಲಿದ ಶತ್ರುಗಳಿಗೆ . . . ಪ್ರತಿದಂಡನೆ ಮಾಡುತ್ತಾನೆ; ಅವರಿಗೆ ಮುಯ್ಯಿ ತೀರಿಸುತ್ತಾನೆ" ಎಂದು ಮೋಶೆಯು ಬರೆದಿದ್ದನು (ಧರ್ಮೋಪದೇಶಕಾಂಡ 32:43). ಇದಕ್ಕೆ ಯೇಸುವು ಒಮ್ಮತವನ್ನು ವ್ಯಕ್ತಪಡಿಸಿದ್ದನು: "ದೇವರಾದುಕೊಂಡವರು ಆತನಿಗೆ ಹಗಲು ರಾತ್ರಿ ಮೊರೆಯಿಡುವಲ್ಲಿ ಆತನು ಅವರ . . . ನ್ಯಾಯವನ್ನು ತೀರಿಸದೆ ಇರುವನೇ?" (ಲೂಕ 18:7; KJV). ಆದಿ ಕ್ರೈಸ್ತರು ಏಕೆ ತಮಗೆ ಹಿಂಸೆಯು ಮುಂದುವರೆಯುವಂತೆ ದೇವರು ಅನುಮತಿಸಿದ್ದಾನೆಂಬುದಾಗಿ ದಿಗ್ಭ್ರಮೆಗೊಂಡಿರಬಹುದಾಗಿದೆ.

**ವಚನ 9. ಆತನು ಐದನೆಯ ಮುದ್ರೆಯನ್ನು ಒಡೆದಾಗ ದೇವರ ವಾಕ್ಯದ ನಿಮಿತ್ತವಾಗಿಯೂ ತಾವು ಹೇಳಿದ ಸಾಕ್ಷಿಯ ನಿಮಿತ್ತವಾಗಿಯೂ ಹತವಾದವರ ಆತ್ಮಗಳು ಯಜ್ಞವೇದಿಯ ಕೆಳಗಿರುವದನ್ನು ಕಂಡೆನು.** ಈ ವಚನವನ್ನು ಓದುವದರಿಂದ ಹಲವಾರು ವಾಸ್ತವಾಂಶಗಳು ಸ್ಪಷ್ಟಗೊಳ್ಳುತ್ತವೆ. ಮೊದಲನೆಯದಾಗಿ, ಇಲ್ಲಿ ಬಣ್ಣಿಸಲಾಗಿರುವವರು ರಕ್ತಸಾಕ್ಷಿಗಳಾಗಿದ್ದಾರೆ. **ಸಾಕ್ಷಿ** (μαρτυρία, *marturia*) ಎಂಬ ಪದವು μάρτυς (*martus*) ಎಂಬ ಪದಕ್ಕೆ ಸಂಬಂಧಿಸಿದ್ದಾಗಿದೆ, ಈ ಪದದಿಂದಲೇ "ರಕ್ತಸಾಕ್ಷಿ" ಎಂಬುದು ಬಂದಿರುತ್ತದೆ. **ಹತವಾದವರ** ಎಂಬ ಪದವು ಯೇಸುವಿನ ಮರಣದ ವಿಷಯವಾಗಿ ಬಳಸಲ್ಪಟ್ಟಿರುವ ಅದೇ ಪದದಿಂದ ಬಂದದ್ದಾಗಿದೆ (5:6, 9, 12; ನೋಡಿರಿ 13:8). ಅಲ್ಲದೆ ಇದು ಕೆಂಪು ಕುದುರೆ ಸವಾರನಿಗೆ ಸಂಬಂಧ ಪಟ್ಟಂತೆ ಬಳಸಲಾಗಿರುವ ಪದದಿಂದ ಸಹ ಬಂದಿರುತ್ತದೆ (ವ. 4). ಯೋಹಾನನು ಯಾವ ಕಾರಣಕ್ಕಾಗಿ ಗಡಿಪಾರು ಮಾಡಲ್ಪಟ್ಟಿದ್ದನೋ ಅದೇ ಕಾರಣಕ್ಕಾಗಿಯೇ ಅವರು ಕೊಲ್ಲಲ್ಪಟ್ಟಿದ್ದರು: ಕ್ರಿಸ್ತನ ವಿಷಯವಾದ ಸಾಕ್ಷಿಗೋಸ್ಕರವಾಗಿ (1:9; ನೋಡಿರಿ 1:2). ಅನಂತರದಲ್ಲಿ ತಿಳಿದು ಬರುವದೇನೆಂದರೆ ಅವರು ಚಕ್ರವರ್ತಿಯ "ವಿಗ್ರಹಕ್ಕೆ ನಮಸ್ಕರಿದೆ" ಇದ್ದರು (13:15) ಮತ್ತು ಅವರನ್ನು ಆ ಕಾರಣದಿಂದ ಅವರ "ತಲೆಹೊಯಿಸಲಾಗಿತ್ತು" (20:4). ಮರಣದ ಬೆದರಿಕೆಯನ್ನೊಡ್ಡಿದ್ದರೂ, ಅವರು ನಂಬಿಗಸ್ತರಾಗಿ ಉಳಿದಿದ್ದರು (2:10); ಅವರು ಕ್ರಿಸ್ತನ ಧ್ಯೇಯಕ್ಕಾಗಿ ತಮ್ಮ ಪ್ರಾಣಗಳನ್ನು ಮುಕ್ತವಾಗಿ ಕೊಟ್ಟಿದ್ದರು.

ಯೇಸು ತನ್ನ ಶಿಷ್ಯರಿಗೆ ಮನುಷ್ಯರು "ನಿಮ್ಮನ್ನು ಉಪದ್ರವಕ್ಕೆ ಒಪ್ಪಿಸಿ ಕೊಲ್ಲುವರು; ನನ್ನ

ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲಾ ಜನಾಂಗಗಳವರು ಹಗೆ ಮಾಡುವರು" ಎಂದು ಎಚ್ಚರಿಸಿದ್ದನು (ಮತ್ತಾಯ 24:9). ಸ್ತೇಫನನಿಗೆ ಕಲ್ಲೇಸೆಯುವದರಿಂದ (ಅಪೊಸ್ತಲರ ಕೃತ್ಯಗಳು 7:58–60) ಮತ್ತು ಯಾಕೋಬನ ಶಿರಚ್ಛೇದ ಮಾಡಲ್ಪಡುವದರಿಂದ ಆರಂಭಗೊಂಡು (ಅಪೊಸ್ತಲರ ಕೃತ್ಯಗಳು 12:1, 2; ನೋಡಿರಿ ಮಾರ್ಕ 6:22–29), ಕ್ರೈಸ್ತ ರಕ್ತಸಾಕ್ಷಿಗಳ ರಕ್ತವು ಭೂಮಿಯನ್ನು ಕಲೆ ಮಾಡಿರುತ್ತದೆ. ಅನಂತರದಲ್ಲಿ, ರೋಮನ್ ಸಾಮ್ರಾಜ್ಯವು ಕ್ರೈಸ್ತರ ವಿರುದ್ಧವಾಗಿ "ಬೇಟೆ ಕಾಲ" ವನ್ನು ಘೋಷಿಸಿದರು. ಪ್ರಕಟನೆ ಪುಸ್ತಕವು ಬರೆಯಲ್ಪಡುವ ಹೊತ್ತಿಗೆ, ರಕ್ತಸಾಕ್ಷಿಗಳ ಹೆಸರು ಪಟ್ಟಿಯಲ್ಲಿ ಪೌಲ, ಆತನ ಜೊತೆಗೆಲಸದವರಾದ ಲೂಕ ಹಾಗೂ ತಿಮೊಥೆಯ, ಯೋಹಾನನನ್ನು ಹೊರತು ಪಡಿಸಿ ಎಲ್ಲಾ ಹನ್ನೆರಡು ಮಂದಿ ಅಪೊಸ್ತಲರು, ಹಾಗೂ ನಮಗೆ ಅಪರಿಚಿತರು ಆದರೆ ಕರ್ತನಿಗೆ ಅಮೂಲ್ಯರಾಗಿರುವ ಇತರ ಸಾವಿರಾರು ಕ್ರೈಸ್ತರು ಸೇರಿದ್ದರು.

ಯೋಹಾನನು ಈ ರಕ್ತಸಾಕ್ಷಿಗಳ ದೇಹಗಳನ್ನು ನೋಡಲಿಲ್ಲ, ಆದರೆ ಅವರ ಆತ್ಮಗಳನ್ನು ಕಂಡನು. **ಆತ್ಮಗಳು** ಎಂಬ ಪದವು ψυχή (*psuchē*) ಎಂಬುದರ ಬಹುವಚನ ರೂಪದಿಂದ ಅನುವಾದಿಸಲ್ಪಟ್ಟಿದ್ದು, ಅದು "ಜೀವ" ಎಂಬ ಅರ್ಥವನ್ನು ಕೊಡುತ್ತದೆ (ಮತ್ತಾಯ 20:28; ಪ್ರಕಟನೆ 12:11). *Psuchē, ಅಥವಾ "ಆತ್ಮ" ಎಂಬ ಪದದ ಅರ್ಥವು ಒಬ್ಬ ವ್ಯಕ್ತಿಯನ್ನು ಸೂಚಿಸಬಹುದಷ್ಟೆ* (1 *ಪೇತ್ರ* 3:20; KJV *ಯೊಂದಿಗೆ ಹೋಲಿಸಿರಿ*). ಈ ಪದವು ಆಂಗ್ಲದ "psyche," "psychology," ಮತ್ತು ಅದಕ್ಕೆ ಸಂಬಂಧಿಸಿದ ಇತರ ಪದಗಳಿಗೆ ಮೂಲವಾಗಿರುತ್ತದೆ. ಸನ್ನಿವೇಶವು *psuchē*ಯ ಅರ್ಥವನ್ನು ನಿರ್ಧರಿಸುವದಾಗಿದೆ. 9ನೇ ವಚನದಲ್ಲಿ, ಈ ಪದವು ಬಹುಶಃ ಅವರ ನಿರ್ಲಯವಾದ ಆತ್ಮಗಳನ್ನು ಸೂಚಿಸುತ್ತಿರುವದು (ನೋಡಿರಿ ಮತ್ತಾಯ 10:28). ಒಬ್ಬ ಮನುಷ್ಯನ ಆತ್ಮವು ಆತನು ಒಂದು ಕಾಲದಲ್ಲಿ ನೆಲೆಸಿದ್ದ ಅದೇ ದೇಹದ ರೀತಿಯಲ್ಲಿರುವ ರೂಪವನ್ನು ಉಳಿಸಿಕೊಂಡಿರುತ್ತದೆಂದು ಯೆಹೂದ್ಯರು ನಂಬುತ್ತಿದ್ದರು (ಮತ್ತಾಯ 14:26; ಲೂಕ 24:36, 37). ಯೋಹಾನನ ಸ್ನೇಹಿತರಲ್ಲಿ ಮತ್ತು ಜೊತೆಗೆಲಸದವರಲ್ಲಿ ಅನೇಕರು ರಕ್ತಸಾಕ್ಷಿಗಳಾಗಿ ಕೊಲ್ಲಲ್ಪಟ್ಟಿದ್ದರಾದ್ದರಿಂದ, ಆ ಯಜ್ಞವೇದಿಯ ಕೆಳಗಡೆಯಲ್ಲಿರುವವರಲ್ಲಿ ಯಾರನ್ನಾದರೂ ಆತನು ಗುರುತು ಹಿಡಿದನೋ ಎಂದು ಒಬ್ಬನು ಚಕಿತಗೊಳ್ಳಬಹುದು.

ಇನ್ನೊಂದು ಸ್ಪಷ್ಟವಾಗಿರುವ ವಾಸ್ತವಾಂಶವೆಂದರೆ ಈ ದೇವಜನರು ಈಗಲೂ ಜೀವಂತವಾಗಿದ್ದರು. ಮರಣವು ಅಂತ್ಯಾವಸ್ಥೆಯಾಗಿರಲಿಲ್ಲ. ಅವರನ್ನು ನಾಶ ಮಾಡಿ ಬಿಟ್ಟಿದ್ದೇವೆಂದು ಅವರ ವೈರಿಗಳು ಭಾವಿಸಿಕೊಂಡಿದ್ದರು, ಆದರೆ ವಾಸ್ತವಿಕದಲ್ಲಿ ಶಿರಚ್ಛೇದ ಮಾಡುವವನ ಕತ್ತಿಯು ಅವರನ್ನು ಕರ್ತನ ಸನ್ನಿಧಿಯೊಳಗೆ ಕರೆದೊಯ್ದಿತ್ತು. ಈ ಆತ್ಮಗಳು ನಿಖರವಾಗಿ *ಎಲ್ಲಿ* ಇದ್ದವೆಂಬುದರ ವಿಷಯವಾಗಿ ಯೋಹಾನನು ಬೇಕೆಂದೇ ಅಸ್ಪಷ್ಟವಾಗಿ ಬರೆದಿದ್ದಾನೆ. ನಂತರದಲ್ಲಿ, ಕ್ರೈಸ್ತ *ರಕ್ತಸಾಕ್ಷಿಗಳಾದವರು* ನ್ಯಾಯತೀರ್ಪನ್ನು ಹೊಂದದೆಯೇ ನೇರವಾಗಿ ಪರಲೋಕಕ್ಕೆ ಹೋಗುವರು ಎಂಬ ಒಂದು ಮಾನವ ಕಲ್ಪಿತವಾದ ಸಂಪ್ರದಾಯವು ಹುಟ್ಟಿಕೊಂಡಿತು. ನ್ಯಾಯತೀರ್ಪಿಗಾಗಿ ಕಾಯುತ್ತಿದ್ದ ಈ ಆತ್ಮಗಳಿದ್ದ ನಿರ್ದಿಷ್ಟವಾದ *ಸ್ಥಳ* ಯಾವದೆಂದು ತಿಳಿಸುವದು ಯೋಹಾನನ ಉದ್ದೇಶವಾಗಿರಲಿಲ್ಲ.

ತಮಗೆ ಏನು ಸಂಭವಿಸಿತ್ತೆಂಬುದು ಈ ರಕ್ತಸಾಕ್ಷಿಗಳಿಗೆ ತಿಳಿದಿತ್ತು. ಕೆಲವು ಹೇಳುವ ಪ್ರಕಾರ, ಅವರ ಆತ್ಮಗಳು ಕೇವಲ "ನಿದ್ದೆಯಲ್ಲಿ" ಇರಲಿಲ್ಲ. ಮನುಷ್ಯನು ಒಂದು ನಿರ್ಲಯವಾದ ಆತ್ಮವನ್ನು ಹೊಂದಿದ್ದಾನೆಂಬುದನ್ನು ಯೆಹೋವನ ಸಾಕ್ಷಿಗಳು ಹಾಗೂ ಇತರ ಭೌತಿಕತ್ವದ ಪಾಷಂಡ ಮತಗಳು ನಿರಾಕರಿಸುತ್ತವೆ. ಅವರು ಹೇಳುವದೇನೆಂದರೆ ಒಬ್ಬ ವ್ಯಕ್ತಿಯು

ಮರಣಿಸುವಾಗ, ಆ ವ್ಯಕ್ತಿಯು ಅಸ್ತಿತ್ವವೇ ಇಲ್ಲದವನಾಗಿ ಕೇವಲ ದೇವರ ಜ್ಞಾಪಕದಲ್ಲಿ ಮಾತ್ರವೇ ಉಳಿದುಕೊಳ್ಳುತ್ತಾನೆ ಎಂಬುದೆ. ಈ ಶಾಸ್ತ್ರಾಧಾರಿತವಲ್ಲ ನಿಲುವಿನ ಪ್ರಕಾರವಾಗಿ, ಪುನರುತ್ಥಾನವು ವಾಸ್ತವಿಕದಲ್ಲಿ ಮರುಸೃಷ್ಟಿಸುವಿಕೆಯೇ ಆಗಿರುತ್ತದೆ.

ಸ್ಪಷ್ಟವಾಗಿರುವ ಮೂರನೆಯ ಮುಕ್ತಾಯವೇನೆಂದರೆ ಸ್ವಲ್ಪ ಕಾಲದಿಂದ ಹಿಂಸೆಯು ಮುಂದುವರೆದಿತ್ತು - ಯಾಕೆಂದರೆ ಸಾಕಷ್ಟು ಸಮಯವು ಗತಿಸಿ ಹೋಗಿದೆ ಎಂಬ ಮನವರಿಕೆಯು ಈ ರಕ್ತಸಾಕ್ಷಿಗಳಿಗೆ ಆಗಿತ್ತು. ಹಿಂಸೆಯು ಇನ್ನಷ್ಟು ತೀಕ್ಷ್ಣವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಪ್ರಕಟನೆ ಪುಸ್ತಕದ ಮುಂಚಿನ ಅಧ್ಯಾಯಗಳಲ್ಲಿ, ಕೇವಲ ಒಬ್ಬನೇ ಒಬ್ಬ ರಕ್ತಸಾಕ್ಷಿಯು - ಅಂತಿಪ (2:13) - ಪ್ರಸ್ತಾಪಿಸಲ್ಪಟ್ಟಿದ್ದಾನೆ; ಆದರೆ ಅವರ ಸಂಖ್ಯೆಯು ಅತ್ಯಧಿಕವಾಗಿತ್ತೆಂಬ ಅನಿಸಿಕೆಯನ್ನು ಈ ದರ್ಶನವು ಕೊಡುತ್ತದೆ. ಅಷ್ಟುಮಾತ್ರವಲ್ಲದೆ, ಹಿಂಸೆಯು ಇನ್ನೂ ಮುಕ್ತಾಯಗೊಳ್ಳುವ ಲಕ್ಷಣವು ಇರಲಿಲ್ಲ. ಪ್ರಶ್ನೆ ಮಾಡಿದವರಿಗೆ "ನಿಮ್ಮ ಹಾಗೆ ಕೊಲೆಯಾಗಬೇಕಾಗಿರುವ" ವ್ಯಕ್ತಿಗಳು ಇನ್ನೂ ಅನೇಕರಿದ್ದಾರೆಂದು ಹೇಳಲಾಯಿತು (ವ. 11).

ಈ ದರ್ಶನದಲ್ಲಿರುವ ಇನ್ನಿತರ ವಿವರಗಳ ಮಹತ್ವಪೂರ್ಣತೆಯು ಸ್ಪಷ್ಟಗೊಂಡಿರುವದಿಲ್ಲ. ಉದಾಹರಣೆಗೆ, **ಯಜ್ಞವೇದಿಯ ಕೆಳಗೆ** ಎಂಬ ಪದಗುಚ್ಛದ ಅರ್ಥವೇನು? ಪ್ರಕಟನೆ ಪುಸ್ತಕದಲ್ಲಿ ಯಜ್ಞವೇದಿಯ ಪ್ರಸ್ತಾಪಿಸುವಿಕೆಯು ಹಳೆಯ ಒಡಂಬಡಿಕೆಯಲ್ಲಿ ಬಳಸಲಾಗಿರುವ ಪರಿಭಾಷೆಯೊಂದಿಗೆ, ವಿಶೇಷವಾಗಿ ದೇವದರ್ಶನ ಗುಡಾರ ಮತ್ತು ದೇವಾಲಯಕ್ಕೆ ಸಂಬಂಧಿಸಿದಂತೆ ಸಾಮಂಜಸ್ಯತೆಯನ್ನು ಹೊಂದಿದೆ. ಪ್ರಕಟನೆ ಪುಸ್ತಕದಲ್ಲಿ ಯಜ್ಞವೇದಿಯು ಅನೇಕ ಸಾರಿ ಪ್ರಸ್ತಾಪಿಸಲ್ಪಟ್ಟಿದೆ (ನೋಡಿರಿ 8:5; 11:1; 14:18; 16:7) ಮತ್ತು ಸಾಮಾನ್ಯವಾಗಿ ನಮಗೆ ಅತಿ ಪವಿತ್ರ ಸ್ಥಳದೊಳಗೆ ಪ್ರವೇಶಿಸುವ ದ್ವಾರದ ಮುಂದೆ ಇಡಲಾಗಿರುತ್ತಿದ್ದ ಚಿನ್ನದ ಧೂಪಾರತಿಯ ಯಜ್ಞವೇದಿಯನ್ನು ಜ್ಞಾಪಕ ಪಡಿಸುತ್ತದೆ (8:3; 9:13; ನೋಡಿರಿ ವಿಮೋಚನಕಾಂಡ 40:26, 27). ಹೇಗೂ, ಪ್ರಕಟನೆ 6ರಲ್ಲಿ, ರಕ್ತಸಾಕ್ಷಿಗಳು ತಮ್ಮ ರಕ್ತವನ್ನು ದೇವರಿಗೆ *ಒಂದು ಯಜ್ಞವಾಗಿ* ಸುರಿಸಿದ್ದರು. ಯೆಹೂದಿ ಆರಾಧನೆಯಲ್ಲಿ, ರಕ್ತದ ಯಜ್ಞಗಳನ್ನು ಚಿನ್ನದ ಯಜ್ಞವೇದಿಯ ಮೇಲೆ ಸಮರ್ಪಿಸಲ್ಪಡುತ್ತಿರಲಿಲ್ಲ, ಆದರೆ ಪರಿಶುದ್ಧ ಸ್ಥಳದ ಹೊರಗಿರುತ್ತಿದ್ದ ಸರ್ವಾಂಗಹೋಮ ಬಲಿಗಳ ತಾಮ್ರದ ಯಜ್ಞವೇದಿಯ ಮೇಲೆ ಸಮರ್ಪಿಸಲಾಗುತ್ತಿತ್ತು (ವಿಮೋಚನಕಾಂಡ 39:39; 40:29). ಇಲ್ಲಿ ಯಾವ ಯಜ್ಞವೇದಿಯನ್ನು ಸೂಚಿಸಿ ಹೇಳಲಾಗಿದೆ ಎಂಬ ವಿಷಯದಲ್ಲಿ ವ್ಯಾಖ್ಯಾನಕಾರರು ಸಮಾನವಾಗಿಯೇ ವಿಭಜಿಸಲ್ಪಟ್ಟಿದ್ದಾರಾದರೂ, ಪ್ರಕಟನೆ ಪುಸ್ತಕವು ಕೇವಲ ಒಂದೇ ಒಂದು ಯಜ್ಞವೇದಿಯ ಕುರಿತು ಪ್ರಸ್ತಾಪಿಸುತ್ತದೆಂಬದನ್ನು ಅವರಲ್ಲಿ ಬಹುಪಾಲು ಮಂದಿ ಒಪ್ಪಿಕೊಳ್ಳುತ್ತಾರೆ. Robert Mounceನು ಹೀಗೆ ವ್ಯಾಖ್ಯಾನಿಸುತ್ತಾನೆ, "ಈ ಯಜ್ಞವೇದಿಯು ಸರ್ವಾಂಗಹೋಮದ ವೇದಿಯೋ ಅಥವಾ ಧೂಪದ ವೇದಿಯೋ ಎಂದು ತಕ್ಕಷ್ಟು ಆಧಾರವಿಲ್ಲದ ಊಹೆಯನ್ನು ಮಾಡುವದು ಬಹುಶಃ ಅಮುಖ್ಯವಾಗಿರುತ್ತದೆ . . . ಯೋಹಾನನ ದರ್ಶನದಲ್ಲಿ ಅವೆರಡೂ ಸಹ ಏಕೆ ಒಂದಾಗಿ ಬೆರೆತುಕೊಳ್ಳಬಾರದೆಂಬುದಕ್ಕೆ ಯಾವ ಕಾರಣವೂ ಇರುವದಿಲ್ಲ."[13] ಯಜ್ಞವು ಈ ದರ್ಶನದ ಪ್ರಾಥಮಿಕ ವಿಷಯವಾಗಿರುವದರಿಂದ, ಈ ಹಂತದಲ್ಲಿ ಯಜ್ಞವೇದಿಯು "ತಾಮ್ರದ ವೇದಿ" (KJV) ಯಂತೆ ಕಾಣಿಸಿಕೊಳ್ಳುತ್ತದೆಂಬುದಾಗಿ ಕಲ್ಪನೆ ಮಾಡಿಕೊಳ್ಳುತ್ತೇವೆ. ಯೇಸುವು "ಒಂದೇ ಸಾರಿ-ಎಲ್ಲರಿಗಾಗಿ" (ಇಬ್ರಿಯ 10:10, 12) ಯಜ್ಞವನ್ನು ಸಮರ್ಪಿಸಿದ್ದಾನಾದ್ದರಿಂದ ಇದು ಒಂದು ಯಜ್ಞವೇದಿ ಆಗಿರುವದಕ್ಕೆ ಸಾಧ್ಯವಿಲ್ಲ ಎಂದು ಕೆಲವರು ವಾದಿಸುತ್ತಾರೆ, ಆದರೆ ಕ್ರೈಸ್ತರು ಸಹ ದೇವರಿಗೆ ಕಾಣಿಕೆಗಳಾಗಿ ಅಥವಾ ಯಜ್ಞಗಳಾಗಿ ಅರ್ಪಿಸಿಕೊಳ್ಳುವರೆಂಬುದಾಗಿ

ಮಾತಾಡಲ್ಪಟ್ಟಿದೆ (ಇಬ್ರಿಯ 13:15; ನೋಡಿರಿ ರೋಮಾ 12:1).

ಹಳೆಯ ಒಡಂಬಡಿಕೆಯಲ್ಲಿ, ಸರ್ವಾಂಗಹೋಮ ವೇದಿಯ ಮೇಲೆ ಯಜ್ಞಗಳನ್ನು ಅರ್ಪಿಸುತ್ತಿರುವಾಗ, ಯಾಜಕನು ಯಜ್ಞವಾಗಿ ಸಮರ್ಪಿಸಲಾಗುತ್ತಿರುವ ಪ್ರಾಣಿಯ "ರಕ್ತವನ್ನೆಲ್ಲಾ" ತೆಗೆದುಕೊಂಡು "ಯಜ್ಞವೇದಿಯ ಬುಡಕ್ಕೆ ಸುರಿದು" ಬಿಡುತ್ತಿದ್ದನು (ಯಾಜಕಕಾಂಡ 4:18; ನೋಡಿರಿ ವಿಮೋಚನಕಾಂಡ 29:12; ಯಾಜಕಕಾಂಡ 4:7, 30). Josephusನ ಪ್ರಕಾರವಾಗಿ, ದೋಷಪರಿಹಾರಕ ದಿನದ ವೇಳೆಯಲ್ಲಿ, ರಕ್ತವು ಯಜ್ಞವೇದಿಯ ಸುತ್ತಲು ಮೊಣಕಾಲಷ್ಟು ಆಳವಾಗಿರುತ್ತಿತ್ತು. ರಕ್ತವನ್ನು ಭೂಮಿಯ ಮೇಲೆ ಸುರಿದು ಬಿಡುವದು ಆ ಧಾರ್ಮಿಕ ಆಚಾರದಲ್ಲಿ ಒಂದು ಪ್ರಾಮುಖ್ಯವಾದ ಭಾಗವಾಗಿತ್ತು, ಯಾಕೆಂದರೆ "ಪ್ರತಿ ದೇಹಿಗೂ ರಕ್ತವೇ ಪ್ರಾಣಾಧಾರ" ಎಂದು ದೇವರು ಹೇಳಿದ್ದನು (ಯಾಜಕಕಾಂಡ 17:11; ನೋಡಿರಿ ಯಾಜಕಕಾಂಡ 17:14; ಧರ್ಮೋಪದೇಶಕಾಂಡ 12:23). ರಕ್ತಸಾಕ್ಷಿಗಳ ಆತ್ಮಗಳು ಯಜ್ಞವೇದಿಯ ಕೆಳಗೆ ಇದ್ದವೆಂಬ ವಾಸ್ತವಾಂಶದಿಂದ ತಿಳಿಯುವದೇನೆಂದರೆ ಅವರ ರಕ್ತವು ಕರ್ತನಿಗೋಸ್ಕರ ಯಜ್ಞವಾಗಿ ಸುರಿಯಲ್ಪಟ್ಟಿತ್ತು ಎಂಬುದೆ.

ಈ ಸಾಂಕೇತಿಕತೆಯು ಹೇಬೆಲನ ರಕ್ತವು ಭೂಮಿಯೊಳಗಿಂದ ಕೂಗುತ್ತಿರುವದನ್ನು (ಆದಿಕಾಂಡ 4:10) ವಾಚಕರಿಗೆ ಜ್ಞಾಪಕಗೊಳಿಸುವ ಉದ್ದೇಶದಿಂದ ಸಹ ಹೇಳಲ್ಪಟ್ಟಿರಬಹುದಾಗಿದೆ. ಅಷ್ಟುಮಾತ್ರವಲ್ಲದೆ, ಪೌಲನು 2 ತಿಮೊಥೆ 4:6ರಲ್ಲಿ ತನಗೆ ಸನ್ನಿಹಿತವಾಗಿದ್ದ ರಕ್ತಸಾಕ್ಷಿಯ ಮರಣವನ್ನು ಕುರಿತು ಮಾತಾಡುವ ವೇಳೆ ಇದೇ ರೀತಿಯ ಸಂಕೇತವನ್ನು ಬಳಸಿದನು: "ಯಾಕೆಂದರೆ ನಾನಂತೂ ಈಗಲೇ ಪಾನದ್ರವ್ಯವಾಗಿ ಅರ್ಪಿತನಾಗುತ್ತಾ ಇದ್ದೇನೆ; ನಾನು ಹೊರಟು ಹೋಗಬೇಕಾದ ಸಮಯವು ಸಮೀಪಕ್ಕೆ ಬಂದಿದೆ."

**ವಚನ 10.** ಯಜ್ಞವಾಗಿ ಅರ್ಪಿತವಾಗಿದ್ದವರು ಕೇಳಿದ ಪ್ರಶ್ನೆಯು ಈ ದೃಶ್ಯದಲ್ಲಿ ಪ್ರಮುಖ ಅಂಶವಾಗಿದೆ: **ಅವರು - ಒಡೆಯನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ, ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀನು ಎಷ್ಟು ಕಾಲದ ವರೆಗೂ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ? ಎಂದು ಮಹಾ ಶಬ್ದದಿಂದ ಕೂಗಿದರು.** ಈ ಪ್ರಶ್ನೆಯು ಒಂದು ದೂರಿನ ಶ್ವಾಸವನ್ನೊಳಗೊಂಡಿರಬಹುದು, ಆದರೆ ಅದು ಯಾವದೇ ಅಗೌರವವನ್ನೇನೂ ವ್ಯಕ್ತಪಡಿಸುವದಿಲ್ಲ. **ಒಡೆಯನು** ಎಂಬುದು δεσπότης (*despotēs*) ಎಂಬ ಪದದ ಅನುವಾದವಾಗಿರುತ್ತದೆ, ಈ ಪದದಿಂದಲೇ "despot" (ನಿರಂಕುಶ ಪ್ರಭು) ಎಂಬ ಪದವು ಬಂದಿರುತ್ತದೆ, ಸಂಪೂರ್ಣ ಅಧಿಕಾರವನ್ನು ಹೊಂದಿರುವ ಒಬ್ಬ ಅರಸನು. ಇದು ತನ್ನ ಜೀವಿತದ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿರುತ್ತಿದ್ದವನನ್ನು ಕರೆಯುವದಕ್ಕೆ ಒಬ್ಬ ಗುಲಾಮನು ಬಳಸುತ್ತಿದ್ದ ಪದವಾಗಿರುತ್ತದೆ. ಅನೇಕ ತರ್ಜುಮೆಗಳಲ್ಲಿ "ಸಾರ್ವಭೌಮ ಒಡೆಯನು" ಎಂದು ಇರುತ್ತದೆ. "ಯಜಮಾನ" ಎಂಬುದು ಸಹ ಒಂದು ಉತ್ತಮ ಅನುವಾದವಾಗುವದು. **ಪರಿಶುದ್ಧ** ಎಂಬ ಪದವು ದೇವರು ಪಾಪವನ್ನು ಸಹಿಸಲಾರನು ಮತ್ತು ಆ ಕಾರಣದಿಂದ ಹಿಂಸಕರ ದುರಹಂಕಾರವನ್ನು ಎಂದೆಂದಿಗೂ ಸಹಿಸಿಕೊಳ್ಳುತ್ತಲೇ ಇರುವವನಲ್ಲ ಎಂಬುದನ್ನು ಒಪ್ಪಿಕೊಳ್ಳುವದಾಗಿದೆ. ದೇವರನ್ನು **ಸತ್ಯವಂತನು** ಎಂದು ಕರೆಯುವದು ಆತನು ತನ್ನ ವಾಗ್ದಾನಗಳನ್ನು ಕಾಪಾಡಿಕೊಳ್ಳುತ್ತಾನೆಂಬುದನ್ನು ಸೂಚಿಸುವದಾಗಿತ್ತು - ಅದರಲ್ಲಿ ಆತನ ಜನರಿಗಾಗಿರುವ ಅನ್ಯಾಯಕ್ಕೆ ಪ್ರತಿದಂಡನೆಯನ್ನು ಸಲ್ಲಿಸುವದು ಸಹ ಸೇರಿತ್ತು. ಈ ವಿಶ್ವಾಸಿಗಳಿಗೆ ಸಂಬಂಧ ಪಟ್ಟಂತೆ, ದೇವರು ಅವರ ನ್ಯಾಯವನ್ನು ಸ್ಥಾಪಿಸುವನೋ *ಇಲ್ಲವೋ* ಎಂಬುದಾಗಿರಲಿಲ್ಲ, ಆದರೆ *ಯಾವಾಗ* ಎಂಬ

ಪ್ರಶ್ನೆಯೇ ಆಗಿತ್ತು.

**ವಚನ 11.** ಆರಂಭದಲ್ಲಿ ದೇವರು ದೇವಜನರ ಕೂಗನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲವೇನೋ ಎಂಬಂತೆ ತೋರುತ್ತದೆ. "ಇನ್ನೆಷ್ಟು ಕಾಲ?" ಎಂಬ ಪ್ರಶ್ನೆಯು ಉತ್ತರಿಸಲ್ಪಡದೆ ಗಾಳಿಯಲ್ಲಿಯೇ ನೇತಾಡುತ್ತಿರುವಂತೆ ಕಾಣಿಸುತ್ತದೆ.

> **ಅವರಲ್ಲಿ ಒಬ್ಬೊಬ್ಬನಿಗೆ ಒಂದೊಂದು ಬಿಳಿ ನಿಲುವಂಗಿಯು ಕೊಡಲ್ಪಟ್ಟಿತು. ಇದಲ್ಲದೆ – ನಿಮ್ಮ ಹಾಗೆ ಕೊಲೆಯಾಗಬೇಕಾಗಿರುವ ನಿಮ್ಮ ಸಹೋದರರ ಮತ್ತು ನಿಮ್ಮ ಜೊತೆದಾಸರ ಸಂಖ್ಯೆಯೂ ಪೂರ್ಣವಾಗುವ ತನಕ ಇನ್ನೂ ಸ್ವಲ್ಪ ಕಾಲ ವಿಶ್ರಮಿಸಿಕೊಂಡಿರಬೇಕೆಂದು ಅವರಿಗೆ ಉತ್ತರವಾಯಿತು**.

ಹೇಗೂ, ವ್ಯವಸ್ಥೆಗೊಳಿಸುವಿಕೆ, ಕ್ರಿಯೆ, ಮತ್ತು ಬುದ್ಧಿವಾದಗಳೊಳಗೆ ಮೂರು ಭಾಗಗಳನ್ನೊಳಗೊಂಡ ಒಂದು ಉತ್ತರವು ಇರುತ್ತದೆ. ಮೂಲಭೂತ ಉತ್ತರವು ಏನೆಂದರೆ "ಯಾವದು ಸರಿಯೋ ಅದನ್ನು ಮಾಡುತ್ತೇನೆಂದು ನೀವು ನನ್ನಲ್ಲಿ ಭರವಸವನ್ನು ಇಡತಕ್ಕದ್ದು." ಮೂರು ಭಾಗಗಳು ಈ ವಿಧವಾಗಿರುತ್ತವೆ:

1. *"ನನ್ನ ಮೇಲೆ ಭರವಸವಿಡಿರಿ: ನಿಮಗೆ ಅರ್ಥವಾಗುವದಿಲ್ಲ."* ಅವರಿಗೆ ಯಾರು ವಸ್ತ್ರಗಳನ್ನು ಕೊಟ್ಟರು? ಅವರಿಗೆ ಯಾರು "ವಿಶ್ರಮಿಸಿಕೊಂಡಿರಿ" ಎಂದು ಹೇಳಿದರು? ಬಹುಶಃ ದೇವದೂತರು ಅವರಿಗೆ ವಸ್ತ್ರಗಳನ್ನು ಕೊಟ್ಟಿರಬೇಕು (ಇಬ್ರಿಯ 1:13, 14). ಆ ಬುದ್ಧಿವಾದವು ಸ್ವತಃ ಯಜ್ಞವೇದಿಯಿಂದಲೇ ಬಂದಿರಬಹುದಾಗಿದೆ (ನೋಡಿರಿ 9:13). ಇಲ್ಲಿ ಪ್ರಾಮುಖ್ಯವಾದದ್ದೇನೆಂದರೆ ಕ್ರಿಯೆ ಮತ್ತು ಮಾತುಗಳ ಹಿಂದೆ ದೇವರು ಇದ್ದನು ಎಂಬುದೆ. ರಕ್ತಸಾಕ್ಷಿಗಳಿಗೆ ವಸ್ತ್ರಗಳು ಕೊಡಲ್ಪಟ್ಟವು ಮತ್ತು "ವಿಶ್ರಮಿಸಿಕೊಂಡಿರಿ" ಎಂದು ಹೇಳಲ್ಪಟ್ಟರು ಎಂಬ ವಾಸ್ತವಾಂಶವು ನಮಗೆ ತಿಳಿಯಪಡಿಸುವದೇನೆಂದರೆ, ದೇವರು ಅವರನ್ನು ನಿರ್ಲಕ್ಷ್ಯ ಮಾಡಲಿಲ್ಲ ಮತ್ತು ಅವರ ಪ್ರಶ್ನೆಯನ್ನು ನಿರ್ಲಕ್ಷಿಸಲಿಲ್ಲ. ಹಾಗಾದರೆ, ಏಕೆ ಆತನು ಪ್ರತ್ಯುತ್ತರವನ್ನು ನೀಡಲಿಲ್ಲ? ಬಹುಶಃ ಅವರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ದೇವರ ಒಟ್ಟಾರೆಯಾದ ಯೋಜನೆಗಳು ಮತ್ತು ಉದ್ದೇಶಗಳಿಗೆ ಸಂಬಂಧ ಪಟ್ಟಂತೆ, ಮಾನವರು ಅರ್ಥಮಾಡಿಕೊಳ್ಳುವದಕ್ಕೆ ಅಸಮರ್ಥರಾಗಿರುತ್ತಾರೆ (ಯೆಶಾಯ 55:8, 9). ದೇವರು ಯೋಬನ ಮಾಡಿದ ದೂರುಗಳಿಗೆ ನೇರವಾಗಿ ಉತ್ತರಿಸಲಿಲ್ಲ, ಆದರೆ ಬದಲಾಗಿ ಗ್ರಹಿಸಿಕೊಳ್ಳುವದಕ್ಕೆ ಯೋಬನಿಗಿದ್ದ ಅಸಮರ್ಥತೆಯನ್ನು ಸಾಭಿತುಗೊಳಿಸಲು ಯೋಬನಿಗೆ ಒಂದಾದ ಮೇಲೊಂದರಂತೆ ಪ್ರಶ್ನೆಗಳನ್ನು ಕೇಳಿದನು ಎಂಬ ವಾಸ್ತವಾಂಶದೊಂದಿಗೆ ಸಮವಾದ ಹೋಲಿಕೆಯನ್ನು ಮಾಡಬಹುದಾಗಿದೆ. J. W. Robertsನು ಹೀಗೆ ಹೇಳುತ್ತಾನೆ, "ಸಾಲು ಸಾಲು ಪ್ರಶ್ನೆಗಳಿಗಿಂತಲೂ ದೇವರ ಕಳಕಳಿಯು ವಿಶಾಲವಾದದ್ದಾಗಿದೆ"[14] – ಮತ್ತು ಇದು ಸತ್ಯವಾಗಿದ್ದು ಅದರಲ್ಲಿ ಯಾವ ಸಂಶಯವೂ ಇರುವದಿಲ್ಲ. ರಕ್ತಸಾಕ್ಷಿಗಳು ವರ್ತಮಾನಕಾಲದ ಕುರಿತು ಕಳಕಳಿಯನ್ನು ಹೊಂದಿದ್ದರೆ, ಕರ್ತನಾದರೋ ದೂರದ ಕಾಲವನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿದ್ದನು.

2. *"ನನ್ನಲ್ಲಿ ಭರವಸವಿಡಿರಿ; ನನಗೆ ನಿಮ್ಮ ಕುರಿತು ಚಿಂತೆಯಿರುತ್ತದೆ."* ದೇವರು ಪ್ರಶ್ನೆಗೆ ಯಾವದೇ ನೇರವಾದ ಮೌಖಿಕ ಉತ್ತರವನ್ನು ಕೊಡದಿದ್ದಾಗ್ಯೂ, ಆತನು ಮೌನದಿಂದ ಇದ್ದದ್ದು ಆತನಿಗೆ ಕಾಳಜಿಯೇ ಇರಲಿಲ್ಲ ಎಂಬುದನ್ನು ಸೂಚಿಸಲಿಲ್ಲ. ಹಿಂಸೆ ಹಾಗೂ ಸಂಕಷ್ಟಗಳು ದೇವರ ಪ್ರೀತಿಯನ್ನು ಇಲ್ಲದಂತೆ ಮಾಡುವದಿಲ್ಲ.

> ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ

ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ? ದೇವರೇ, ನಾವು ನಿನ್ನ ನಿಮಿತ್ತ ದಿನವೆಲ್ಲಾ ಕೊಲೆಗೆ ಗುರಿಯಾಗಿದ್ದೇವೆ; ಜನರು ನಮ್ಮನ್ನು ಕೊಯ್ಗುರಿಗಳಂತೆ ಎಣಿಸಿದರು. ಎಂಬದಾಗಿ ಬರೆದಿರುವಂತೆ ಆಗುತ್ತದಲ್ಲಾ. ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ, 38ಹೇಗಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ 39ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು (ರೋಮಾ 8:35-39).

ನಾವು ಅಧ್ಯಯನ ಮಾಡುತ್ತಿರುವ ವಾಕ್ಯಭಾಗದಲ್ಲಿ, ದೇವರು ಪ್ರತಿಯೊಬ್ಬೊಬ್ಬ ದೇವಮನುಷ್ಯನಿಗೆ **ಬಿಳಿ ವಸ್ತ್ರವನ್ನು** ಕೊಡುವ ಮೂಲಕ ತನ್ನ ಪ್ರೀತಿಯನ್ನು ತೋರ್ಪಡಿಸಿದನು. "ವಸ್ತ್ರ" ಎಂಬುದಕ್ಕಿರುವ ಗ್ರೀಕ್ ಪದವು στολή (*stolē*), ಇದರ ಅರ್ಥವು "ಒಂದು ಉದ್ದವಾದ ಕಟ್ಟೆರದ ಉಡುಪು,"[15] ಈ ಸಂದರ್ಭದಲ್ಲಿ ಮಾತ್ರವೇ ಪ್ರಕಟನೆ ಪುಸ್ತಕದೊಳಗೆ ಈ ನಿರ್ದಿಷ್ಟವಾದ ಪದವು ಮೊಟ್ಟಮೊದಲ ಬಾರಿಗೆ ಬಳಸಲ್ಪಟ್ಟಿರುತ್ತದೆ; ಇದು ಪುನಃ 7:9, 13; 22:14ರಲ್ಲಿ ಬಳಸಲ್ಪಡುವದು. *Stolē* ಎಂಬುದು 1:13ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಅದೇ ವಿಧವಾದ ಉಡುಪನ್ನು ಸೂಚಿಸುತ್ತದೆ: "ಪಾದದ ವರೆಗೂ ಇರುವ ನಿಲುವಂಗಿ [ಅಥವಾ ವಸ್ತ್ರ]." "ವಸ್ತ್ರ" ಅಥವಾ "ನಿಲುವಂಗಿ" ಎಂಬುದರ ಹೆಚ್ಚು ಸಾಮಾನ್ಯವಾದ ಪದವಾಗಿರುವ ἱμάτιον (*himation*) 3:4, 5, 18; 4:4; 16:15; 19:13, 16ರಲ್ಲಿ ಸಿಕ್ಕುತ್ತದೆ. ಪ್ರಕಟನೆ ಪುಸ್ತಕದಲ್ಲಿ ಆ ಎರಡು ಪದಗಳ ಅರ್ಥದಲ್ಲಿ ಅಷ್ಟೊಂದು ಗಣನೀಯವಾದ ವ್ಯತ್ಯಾಸವೇನೂ ಇರುವದಿಲ್ಲ.

ಪ್ರಕಟನೆ ಪುಸ್ತಕದಲ್ಲಿ ದೇವರ ಅನುಮೋದನೆಗೆ ಪಾತ್ರರೆಂಬುದನ್ನು ಸೂಚಿಸುವದಕ್ಕಾಗಿ ಬಿಳಿ ವಸ್ತ್ರಗಳು ಪದೇ ಪದೇ ಪ್ರಸ್ತಾಪಿಸಲ್ಪಟ್ಟಿರುತ್ತವೆ: ಇವುಗಳು *ವಾಗ್ದಾನದ ವಸ್ತ್ರಗಳು* ಆಗಿದ್ದವು. ಏಳು ಸಭೆಗಳಿಗೆ ಬರೆದ ಪತ್ರಗಳಲ್ಲಿ, ಜಯ ಹೊಂದುವವರಿಗೆ "ಬಿಳಿ ವಸ್ತ್ರಗಳು" ಕೊಡಲ್ಪಡುತ್ತವೆಂದು ವಾಗ್ದಾನ ಮಾಡಲ್ಪಟ್ಟಿರುತ್ತದೆ (3:5). ಇವುಗಳು *ಜಯದ ವಸ್ತ್ರಗಳು.* ಬಿಳಿಯು ಜಯದ ಬಣ್ಣವಾಗಿದೆ (6:2; 7:9; 19:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಭೂನಿವಾಸಿಗಳಿಗೆ ಅದು ಹೇಗೆ ಕಂಡಿದ್ದರೂ ಸರಿಯೇ, ಕ್ರೈಸ್ತತ್ವದ ಧ್ಯೇಯವು ವಿಜಯಶಾಲಿ ಆಗಿತ್ತು. ಇವುಗಳ *ಸನ್ಮಾನದ ವಸ್ತ್ರಗಳು* ಆಗಿದ್ದವು. John Bowmanನು ಬಿಳಿ ವಸ್ತ್ರಗಳನ್ನು ಪರಲೋಕದ ಸಿಂಹಾಸನ ಕೋಣೆಯಲ್ಲಿ ಧರಿಸಿರಬೇಕಾಗಿದ್ದ "'ಆಸ್ಥಾನದ ಉಡುಪು' ಎಂದು ಕರೆಯುತ್ತಾ, ಆತನು ಹೇಳಿದ್ದೇನೆಂದರೆ "ಆ ಮಂಡಲದ ಉದಾತ್ತತೆಯುಳ್ಳವರಲ್ಲದೆ ಬೇರೆ ಇನ್ನಾರು ಸೂಕ್ತವಾದ ವೇಷದಲ್ಲಿ ಅರಸನ ಮುಂದಕ್ಕೆ ಕರೆದೊಯ್ಯಲ್ಪಡುವರು?"[16] ಆ ದಿನಗಳಲ್ಲಿ ವಿಶೇಷ ಸಂದರ್ಭಕ್ಕೆ ತಕ್ಕದಾದ ಉಡುಪು ಧರಿಸಿಕೊಳ್ಳುವದರ ಅವಶ್ಯಕತೆಯ ಕುರಿತು ಮತ್ತಾಯ 22:11-13ರಲ್ಲಿ ಕಾಣಬಹುದಾಗಿದೆ. ಪ್ರಕಟನೆ ಪುಸ್ತಕದ ಮುಂದಿನ ಅಧ್ಯಾಯದಲ್ಲಿ, "ಮಹಾಸಮೂಹವು . . . ಯಜ್ಞದ ಕುರಿಯಾದಾತನ ಮುಂದೆ ನಿಂತಿದ್ದ" ಅವರು "ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡಿದ್ದರು" (7:9).

ದೇವಜನರಿಗೆ ವಸ್ತ್ರಗಳನ್ನು ಕೊಡುವದರಲ್ಲಿ, ದೇವರು ಅವರಿಗೆ "ನಾನು ನಿ ಮ್ಮನ್ನು ಮರೆತಿರುವದಿಲ್ಲ. ನೀವು ಏನೇನು ಸಹಿಸಿಕೊಂಡಿರುವಿರೆಂಬುದು ನನಗೆ ತಿಳಿದದೆ, ಮತ್ತು ನಿಮ್ಮ ವಿಷಯದಲ್ಲಿ ನನಗೆ ಹೆಮ್ಮೆಯಿದೆ. ನನ್ನ ಪ್ರೀತಿಗೆ ಪುರಾವೆಯಾಗಿಯೂ ನಿಮ್ಮ ನಿತ್ಯವಾದ ಸಂತೋಷಕ್ಕೆ ಒಂದು ಕರಾರು ಆಗಿಯೂ ಈ ವಸ್ತ್ರಗಳನ್ನು ನಿಮಗೆ ತೊಡಿಸುತ್ತೇನೆ" ಎಂದು ಹೇಳುವವನಾಗಿದ್ದನು. ಅವರಿಗೆ ನಿಖರವಾದ ಕಾಲಾವಧಿಯು

ಎಷ್ಟೆಂಬುದು ಹೇಳಲ್ಪಡಲಿಲ್ಲವಾದರೂ, ಅಂತಿಮವಾಗಿ ಹಿಂಸೆಯು ಅಂತ್ಯಗೊಳ್ಳುವದೆಂಬ ಭರವಸಯಿಂದಿರಬಹುದಿತ್ತು.

3. *"ನನ್ನಲ್ಲಿ ಭರವಸವಿಡಿರಿ: ಎಲ್ಲವೂ ಸರಿಯಾಗುವದು."* ದೇವರು ದೇವಜನರಿಗೋಸ್ಕರ ಏನೋ ಒಂದನ್ನು *ಮಾಡಿದ್ದು* ಮಾತ್ರವೇ ಆಗಿರಲಿಲ್ಲ, ಆತನು ಅವರಿಗೆ ಏನನ್ನೋ ಸಹ *ಹೇಳಿದನು.* ಅವರಿಗೆ **ಇನ್ನೂ ಸ್ವಲ್ಪ ಕಾಲ ವಿಶ್ರಮಿಸಿಕೊಂಡಿರಬೇಕು.** "ಸ್ವಲ್ಪ ಕಾಲ" ಎಂಬ ಪದಗುಚ್ಛವು ಉದ್ದೇಶಪೂರ್ವಕವಾಗಿಯೇ ಅಸ್ಪಷ್ಟವಾಗಿರುತ್ತದೆ. ಈ ವಾಕ್ಯಭಾಗದಲ್ಲಿ ಈ ಪದಗುಚ್ಛದ ಉದ್ದೇಶವು ಹಿಂಸೆಯು ಸದಾಕಾಲವೂ ಇರುವಂಥದ್ದಲ್ಲ ಎಂಬ ಭರವಸವನ್ನು ಕ್ರೈಸ್ತರಿಗೆ ಕೊಡುವದೇ ಆಗಿತ್ತು. ಅವರಿಗೆ ನಿಖರವಾದ ಕಾಲಾವಧಿಯು ಇಂತಿಷ್ಟು ಎಂದು ಹೇಳಲ್ಪಡಲಿಲ್ಲವಾದಾಗ್ಯೂ, ಅಂತಿಮವಾಗಿ ಹಿಂಸೆಯು ಅಂತ್ಯಕ್ಕೆ ಬರಲಿದೆ ಎಂಬ ದೃಢವಿಶ್ವಾಸವನ್ನು ಅವರು ಪಡೆದುಕೊಳ್ಳಬಹುದಾಗಿತ್ತು.

"ವಿಶ್ರಮಿಸು" ಎಂದು ಅನುವಾದಿಸಲ್ಪಟ್ಟಿರುವ ἀναπαύω (*anapauō*) ಎಂಬ ಪದದಿಂದ ಬಂದಿರುವ ಪದದ ಅರ್ಥವು "ತಾಳು" ಮತ್ತು ಸೂಚ್ಯಾರ್ಥವಾಗಿ, "ತಾಳ್ಮೆಯಿಂದಿರುವದು" ಎಂದಾಗಿರುತ್ತದೆ. "ಅವರಿಗೆ ಇನ್ನೂ ಸ್ವಲ್ಪ ಕಾಲ ಮೌನವಾಗಿರುವಂತೆ ತಿಳಿಸಲಾಯಿತು"[17] ಎಂದು Goodspeed ತರ್ಜುಮೆಯು ಹೇಳುತ್ತದೆ. ಪ್ರಕಟನೆ ಪುಸ್ತಕದೊಳಗೆ ಅನಂತರದಲ್ಲಿ, ಈ ಪದವು "ಆರಾಮದಾಯಕತೆ ಮತ್ತು ಶಾಂತತೆಯನ್ನು" ಸೂಚಿಸುತ್ತದೆ: "ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು . . . ಅದಕ್ಕೆ ಆತ್ಮನು - ಹೌದು, ಅವರು ಧನ್ಯರೇ; ಅವರ ಕಷ್ಟವು ತೀರಿತು, ಅವರಿಗೆ *ವಿಶ್ರಾಂತಿ*ಯಾಗುವದು" (14:13; ಒತ್ತಿ ಹೇಳಿದ್ದು ನನ್ನದು). 6:11ರಲ್ಲಿ "ವಿಶ್ರಾಂತಿ" ಎಂಬುದರ ಅರ್ಥವು ಬಹುಶಃ 14:13ರಲ್ಲಿರುವ ಅದೇ ಅರ್ಥವೇ ಆಗಿರಬಹುದು.

ರಕ್ತಸಾಕ್ಷಿಗಳಿಗೆ **ನಿಮ್ಮ ಹಾಗೆ ಕೊಲೆಯಾಗಬೇಕಾಗಿರುವ ನಿಮ್ಮ ಸಹೋದರರ ಮತ್ತು ನಿಮ್ಮ ಜೊತೆದಾಸರ ಸಂಖ್ಯೆಯೂ ಪೂರ್ಣವಾಗುವ ತನಕ** ವಿಶ್ರಮಿಸಿಕೊಳ್ಳಬೇಕೆಂದು ಹೇಳಲಾಯಿತು. ಇಲ್ಲಿ ಬಳಸಿರುವ ಪರಿಭಾಷೆಯು ದೇವರ ಕೈಯಲ್ಲಿ ಒಂದು ಗಣಕವನ್ನು ಹಿಡಿದುಕೊಂಡಿದ್ದು ಒಂದು ನಿರ್ದಿಷ್ಟವಾದ ಸಂಖ್ಯೆಯು ತಲುಪುವ ತನಕ ಕೊಲ್ಲಲ್ಪಡುವವರ ಲೆಕ್ಕವನ್ನು ಮಾಡುತ್ತಿದ್ದಾನೆ ಎಂಬ ಅನಿಸಿಕೆಯನ್ನುಂಟು ಮಾಡುತ್ತದೆ. NASB ತರ್ಜುಮೆಯಲ್ಲಿ "ಅವರ ಸಂಖ್ಯೆಯೂ" ಎಂಬ ಮಾತುಗಳು italicsನಲ್ಲಿ ಇದ್ದು, ಅವುಗಳು ಅನುವಾದಕರಿಂದ ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಲ್ಪಟ್ಟಿರುತ್ತವೆ ಎಂಬುದನ್ನು ಸೂಚಿಸುತ್ತವೆ. ಮೂಲ ವಾಕ್ಯವು ಕೇವಲ "ಅವರ ಹಾಗೆಯೇ ಕೊಲೆಯಾಗಬೇಕಾಗಿರುವ ಅವರ ಜೊತೆ ಸೇವಕರ ಮತ್ತು ಅವರ ಸಹೋದರರ ಸಂಖ್ಯೆಯು ಸಹ ಸಂಪೂರ್ಣಗೊಳ್ಳತಕ್ಕದ್ದು [ಅಥವಾ ನೆರವೇರಬೇಕು]" ಎಂದಷ್ಟೆ ಹೇಳುತ್ತದೆ. NCVಯು ಈ ವಿಚಾರವನ್ನು ತಿಳಿಯಪಡಿಸುತ್ತದೆ: "ಕ್ರಿಸ್ತನ ಸೇವೆಯಲ್ಲಿರುವ ಅವರ ಜೊತೆ ದಾಸರು ಹಾಗೂ ಸಹೋದರರೊಳಗೆ ಅವರ ಹಾಗೆಯೇ ಕೊಲ್ಲಲ್ಪಡಬೇಕಾಗಿರುವವರು ಇನ್ನೂ ಸ್ವಲ್ಪ ಜನರು ಇರುತ್ತಾರೆ." Leon Morrisನು 11ನೇ ವಚನದ ಕಡೇ ವಚನದ ಮೇಲೆ ವ್ಯಾಖ್ಯಾನವನ್ನು ಮಾಡಿರುತ್ತಾನೆ,

> ಇದರ ಅರ್ಥವು ದೇವರು ಒಂದು ನಿರ್ದಿಷ್ಟವಾದ ಸಂಖ್ಯೆಯ ರಕ್ತಸಾಕ್ಷಿಗಳನ್ನು ಬಯಸುವವನಾಗಿದ್ದು ಅದು ಹೇಗಾದರೂ ನೆರವೇರುವ ತನಕ ಆತನು ಕಾಯುತ್ತಾನೆ ಎಂದಾಗಿರುವದಿಲ್ಲ. [ಬದಲಾಗಿ, ಇದರ ಅರ್ಥವೇನೆಂದರೆ] ಆತನು ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿದ್ದಾನೆ ಮತ್ತು ಆ ಯೋಜನೆಯನ್ನು ಇತರ ರಕ್ತಸಾಕ್ಷಿಗಳಿಗೆ ಒಂದು ಸ್ಥಾನವಿರುತ್ತದೆ. ಆ ಯೋಜನೆಯು ಅವಸರ ಪಡಿಸಲ್ಪಡುವದೂ ಇಲ್ಲ ವಿಳಂಬ ಮಾಡಲ್ಪಡುವದೂ ಇಲ್ಲ.[18]

ಇನ್ನೂ ಸ್ವಲ್ಪ ಸಮಯವು ಗತಿಸುವಂತೆ ಮಾಡಿ, ಆ ಮೂಲಕ ಇನ್ನಷ್ಟು ಕ್ರೈಸ್ತರು ಸಾಯುವಂತೆ ಅನುಮತಿಸುವದನ್ನು ದೇವರು ಹೇಗಾದರೂ ಸಮರ್ಥನೆ ಮಾಡಿಕೊಳ್ಳುವದಕ್ಕೆ ಸಾಧ್ಯವಿರುತ್ತದೆ? ದೇವರು ಭಕ್ತರ ಮರಣವನ್ನು ನಾವು ನೋಡುವ ರೀತಿಯಲ್ಲಿ ನೋಡುವವನಲ್ಲ (ಕೀರ್ತನೆ 116:15). ಪೇತ್ರನ ದಿನದಲ್ಲಿ, ಕೆಲವರು ಇನ್ನೂ ಏಕೆ ಕರ್ತನು ಹಿಂದಿರುಗಿ ಬಂದಿರುವದಿಲ್ಲ ಎಂದು ಚಕಿತಗೊಂಡಿದ್ದರು (2 ಪೇತ್ರ 3:3, 4). ದೇವರು ಅವರನ್ನು ನಾವು ನೋಡುವ ರೀತಿಯಲ್ಲಿ ನೋಡುವವನಲ್ಲ (2 ಪೇತ್ರ 3:8) ಎಂಬುದನ್ನು ಒತ್ತಿ ಹೇಳಿದ ಬಳಿಕ, ಯೇಸುವಿನ ಪುನರಾಗಮನವು ಏಕೆ ವಿಳಂಬವಾಗಿರುತ್ತದೆ ಎಂಬುದನ್ನು ವಿವರಿಸುತ್ತಾನೆ: "ಕರ್ತನು ತನ್ನ [ಪುನರಾಗಮನ] ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥಮಾಡಿಕೊಂಡಿರುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ" (2 ಪೇತ್ರ 3:9). "ವಿಳಂಬವಾಗುವ ಪ್ರತಿಯೊಂದು ಕ್ಷಣವು ಒಂದು ಸುವಾರ್ತಾಸೇವೆಯ ವರದಾನವಾಗಿರುತ್ತದೆ."[19] ದೇವರು ಹಿಂಸಕರನ್ನು ತಕ್ಷಣದಲ್ಲೇ ದಂಡಿಸದೆ ಇರುವದಕ್ಕೆ ಒಂದು ಕಾರಣವು ಏನಾಗಿತ್ತೆಂದರೆ, ಪಶ್ಚಾತ್ತಾಪ ಪಡುವದಕ್ಕಾಗಿ ಅವರಿಗೊಂದು ಸದವಕಾಶವನ್ನು ಕೊಡಬೇಕೆಂದು ಆತನು ಬಯಸಿದನು.

ನಾವು ದೇವರ ಉತ್ತರದಲ್ಲಿರುವ ವಿಚಾರಗಳನ್ನು ಒಂದುಗೂಡಿಸುವಾಗ, ಕರ್ತನಿಂದ ನಮಗೆ ಈ ಮೂಲಭೂತವಾದ ಸಲಹೆಯು ಸಿಕ್ಕುತ್ತದೆ: "ನಾನು ನನ್ನ ಯೋಜನೆಗಳನ್ನು ಕಾರ್ಯಸಾಧಿಸುತ್ತಿದ್ದೇನೆ. ಆ ಯೋಜನೆಗಳು ಇನ್ನೂ ಸ್ವಲ್ಪ ಕಾಲವನ್ನು ತೆಗೆದುಕೊಳ್ಳುತ್ತವೆ. ಆದರೆ ಅವುಗಳು ಕಾರ್ಯಸಾಧಿಸಲ್ಪಡುತ್ತಿದ್ದಾವೋ ಎಂಬುದಾಗಿ ಸಂಶಯವನ್ನಂತೂ ಎಂದಿಗೂ ಇಟ್ಟುಕೊಳ್ಳಬೇಡಿರಿ. ಅವುಗಳನ್ನು ತ್ವರಿತಗೊಳಿಸುವದಕ್ಕಾಗಿ ನೀವು ಏನನ್ನೂ ಮಾಡುವದಕ್ಕೆ ಸಾಧ್ಯವಿಲ್ಲ, ಆದ್ದರಿಂದ ನೀವು ಕಾಯುತ್ತಿರುವ ವೇಳೆಯಲ್ಲಿ, ತಾಳ್ಮೆಯಿಂದಿರಿ. ಕಳವಳ ಪಡುವದರ ಬದಲಾಗಿ, ನಿಮ್ಮ ರಕ್ಷಿಸಲ್ಪಟ್ಟ ಸ್ಥಿತಿಯ ಆಶೀರ್ವಾದಗಳನ್ನು ಆನಂದಿಸಿರಿ!" ಬೇರೆ ಮಾತುಗಳಲ್ಲಿ ಹೇಳುವದಾದರೆ, "ನನ್ನಲ್ಲಿ ಭರವಸವಿಡಿರಿ; ಎಲ್ಲವೂ ಸರಿಯಾಗುವದು."

ಬೈಬಲಿನೊಳಗೆ ಜನರು ದೇವರನ್ನು "ಇನ್ನೆಷ್ಟು ಕಾಲ?" ಎಂದು ಕೇಳುವ ವೇಳೆ ಕರ್ತನು ಪರಿಸ್ಥಿತಿಯು ಆತನ ಸ್ವಂತ ಕಾಲದಲ್ಲಿಯೇ ಸಂಭವಿಸುವಂತೆ *ಮಾಡಿದನು* ಎಂಬುದು ನಿಜವೇ ಆಗಿರುತ್ತದೆ. ಪ್ರಕಟನೆ ಪುಸ್ತಕದೊಳಗೆ ಅನಂತರದಲ್ಲಿ, ದೇವರು ತನ್ನ ಹಿಂಸೆಯ ವಿಷಯವಾಗಿ ಎಲ್ಲವನ್ನೂ ಸರಿಯಾಗಿ ಮಾಡುವದಕ್ಕಾಗಿ ಯಾವ ಯೋಜನೆಯನ್ನು ರೂಪಿಸಿದನು ಎಂಬುದರ ಕುರಿತು ಒಂದು ನಾಟಕೀಯವಾದ ತೋರ್ಪಡಿಸುವಿಕೆಗಳಿರುತ್ತವೆ (19:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಬ್ರಹಾಮನು ಹೀಗೆ ಹೇಳಿದ್ದು ಸರಿಯಾಗಿಯೇ ಇತ್ತು, "ಸರ್ವಲೋಕಕ್ಕೆ ನ್ಯಾಯತೀರಿಸುವವನು ನ್ಯಾಯವನ್ನೇ ನಡಿಸುವವನಲ್ಲವೇ" (ಆದಿಕಾಂಡ 18:25).

## ಆರನೆಯ ಮುದ್ರೆ (6:12-17)

**12ಆತನು ಆರನೆಯ ಮುದ್ರೆ ಒಡೆಯುವದನ್ನು ಕಂಡೆನು. ಒಡೆದಾಗ ಮಹಾಭೂಕಂಪ ಉಂಟಾಯಿತು; ಸೂರ್ಯನು ಕರೀಕಂಬಳಿಯಂತೆ ಕಪ್ಪಾದನು; 13ಪೂರ್ಣಚಂದ್ರನು ರಕ್ತದಂತಾದನು; ಅತ್ತೀ ಮರವು ಬಿರುಗಾಳಿಯಿಂದ ಅಲ್ಲಾಡಿಸಲ್ಪಟ್ಟು ತನ್ನ ಕಾಯಿಗಳನ್ನು ಉದುರಿಸುವ ಪ್ರಕಾರ ಆಕಾಶದ ನಕ್ಷತ್ರಗಳು ಭೂಮಿಗೆ ಬಿದ್ದವು. 14ಆಕಾಶವು ಸುರುಳಿಯ ಹಾಗೆ**

**ಸುತ್ತಲ್ಪಟ್ಟು ಹೋಗಿಬಿಟ್ಟಿತು; ಎಲ್ಲಾ ಬೆಟ್ಟಗಳೂ ದ್ವೀಪಗಳೂ ತಮ್ಮ ತಮ್ಮ ಸ್ಥಳಗಳಿಂದ ಚಲಿಸಿದವು. [15]ಇದಲ್ಲದೆ ಭೂರಾಜರೂ ಪ್ರಭುಗಳೂ ಸಹಸ್ರಾಧಿಪತಿಗಳೂ ಐಶ್ವರ್ಯವಂತರೂ ಪರಾಕ್ರಮಶಾಲಿಗಳೂ ಎಲ್ಲಾ ದಾಸರೂ ಸ್ವತಂತ್ರರೂ ಬೆಟ್ಟಗಳ ಗವಿಗಳಿಗೂ ಬಂಡೆಗಳ ಸಂದುಗಳಿಗೂ ಓಡಿಹೋಗಿ [16]ತಮ್ಮನ್ನು ಮರೆಮಾಡಿಕೊಂಡು ಬೆಟ್ಟಗಳಿಗೂ ಬಂಡೆಗಳಿಗೂ - ನಮ್ಮ ಮೇಲೆ ಬೀಳಿರಿ, ಸಿಂಹಾಸನದ ಮೇಲೆ ಕೂತಿರುವಾತ ಮುಖಕ್ಕೂ ಯಜ್ಞದ ಕುರಿಯಾದಾತನ ಕೋಪಕ್ಕೂ ನಮ್ಮನ್ನು ಮರೆಮಾಡಿರಿ; [17]ಅವರ ಕೋಪವು ಕಾಣಿಸುವ ಮಹಾದಿನ ಬಂದದೆ; ಅದರ ಮುಂದೆ ನಿಲ್ಲುವದಕ್ಕೆ ಯಾರು ಶಕ್ತರು ಎಂದು ಹೇಳಿದರು.**

ಯಜ್ಞವೇದಿಯ ಕೆಳಗಿರುವವರು" ಕೇಳಿದ ಪ್ರಶ್ನೆಯನ್ನು ಯೋಹಾನನು ಯೋಚಿಸುತ್ತಿರುವ ವೇಳೆಯಲ್ಲಿ, ತೆರೆಯು ಎಳೆಯಲ್ಪಟ್ಟಿತು. ದೇವರ ಅಂತಿಮ ಉತ್ತರವು ಏನಾಗಿರಬಲ್ಲದು ಎಂದು ಯೋಹಾನನು ಚಕಿತಗೊಂಡಿದ್ದನು. ಅದಕ್ಕೆ ಉತ್ತರವಾಗಿಯೋ ಎಂಬಂತೆ, ತೆರೆಯು ಎತ್ತಲ್ಪಡಲಾರಂಭಿಸಿತು. ಮತ್ತೊಂದಾವರ್ತಿ ಯೋಹಾನನ ಕಿವಿಗಳಿಗೆ ಶಬ್ದವು ದಾಳಿ ಮಾಡಿತು; ಆದರೆ ಈ ಸಾರಿ, ಸ್ವರಗಳ ಬದಲಾಗಿ ಆತನಿಗೆ ಅಪ್ಪಳಿಸುವಿಕೆಗಳು, ಕಂಪನಗಳು, ಮತ್ತು ಸ್ಫೋಟಗಳು ಕೇಳಿಸಿದವು: ವಿಶ್ವವು ಛಿದ್ರವಾಗಿ ಬೇರ್ಪಡಿಸುವಿಕೆಯ ಶಬ್ದಗಳನ್ನು ಕೇಳಿಸಿಕೊಂಡನು. ಯೋಹಾನನು ಕಂಡ ಸಂಗತಿಯು ಆತನಲ್ಲಿ ನಡುಕವನ್ನುಂಟು ಮಾಡಿರಬಹುದಾಗಿದೆ.

ಐದನೆಯ ಮತ್ತು ಆರನೆಯ ಮುದ್ರೆಗಳು ಒಡೆಯಲ್ಪಟ್ಟಾಗ ಸಂಭವಿಸಿದ ದೃಶ್ಯಗಳಿಗಿಂತಲೂ ಅಧಿಕವಾದ ನಾಟಕೀಯ ದೃಶ್ಯಗಳನ್ನು ಊಹಿಸಿಕೊಳ್ಳುವದಕ್ಕೆ ಕಷ್ಟಕರವಾಗಿರುತ್ತದೆ. ಆರನೆಯ ಮುದ್ರೆಯ ದೃಶ್ಯವು ಐದನೆಯ ಮುದ್ರೆಯೊಂದಿಗೆ ಸಂಬಂಧಪಟ್ಟಂತೆ ಕೇಳಲಾದ ಪ್ರಶ್ನೆಗೆ ಉತ್ತರವಾಗಿತ್ತು. ಐದನೆಯ ಮುದ್ರೆಗೆ ಮತ್ತು ರಕ್ತಸಾಕ್ಷಿಗಳ ಕೂಗಿಗೆ ಪ್ರತ್ಯುತ್ತರವಾಗಿ (6:10), ದೇವರು ತತ್ಪರಿಣಾಮವಾಗಿ ಅವರಿಗೆ "ಪ್ರತೀಕಾರವನ್ನು ಸಲ್ಲಿಸುವದಕ್ಕೆ" ಇದು ಸೂಕ್ತ ಕಾಲವಾಗಿರುವದಿಲ್ಲ, ಆದರೆ ಒಂದು ದಿನ ಆತನು ಅದನ್ನು *ಮಾಡುವನು* ಎಂದು ಹೇಳಿದನು.

ಆರನೆಯ ಮುದ್ರೆಯನ್ನು ಒಡೆಯುವದು ದೇವರ ತಾಳ್ಮೆಗೆ ಮಿತಿಗಳಿರುತ್ತವೆಂಬುದನ್ನು ತೋರಿಸುತ್ತದೆ. ಅರಿವರ್ತನೀಯವಾಗಿ, "ಇನ್ನು ಮೇಲೆ ಸಹಿಸಿಕೊಳ್ಳಲಾಗುವದಿಲ್ಲ!"[20] ಎಂದು ದೇವರು ಹೇಳುವ ಸಮಯವು ಬರುತ್ತದೆ. ಅದು ಸಂಭವಿಸುವಾಗ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ ರೀತಿಯಲ್ಲಿ, "ಜೀವಸ್ವರೂಪದನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು" (ಇಬ್ರಿಯ 10:31). ಅದೆಷ್ಟು ಭಯಂಕರವಾದದ್ದೆಂಬುದನ್ನು ಪ್ರಕಟನೆ 6:12–17 ನಮಗೆ ತಿಳಿಸುತ್ತದೆ.

ಒಬ್ಬ ಬರಹಗಾರನು ದೃಶ್ಯವನ್ನು ಈ ವಿಧವಾಗಿ ಕಲ್ಪನೆ ಮಾಡಿಕೊಂಡನು:

> ಏಕಾಏಕಿ ವಿಶ್ವವನ್ನು ಅಸ್ತವ್ಯಸ್ತತೆಯು ಆವರಿಸಿಕೊಳ್ಳುತ್ತದೆ. ಒಂದು ಭೂಕಂಪವು ಇಡೀ ಲೋಕವನ್ನು ನಡುಗಿಸುತ್ತದೆ; ಯಾವ ಭೂಕಂಪನ ಮಾಪನವೂ ಅದರ ತೀವ್ರತೆಯನ್ನು ಅಳೆಯುವದಕ್ಕೆ ಸಾಧ್ಯವಿರಲಿಲ್ಲ. ಸೂರ್ಯನು ಸಂಪೂರ್ಣವಾಗಿ ಗ್ರಹಣಗೊಂಡಿರುತ್ತಾನೆ. ವಾಸ್ತವಿಕದಲ್ಲಿ, "ಸೂರ್ಯನು . . . ಕಪ್ಪಾದನು; ಪೂರ್ಣ ಚಂದ್ರನು ರಕ್ತದಂತಾದನು; . . . ಆಕಾಶದಿಂದ ನಕ್ಷತ್ರಗಳು ಭೂಮಿಗೆ ಬಿದ್ದವು" ಎಂದು ಯೋಹಾನನು ವರದಿ ಮಾಡುತ್ತಾನೆ (ಪ್ರಕಟನೆ 6:12, 13).
>
> ಲೋಕವು ಭಯದಿಂದ ನಡುಗುತ್ತಿದೆ. ಮಹಾ ನಗರಗಳು ಕುಸಿದು ಬೀಳುತ್ತಿವೆ. ಅರಸರು, ರಾಜಕುಮಾರರು, ಸೇನಾಧಿಕಾರಿಗಳು; ಐಶ್ವರ್ಯವಂತರು, ಬಲಿಷ್ಠರ, ದಾಸರು

> ಮತ್ತು ಸ್ವತಂತ್ರರು - ಭೂಮಿಯ ಮೇಲೆ ಉಳಿದಿರುವ ಎಲ್ಲಾ ಮನುಷ್ಯರು ದೇವರ ಅಂತಿಮ ನ್ಯಾಯತೀರ್ಪಿನಿಂದ ತಪ್ಪಿಸಿಕೊಂಡು ಓಡುವದನ್ನು ಯೋಹಾನನು ಕಾಣುತ್ತಾನೆ. ಅವರು ಬೆಟ್ಟಗಳ ಗವಿಗಳಿಗೆ ಓಡುತ್ತಾರೆ. ಅವರು ಕಲ್ಲುಗಳ ಮತ್ತು ಬಂಡೆಗಳ ಹಿಂದುಗಡೆಯಲ್ಲಿ ಮುದುಡಿಕೊಂಡು ಕುಳಿತುಕೊಳ್ಳುತ್ತಾರೆ. ಆದರೆ ತಪ್ಪಿಸಿಕೊಳ್ಳುವ ಯಾವ ದಾರಿಯೂ ಇರುವದಿಲ್ಲ.[21]

ವ್ಯಾಖ್ಯಾನಕಾರರು ಈ ಕಾರ್ಯವು ದೇವರ ವೈರಿಗಳಿಗಾಗುವ ತಾತ್ಕಾಲಿಕವಾದ ದಂಡನೆಯನ್ನು (ರೋಮನ್ ಸಾಮ್ರಾಜ್ಯದ ದಂಡನೆ) ಸೂಚಿಸುತ್ತದೋ ಅಥವಾ ಅಂತ್ಯಕಾಲದ ವೇಳೆಯಲ್ಲಾಗುವ ಲೋಕದ ಅಂತಿಮ ನಾಶನವನ್ನು ಸೂಚಿಸುತ್ತದೋ ಎಂಬ ಚರ್ಚೆಯಲ್ಲಿ ಸಿಲುಕಿಕೊಳ್ಳುತ್ತಾರೆ. ಈ ವಿಷಯದ ಕುರಿತು ಚರ್ಚಿಸಲಾಗುವದು, ಆದರೆ ಸ್ವಲ್ಪವಾದ ಮಹತ್ವತೆಯನ್ನು ಹೊಂದಿರುವ ಪ್ರಶ್ನೆಯಾಗಿರುತ್ತದೆ. ದೇವರ ಕೋಪಾಗ್ನಿಯೆಂದರೆ ಅದು ದೇವರ ಕೋಪಾಗ್ನಿಯೇ - ಅದು ಈಗ ಸಂಭವಿಸಿದರೂ ಸರಿಯೆ ಅಥವಾ ಕ್ರಿಸ್ತನ ಪುನರಾಗಮನದಲ್ಲಿ ಸಂಭವಿಸಿದರೂ ಸರಿಯೇ - ಮತ್ತು ಅದನ್ನು ಯಾವನೂ ಅನುಭವಿಸುವದಕ್ಕೆ ಬಯಸುವದಿಲ್ಲ!

12ರಿಂದ 17 ವಚನಗಳು ಸ್ವಾಭಾವಿಕವಾಗಿಯೇ ಎರಡು ಭಾಗಗಳಾಗಿ ವಿಭಜನೆಗೊಳ್ಳುತ್ತವೆ: ವಿಶ್ವದ ವಿನಾಶತೆಯ ಚಿತ್ರಣ (ವಚನಗಳು 12-14), ಮತ್ತು ಬಳಿಕ ಹೆದರಿ ನಡುಗುವ ಮನುಷ್ಯರ ಒಂದು ಚಿತ್ರಣ (ವಚನಗಳು 15-17). 12ರಿಂದ 14 ವಚನಗಳು ಲೋಕವು ಹೇಗೆ ಅಂತ್ಯಗೊಳ್ಳುತ್ತದೆಂಬ ಕುರಿತಾದ ಒಂದು ಅಕ್ಷರಶಃ ಚಿತ್ರಣವೋ? ಬಹುಶಃ ಆಗಿರುವದಿಲ್ಲ, ಹಾಗಿದ್ದರೂ ಕರ್ತನು ಹಿಂದಿರುಗಿ ಬರುವ ವೇಳೆ ಈಗಿನ ಲೋಕವು ನಾಶಗೊಳ್ಳುವದೆಂಬ ಕುರಿತಾಗಿ ಬೈಬಲ್ ಒತ್ತಿ ಹೇಳುತ್ತದೆ:

> . . . ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾ ಘೋಷದಿಂದ ಇಲ್ಲದೆ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು (2 ಪೇತ್ರ 3:10, 12).

ಖಂಡಿತವಾಗಿಯೂ, ಪ್ರಕಟನೆ 6:12-14ರಲ್ಲಿನ ಬಹುಪಾಲು ಚಿತ್ರಣವು ಬ್ರಹ್ಮಾಂಡದ ನಾಶನದ ಕುರಿತಾದ ಬೈಬಲ್ ಬೋಧನೆಯೊಂದಿಗೆ ಸರಿಹೊಂದುವದಾಗಿದೆ. ಸಮಸ್ತವೂ ಚಲಿಸುವ ಕಣಗಳಿಂದ ರಚಿಸಲ್ಪಟ್ಟಿದ್ದು ಮತ್ತು ಆ ಕಣಗಳು ಬೇರೆ ಬೇರೆಯಾಗಿ ಹಾರಾಡುವಂತೆ ಮಾಡಲ್ಪಡುವದು ಸಾಧ್ಯವಿರುತ್ತದೆಂಬುದು ನಮಗೆ ಈಗ ತಿಳಿದಿರುತ್ತದಾದ್ದರಿಂದ, ಪ್ರಕಟನೆ 6:12-14ರ ಭಾಷೆಯು ಒಂದು ಕಾಲದಲ್ಲಿ ಅನ್ನಿಸುತ್ತಿದ್ದ ರೀತಿಯಲ್ಲಿ ಈಗ ಕಾಲ್ಪನಿಕವಾದದ್ದೆಂದು ಅನ್ನಿಸುವದಿಲ್ಲ. ಹೇಗೂ, ಪ್ರಕಟನೆ 6ನೇ ಅಧ್ಯಾಯದಲ್ಲಿನ ಕೆಲವೊಂದು ವಿವರಗಳು ಅಕ್ಷರಶಃ ಆಗಿರುವದಕ್ಕೆ ಸಾಧ್ಯವಿಲ್ಲ. ಉದಾರಣೆಗೆ, ನಕ್ಷತ್ರಗಳು ಭೂಮಿಗೆ ಬೀಳುವವೋ? ನಕ್ಷತ್ರಗಳು ಭೂಮಿಗಿಂದ ಅನೇಕ ಪಟ್ಟು ದೊಡ್ಡವುಗಳಾಗಿರುತ್ತವೆ; ಅವುಗಳು ಅಕ್ಷರಶಃ "ಭೂಮಿಗೆ" ಉದುರಿ ಬೀಳುವದಕ್ಕೆ ಸಾಧ್ಯವಿರಲಿಲ್ಲ.

12ರಿಂದ 14 ವಚನಗಳು ಲೋಕಾಂತ್ಯದ ಕುರಿತಾದ ವಿವರಗಳನ್ನು ತಿಳಿಸುವದಕ್ಕಾಗಿ ಕೊಡಲ್ಪಟ್ಟಿಲ್ಲವೆಂದಾದರೆ, ಯೋಹಾನನು ಅಂತಹ ಕಣ್ಣಿಗೆ ಕಟ್ಟಿದಂಥ ಭಾಷೆಯನ್ನು ಹೊಂದುವಂತೆ ಪವಿತ್ರಾತ್ಮನು ಏಕೆ ಅನುಮತಿಸಿದನು? ಯೋಹಾನನು ತನ್ನ ವಾಚಕರಿಗೆ ಪರಿಚಿತವಾಗಿದ್ದ ಸಂಕೇತಗಳನ್ನು ಬಳಸಿದನು: ಬೈಬಲಿನುದ್ದಕ್ಕೂ ಸಿಕ್ಕುವ ಸಾಂಕೇತಿಕತ್ವವು,

ದೇವರು ಜನರ ಜೀವಿತಗಳಲ್ಲಿ ಮಧ್ಯ ಪ್ರವೇಶ ಮಾಡುತ್ತಿದ್ದನು ಅಥವಾ ಮಾಡುವನು ಎಂಬುದನ್ನು ಸಾರುವಂಥ ಸಂಕೇತತ್ವವು.

ವಾಕ್ಯಭಾಗವು ಹಳೆಯ ಒಡಂಬಡಿಕೆಯ, ಮಾತ್ರವಲ್ಲದೆ ಎರಡೂ ಒಡಂಬಡಿಕೆಗಳ ಕಾಲದ ನಡುವಿದ್ದ ಯೆಹೂದ್ಯ ಸಾಹಿತ್ಯದಲ್ಲಿರುವ ಪದಗಳನ್ನು ಸಂಯೋಜಿಸಿ ಬಳಸುತ್ತದೆ. ಯೋಹಾನನು ದೇವರನ್ನು ವಿರೋಧಿಸುವವರಿಗಾಗಿ ಕಾದಿರುವಂಥ ಭಯಾನಕವಾದ ಚಿತ್ರಣವನ್ನು ಆತನ ಕಾಲದ ಜನರು ಊಹಿಸಿಕೊಳ್ಳುವದಕ್ಕೆ ಸಾಧ್ಯವಿದ್ದ ಸಕಲ ಭಯಂಕರವಾದ ಚಿತ್ರಣಗಳ ರಾಶಿಯನ್ನು ಕೂಡಿ ಹಾಕುತ್ತಾನೆ.[22] John Bowmanನು 12ರಿಂದ 14ರಲ್ಲಿನ ಪರಿಭಾಷೆಯ ಕುರಿತು ಚರ್ಚಿಸುವಾಗ, ಆತನು ದುರಾದೃಷ್ಟಕರವಾದ ಪದಗಳ ಆಯ್ಕೆಯನ್ನು ಮಾಡಿಕೊಳ್ಳುತ್ತಾನೆ. ಆತನು ಹೀಗೆ ಬರೆಯುತ್ತಾನೆ, "ಈ ಬ್ರಹ್ಮಾಂಡದ ಘಟನೆಗಳನ್ನು ಸ್ವತಃ ಅವುಗಳಿಗೋಸ್ಕರವಾಗಿಯೇ ಗಂಭೀರವಾಗಿ ತೆಗೆದುಕೊಳ್ಳಕೂಡದು."[23] ಈ ದೃಶ್ಯವನ್ನು ಅತ್ಯಂಥ *ಅಕ್ಷರಶಃ* ವಾಗಿ ತೆಗೆದುಕೊಳ್ಳಬೇಕಾದ ಅವಶ್ಯಕತೆಯು ಇರುವದಿಲ್ಲ, ಆದರೆ ಅದನ್ನು *ಗಂಭೀರವಾಗಿ* ತೆಗೆದುಕೊಳ್ಳಬೇಕಾಗಿರುವದು ಮಾತ್ರ ಅವಶ್ಯವಿರುತ್ತದೆ. ಅದು ಗಲಾತ್ಯ 6:7ರಲ್ಲಿರುವ ಸತ್ಯದ ಒಂದು ಸುವ್ಯಕ್ತವಾಗಿ ಜ್ಞಾಪಿಸುವಿಕೆ ಆಗಿರುತ್ತದೆ: ". . . ದೇವರು ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯುವನು."

**ವಚನ 12. ಆತನು ಆರನೆಯ ಮುದ್ರೆಯನ್ನು ಒಡೆಯುವದನ್ನು ಕಂಡೆನು. ಒಡೆದಾಗ ಮಹಾಭೂಕಂಪ ಉಂಟಾಯಿತು; ಸೂರ್ಯನು ಕರೀಕಂಬಳಿಯಂತೆ ಕಪ್ಪಾದನು; ಪೂರ್ಣಚಂದ್ರನು ರಕ್ತದಂತಾದನು.** ಒಂದು **ಭೂಕಂಪದ** ಸಂಕೇತತೆಯು ಯೆಹೆಜ್ಕೇಲ 38:19 (ನೋಡಿರಿ ಯೋವೇಲ 2:10; ಆಮೋಸ 8:8; ಹಗ್ಗಾಯ 2:6). ಭೂಮಿಯ ಕಂಪನವು ಯಾವಾವದನ್ನು ಜನರು ಅಲುಗಾಡಿಸಲಾಗದ್ದೆಂದು ಪರಿಗಣಿಸಿರುತ್ತಾರೋ ಅದನ್ನೆಲ್ಲಾ ನಡುಗಿಸುವದನ್ನು ಪ್ರತಿನಿಧಿಸುತ್ತದೆ. ಅನೇಕರು *terra firma*, "ದೃಢವಾದ ಭೂಮಿ" ಎಂಬ ಪದವನ್ನು ಬಳಸುತ್ತಿರುತ್ತಾರೆ, ಆದರೆ "ದೃಢವಾದ" ಭೂಮಿಯು ಕಾಲಿನ ಕೆಳಗೆ ಕುಸಿಯುತ್ತಿದ್ದರೆ ಗಾಬರಿಯು ಆರಂಭವಾಗುತ್ತದೆ. ಅಂತ್ಯಾಕಾಲಿಕ ಲೇಖಕರು ಭೂಕಂಪಗಳನ್ನು ಜನರು ಯಾವದರ ಮೇಲೆ ಅವಲಂಬಿತರಾಗಿರುತ್ತಾರೋ ಅದನ್ನು ತೆಗೆದು ಹಾಕುವದಕ್ಕೆ ಸಂಕೇತಗೊಳಿಸುತ್ತಾರೆ. "ಭೂಮಿ-ನಡುಗಿಸುವಂಥ" ಎಂಬ ಪದವು ಈಗಲೂ ಮಾನವ ಕುಲದ ಮೇಲೆ ಪರಿಣಾಮ ಬೀರುವಂತಹ ಮಹತ್ವಪೂರ್ಣ ಘಟನೆಗಳನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತದೆ.

ಯೋವೇಲನು **ಸೂರ್ಯನು** ಕತ್ತಲಾಗುವ ಹಾಗೂ **ಚಂದ್ರನು** ರಕ್ತವಾಗುವ ಕುರಿತಾಗಿ ಉಲ್ಲೇಖಿಸುತ್ತಾನೆ (ಯೋವೇಲ 2:31; ನೋಡಿರಿ ಯೆಶಾಯ 13:10; 50:3; ಯೆಹೆಜ್ಕೇಲ 32:7; ಆಮೋಸ 8:9). ಕರೀ**ಕಂಬಳಿ** ಎಂಬುದು ಮುಖ್ಯವಾಗಿ ಗೋಣಿ ಚೀಲಗಳನ್ನು ತಯಾರಿಸುವದಕ್ಕೆ ಬಳಸಲಾಗುತ್ತಿದ್ದ ಒರಟಾದ ಉಡುಪು ಆಗಿತ್ತು, ಆದರೆ ಅದು ಶೋಕಾಚರಣೆಯನ್ನು ಮಾಡುವ ಸಮಯದಲ್ಲಿ ಧರಿಸಿಕೊಳ್ಳುವ ಉಡುಪುಗಳನ್ನು ಸಿದ್ಧಪಡಿಸುವದಕ್ಕಾಗಿ ಸಹ ಬಳಸಲ್ಪಡುತ್ತಿತ್ತು. 12ನೇ ವಚನದಲ್ಲಿ ಕರೀಕಂಬಳಿ ಕಪ್ಪು ಮೇಕೆಗಳ **ಕರೀ ಕೂದಲುಗಳಿಂದ** ತಯಾರಿಸಲ್ಪಟ್ಟಿತ್ತೆಂಬುದು ಸ್ಪಷ್ಟವಾಗುತ್ತದೆ.

**ವಚನ 13. ಅತ್ತೀ ಮರವು ಬಿರುಗಾಳಿಯಿಂದ ಅಲ್ಲಾಡಿಸಲ್ಪಟ್ಟು ತನ್ನ ಕಾಯಿಗಳನ್ನು ಉದುರಿಸುವ ಪ್ರಕಾರ ಆಕಾಶದ ನಕ್ಷತ್ರಗಳು ಭೂಮಿಗೆ ಬಿದ್ದವು.** ಕೆಲವರು ಈ ಬೀಳುವ ನಕ್ಷತ್ರಗಳು ಕೆಲವೊಂದು ಪ್ರಾಮುಖ್ಯ ವ್ಯಕ್ತಿಗಳು ಬಿದ್ದು ಹೋಗುವದನ್ನು ಸೂಚಿಸುತ್ತದೆಂದು

ಭಾವಿಸುತ್ತಾರೆ. ಹಳೆಯ ಒಡಂಬಡಿಕೆಯಲ್ಲಿ ಕೆಲವು ಸಾರಿ, ಮಹಾನ್ ವ್ಯಕ್ತಿಗಳ ಕುರಿತು ಅವರು ನಕ್ಷತ್ರಗಳು ಎಂಬದಾಗಿ ಹೇಳಲ್ಪಟ್ಟಿರುತ್ತದೆ. ಹೇಗೂ, ಪ್ರಕಟನೆ 6ರಲ್ಲಿ, **ನಕ್ಷತ್ರಗಳು** ಬೀಳುವ ಚಿತ್ರಣವು ಒಂದು ಒಟ್ಟಾರೆಯಾದ ಚಿತ್ರದ ಭಾಗವಾಗಿರುವದು ಮತ್ತು ಬಹುಶಃ ಅದನ್ನು ದಾಟಿ ಇನ್ನಾವದೇ ಮಹತ್ವವು ಇಲ್ಲದಿರಬಹುದಾಗಿದೆ. ಯೆಶಾಯನು ನಕ್ಷತ್ರಗಳನ್ನು ನಿರ್ಮೂಲ ಮಾಡುವದು ಮತ್ತು ಆಕಾಶ ಮಂಡಲವು "ಸುತ್ತಿಕೊಳ್ಳುವ[ದರ]" ಕುರಿತು ಮಾತಾಡುತ್ತಾನೆ (ಯೆಶಾಯ 34:4). **ಅತ್ತೀ . . . ಕಾಯಿಗಳು** ಎಂಬುವುಗಳು "ಚಳಿಗಾಲದಲ್ಲಿ ಬೆಳೆಯುವಂಥ, ಆದಾಗ್ಯೂ ಹಣ್ಣುಗಳಾಗದೆ ಇರುತ್ತಿದ್ದ ವಿಧವಾದ ಕಾಯಿಗಳಾಗಿದ್ದವು, ಆದರೆ ಇವುಗಳು ವಸಂತಕಾಲದಲ್ಲಿ ಉದುರುತ್ತಿದ್ದವು."[24]

**ವಚನ 14. ಆಕಾಶವು ಸುರುಳಿಯ ಹಾಗೆ ಸುತ್ತಲ್ಪಟ್ಟು ಹೋಗಿಬಿಟ್ಟಿತು; ಎಲ್ಲಾ ಬೆಟ್ಟಗಳೂ ದ್ವೀಪಗಳೂ ತಮ್ಮ ತಮ್ಮ ಸ್ಥಳಗಳಿಂದ ಚಲಿಸಿದವು. ಸುರುಳಿ** ಸುತ್ತಲ್ಪಟ್ಟು ಇಡಲಾಗಿರುತ್ತದಾದ್ದರಿಂದ, ಅದು ತೆರೆಯಲ್ಪಟ್ಟದ್ದಾಗಿ ಉಳಿಯಬೇಕೆಂದರೆ ಅದನ್ನು ಹೊರಕ್ಕೆ ಎಳೆದು ಉದ್ದವಾಗಿ ಹಿಡಿದುಕೊಂಡಿಬೇಕಾಗುತ್ತದೆ. ಒಂದು ಒಣಗಿರುವ ಗಡುಸಾದ ಹಸ್ತಪ್ರತಿಯು ತೆರೆದು ಹಿಡಿದುಕೊಂಡಿರುವ ವೇಳೆ ಇಬ್ಭಾಗಗೊಳ್ಳುವದಾದರೆ, ಎರಡು ತುದಿಗಳನ್ನು ಪುನಃ ಸುತ್ತಲಾಗುತ್ತಿತ್ತು. ಹೀಗೆ ಆಕಾಶವು ಇಬ್ಭಾಗಿಸಲ್ಪಟ್ಟು ಸುತ್ತಲ್ಪಡುವ ರೀತಿಯಲ್ಲಿ ಚಿತ್ರಿಸಲ್ಪಟ್ಟಿರುತ್ತದೆ. Eugene H. Petersonನು ತನ್ನ ಭಾವಾನುವಾದದಲ್ಲಿ, ಇಂದಿನ ಬಹುಪಾಲು ವಾಚಕರಿಗೆ ಹೆಚ್ಚು ಪರಿಚಿತವಾಗಿರುವಂಥ ಸಾದೃಶ್ಯವನ್ನು ಬಳಸುತ್ತಾನೆ: "ಛಾಯಾಚಿತ್ರ ತೆಗೆಯಲಾಗಿರುವ ಆಕಾಶದ ಚಿತ್ರವು ಪುಸ್ತಕದಂತೆ ಮುಚ್ಚಲ್ಪಟ್ಟಿರುವದು."[25]

ಯೆರೆಮೀಯನು ನಡುಗುತ್ತಿರುವ ಪರ್ವತಗಳ ಚಿತ್ರಣವನ್ನು ಬಳಸುತ್ತಾನೆ (ಯೆರೆಮೀಯ 4:24; ನೋಡಿರಿ ನಹೂಮ 1:5) ಯೆಹೆಜ್ಕೇಲನು ದ್ವೀಪಗಳು ನಾಶಗೊಳ್ಳುವ ಕುರಿತು ಮತಾಡುತ್ತಾನೆ (ಯೆಹೆಜ್ಕೇಲ 27:35; KJV; ನೋಡಿರಿ ಯೆಹೆಜ್ಕೇಲ 26:15, 18; KJV). ಪರ್ವತಗಳು ಮತ್ತು ದ್ವೀಪಗಳು ನಿಕಟ ಸಂಬಂಧ ಹೊಂದಿವೆ; ಸಮುದ್ರದೊಳಗಿಂದ ಮೇಲ್ಗಡೆಯಲ್ಲಿ ಕಾಣಿಸುವ ಒಂದು ಪರ್ವತದ ತುದಿಯೇ ದ್ವೀಪವಾಗಿರುತ್ತದೆ. ಈ ಸನ್ನಿವೇಶದಲ್ಲಿ, **ದ್ವೀಪ** ಎಂಬ ಪದವು ಬಹುಶಃ ಭೂಮಿಯ ಯಾವ ಭಾಗವು ಭೂಕಂಪದಿಂದ ತಪ್ಪಿಸಿಕೊಳ್ಳಲಾರದು ಎಂಬುದನ್ನು ಒತ್ತಿ ಹೇಳುವದಕ್ಕೆ ಬಳಸಲ್ಪಟ್ಟಿರಬಹುದು; ದ್ವೀಪಗಳನ್ನು ಭೂಮಿಯ ಅತ್ಯಂಥ ದೂರದ ಸ್ಥಳಗಳೆಂದು ಭಾವಿಸಲಾಗುತ್ತಿತ್ತು.

**ವಚನ 15.** ಮುಂದಿನ ವಚನಗಳು ಬ್ರಹ್ಮಾಂಡದ ನಾಶನದಿಂದ ಮುಂದೆ ಹೋಗಿ ಅದರ ಪರಿಣಾಮ ಏನೆಂಬುದನ್ನು ವಿವರಿಸುತ್ತವೆ: **ಇದಲ್ಲದೆ ಭೂರಾಜರೂ ಪ್ರಭುಗಳೂ ಸಹಸ್ರಾಧಿಪತಿಗಳೂ ಐಶ್ವರ್ಯವಂತರೂ ಪರಾಕ್ರಮಿಶಾಲಿಗಳೂ ಎಲ್ಲಾ ದಾಸರೂ ಸ್ವತಂತ್ರರೂ ಬೆಟ್ಟಗಳ ಗವಿಗಳಿಗೂ ಬಂಡೆಗಳ ಸಂದುಗಳಿಗೂ ಓಡಿಹೋಗಿ.** ತಮ್ಮನ್ನು ಮರೆಮಾಡಿಕೊಂಡರು ದೇವರಿಂದ ತಪ್ಪಿಸಿಕೊಳ್ಳಲು ಬೆಟ್ಟಗಳಲ್ಲಿ ಹಾಗೂ ಗವಿಗಳಲ್ಲಿ ಅಡಗಿಕೊಳ್ಳುವ ವಿಚಾರವು ಹೋಶೇಯ 10:8ರಲ್ಲಿ ಮತ್ತು ಯೆಶಾಯ 2:19ರಲ್ಲಿ ಬಳಸಲ್ಪಟ್ಟಿದೆ. ಯೇಸುವು ಯೆರೂಸಲೇಮಿನ ಮೇಲೆ ಬರಲಿದ್ದ ಸಂಕಷ್ಟದ ಕುರಿತು ಮಾತಾಡುವಾಗ ಈ ಸಾದೃಶ್ಯವನ್ನು ಬಳಸಿದನು (ಲೂಕ 23:30).

15ನೇ ವಚನದಲ್ಲಿ ಪ್ರಸ್ತಾಪಿಸಿರುವ ಏಳು ವರ್ಗಗಳು ಸಕಲ ಮಾನವರನ್ನು ಒಳಗೊಂಡಿರುತ್ತವೆ, ವಿಶೇಷವಾಗಿ ದೇವರ ಚಿತ್ತವನ್ನು ವಿರೋಧಿಸುವವರ ವರ್ಗದವರು ಅದರಲ್ಲಿ ಸೇರಿರುತ್ತಾರೆ. "ಏಳು" ಸಂಪೂರ್ಣತೆಯನ್ನು ಸೂಚಿಸುವ ಸಂಖ್ಯೆಯಾಗಿದೆ. ಯೋಹಾನನು ಇದನ್ನು ಬರೆದ ಕಾಲದಲ್ಲಿ, ಜನರು **ಭೂರಾಜರು** ಎಂಬುದನ್ನು ಓದುವಾಗ,

ಅವರು Domitian ಮತ್ತು ಆತನ ಇಷ್ಟದಂತೆ ಹಾಗೂ ಆತನ ನಿಯಂತ್ರಣದಲ್ಲಿದ್ದುಕೊಂಡು ಆಳ್ವಿಕೆ ಮಾಡುತ್ತಿದ್ದ ಸಣ್ಣ ಅರಸರ ಕುರಿತು ಯೋಚಿಸುತ್ತಿದ್ದರು. **ಪ್ರಭುಗಳು** ಎಂಬುದು ಬಹುಶಃ ರಾಜಕೀಯ ವ್ಯಕ್ತಿಗಳಲ್ಲದ ಪ್ರಭಾವಶಾಲಿ ಮನುಷ್ಯರನ್ನು ಸೂಚಿಸಬಹುದಾಗಿದೆ. ಮೂಲ ಗ್ರೀಕ್ ಪದವು ಒಂದು ಉಪಸರ್ಗವನ್ನು ಹೊಂದಿದ್ದು ಅದು "ಮಹಾನ್ ವ್ಯಕ್ತಿಗಳು" ಅಥವಾ "ದೊಡ್ಡವರು" ಎಂಬ ಅರ್ಥವನ್ನು ಕೊಡುತ್ತದೆ. ಅದೇ ಪದವು 18:23ರಲ್ಲಿ ಸಿಕ್ಕುತ್ತದೆ, ಅಲ್ಲಿ ಅದು ವ್ಯಾಪಾರಸ್ಥರನ್ನು ಸೂಚಿಸುತ್ತದೆ. ಕೆಲವು ತರ್ಜುಮೆಗಳು "ರಾಜಕುಮಾರರು" ಎಂದು ಅನುವಾದಿಸುತ್ತವೆ. CEV ತರ್ಜುಮೆಯಲ್ಲಿ ಒಂದು ಆಸಕ್ತಿಕರವಾದ ಪದವು ಇರುತ್ತದೆ: ಭೂಮಿಯ "ಖ್ಯಾತ ಮನುಷ್ಯರು." **ಸಹಸ್ರಾಧಿಪತಿಗಳು** ಎಂಬ ಪದವು ಗ್ರೀಕ್ ಭಾಷೆಯ χιλίαρχος (*chiliarchos*) ಎಂಬ ಪದದ ಬಹುವಚನ ರೂಪದಿಂದ ಅನುವಾದಿಸಲ್ಪಟ್ಟಿರುತ್ತದೆ, ಈ ಪದದ ಅರ್ಥವು "ಒಂದು ಸಾವಿರ ಮಂದಿಯ ಅಧಿಪತಿ" ಎಂದಾಗಿರುತ್ತದೆ. Petersonನ ಭಾವಾನುವಾದದಲ್ಲಿ "ಸೇನಾಧಿಪತಿಗಳು"[26] ಎಂದಿರುತ್ತದೆ. **ಐಶ್ವರ್ಯವಂತರು** ಎಂಬ ಪದವು ಸ್ವತಃ ತನ್ನನ್ನು ವಿವರಿಸಿಕೊಳ್ಳುತ್ತದೆ. **ಪರಾಕ್ರಮಶಾಲಿಗಳು** ಎಂಬುದು ದೈಹಿಕವಾಗಿ ಬಲಿಷ್ಠವಾಗಿರುವದನ್ನು ಸೂಚಿಸುವದಿಲ್ಲ, ಆದರೆ ಭೂಮಿಯ ಮೇಲೆ ಬಲವಾದ ಪ್ರಭಾವವನ್ನು ಬಳಸುವವರನ್ನು ಸೂಚಿಸುತ್ತದೆ. ಹೀಗೆ ಯೋಹಾನನು ರಾಜಕೀಯ ನಾಯಕರನ್ನು, ಮಿಲಿಟರಿ ನಾಯಕರನ್ನು, ಮತ್ತು ಸಮಾಜಿಕ ನಾಯಕರನ್ನು ಉಲ್ಲೇಖಿಸುತ್ತಾನೆ. D. T. Nilesನು ಹೀಗೆ ಹೇಳಿದನು,

> . . . ಸ್ಥಾನಮಾನದಿಂದ ಯಾವ ಪ್ರಯೋಜನವೂ ಆಗಲಿಲ್ಲ. ಭೂಮಿಯ ಅರಸರಿಗೆ ಸಹ ಯಾವ ಸುರಕ್ಷತೆಯೂ ಇರಲಿಲ್ಲ. ಐಶ್ವರ್ಯವಂತರ ಸಂಪತ್ತು ಅವರಿಗೆ ಭದ್ರತೆಯನ್ನು ಒದಗಿಸಲಿಲ್ಲ, ಪರಾಕ್ರಮಶಾಲಿಗಳ ಶಕ್ತಿಯು ಯಾವ ಸಮಾಧಾನವನ್ನೂ ಒದಗಿಸಲಿಲ್ಲ . . . ಜೀವನದ ತಳಹದಿಗಳೆಲ್ಲವೂ ಛಿದ್ರಗೊಂಡಿದ್ದವು, ಮತ್ತು ಮನುಷ್ಯರು ಭಯದಿಂದ ತಮ್ಮನ್ನು ಅಡಗಿಸಿಕೊಂಡರು. . . . ಅವರ ಮುಖವಾಡಗಳೆಲ್ಲವೂ ಕಳಚಲ್ಪಟ್ಟು ಮತ್ತು ಜೀವನದ ಸಕಲ ಸಾಧನೆಗಳನ್ನು ಕಳೆದುಕೊಂಡವರಾಗಿ, ಅವರು ದೇವರ ಮುಂದೆ ನಿಲ್ಲುವದಕ್ಕೆ ಅಂಜಿದರು.[27]

**ಎಲ್ಲಾ ದಾಸರೂ ಸ್ವತಂತ್ರರೂ** ಎಂಬುದು ಪಟ್ಟಿಯೊಳಗೆ ಕೊನೆಯಲ್ಲಿ ಬರುತ್ತದೆ. ಒಬ್ಬ ಸ್ವತಂತ್ರನು ಈಗ ತನ್ನ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದ ಮಾಜಿ ದಾಸನಾಗಿದ್ದನು, ಆದರೆ ಆತನು ಇನ್ನೂ ಒಂದು ಜೀವನವನ್ನು ರೂಪಿಸಿಕೊಳ್ಳುವ ಹಂತದಲ್ಲಿದ್ದವನು. ಆ ದಿನದಲ್ಲಿ ದಾಸನು ಹಾಗೂ ಸ್ವತಂತ್ರ ಸಮಾಜದ ಏಣಿಯಲ್ಲಿ ಕೆಳಮಟ್ಟದಲ್ಲಿದ್ದರು, ಮತ್ತು ಉಳಿದ ಐದು ವರ್ಗಗಳ ಜನರು ಅವರೊಂದಿಗೆ ಅಷ್ಟೇನೂ ಇಟ್ಟುಕೊಂಡಿರುತ್ತಿರಲಿಲ್ಲ ಅಥವಾ ಯಾವದೇ ಸಂಬಂಧವನ್ನೂ ಹೊಂದಿರುತ್ತಿರಲಿಲ್ಲ. ಹೇಗೂ, ದೇವರ ಕೋಪಾಗ್ನಿಯ ಎದುರಿಗೆ ಸಾಮಾಜಿಕ ಭಿನ್ನತೆಗಳು ಮರೆತು ಹೋಗಿದ್ದವು. ದೇವರು ತನ್ನ ಕೃಪೆಯನ್ನು ತೋರುವ ವೇಳೆಯಲ್ಲಿ "ಪಕ್ಷಪಾತಿಯಲ್ಲ"; ಆತನು ತನ್ನ ಕೋಪಾಗ್ನಿಯನ್ನು ಸುರಿಸುವ ವೇಳೆಯಲ್ಲಿ ಸಹ ಆತನು ಯಾವ "ಪಕ್ಷಪಾತವನ್ನು" ತೋರಿಸುವವನಲ್ಲ (ನೋಡಿರಿ ಅಪೊಸ್ತಲರ ಕೃತ್ಯಗಳು 10:34; ರೋಮಾ 2:9–11).

ದೊಡ್ಡವರು ಮತ್ತು ಸಣ್ಣವರು ಭಯದಿಂದ ತುಂಬಿದವರಾದಾಗ, ಅವರು **ಬೆಟ್ಟಗಳ ಗವಿಗಳಲ್ಲಿಯೂ ಬಂಡೆಗಳ ಸಂದುಗಳಿಗೂ** ಓಡಿ ಹೋಗಿ ಅಡಗಿಕೊಳ್ಳಲು ಪ್ರಯತ್ನಿಸಿದರು. ಕರ್ತನ ಭಯವು ಯಾವಾಗಲೂ ಜನರನ್ನು ಬಚ್ಚಿಟ್ಟುಕೊಳ್ಳುವಂತೆ ಮಾಡಿರುತ್ತದೆ. ಆದಾಮ ಮತ್ತು ಹವ್ವಳು ದೇವರಿಂದ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದರು (ಆದಿಕಾಂಡ 3:8).

ಪ್ರವಾದಿಯಾದ ಯೋನನು ಕರ್ತನಿಗೆ ಅವಿಧೇಯನಾದ ವೇಳೆ, ಆತನು ದೇವರ ಸನ್ನಿಧಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು (ಯೋನನು 1:3). ಇವರಲ್ಲಿ ಪ್ರತಿಯೊಬ್ಬನೂ ದೇವರಿಂದ ಓಡಿ ಹೋಗಿ ಅಡಗಿಕೊಳ್ಳುವದು ಅಸಾಧ್ಯವಾದದ್ದೆಂಬುದನ್ನು ಕಂಡುಕೊಂಡರು (ಕೀರ್ತನೆ 139:7-12). ಹೀಗಿದ್ದರೂ, ತಪ್ಪಿನಲ್ಲಿ ಸಿಕ್ಕಿಕೊಂಡಿರುವವರು ಅಡಗಿಕೊಳ್ಳುವದನ್ನು ಬಿಟ್ಟಿರುವದಿಲ್ಲ.

**ವಚನ 16.** ಅವರು **ಬೆಟ್ಟಗಳಿಗೂ ಬಂಡೆಗಳಿಗೂ - ನಮ್ಮ ಮೇಲೆ ಬೀಳಿರಿ. ಸಿಂಹಾಸನದ ಮೇಲೆ ಕೂತಿರುವಾತನ ಮುಖಕ್ಕೂ ಯಜ್ಞದ ಕುರಿಯಾದಾತನ ಕೋಪಕ್ಕೂ ನಮ್ಮನ್ನು ಮರೆಮಾಡಿರಿ** ಅಂದರು. "ಪಾಪಿಗಳು ಅತಿ ಭಯದಿಂದ ನಡುಗುವ ಸಂಗತಿಯು ಮರಣವಲ್ಲ, ಆದರೆ ಪ್ರಕಟಗೊಂಡಿರುವ ದೇವರ ಪ್ರಸನ್ನತೆಯೇ ಆಗಿದೆ."[28] ಅಜ್ಞಾನದಿಂದ ತುಂಬಿದವರಾಗಿ, ಈ ಅಡಗಿಕೊಂಡವರು ತಮ್ಮನ್ನು ಮರಣವು ಅಷ್ಟೇ ಶೀಘ್ರದಲ್ಲಿ ದೇವರ ಸನ್ನಿಧಿಯೊಳಗೆ ತಳ್ಳುವದಾಗಿತ್ತೆಂಬುದನ್ನು ಗ್ರಹಿಸಿಕೊಳ್ಳದೆ ಹೋದರು (20:12).

16ನೇ ವಚನದಲ್ಲಿರುವ ಒಂದು ಪದಗುಚ್ಛವು ವ್ಯಾಖ್ಯಾನಕ್ಕಾಗಿ ಮೊರೆಯಿಡುತ್ತದೆ: **. . . ಯಜ್ಞದ ಕುರಿಯಾದಾತನ ಕೋಪಕ್ಕೂ ನಮ್ಮನ್ನು ಮರೆಮಾಡು.** ಕೆಲವು ವ್ಯಾಖ್ಯಾನಕಾರರಿಗೆ "ಯಜ್ಞದ ಕುರಿಯಾದಾತನ ಕೋಪ" ಎಂಬ ಈ ಪದಗುಚ್ಛವು ಮುಜುಗರವನ್ನುಂಟು ಮಾಡುತ್ತದೆ; ಅವರು ಎತ್ತಿ ತೋರಿಸುವದಕ್ಕೆ ಬಯಸುವದೇನೆಂದರೆ, ಈ ವಾಕ್ಯಭಾಗದೊಳಗೆ ಈ ಪದಗುಚ್ಛವನ್ನು ಅವಿಶ್ವಾಸಿಗಳು ಬಳಸಿದರೇ ಹೊರತು ವಿಶ್ವಾಸಿಗಳಲ್ಲ ಎಂಬುದೆ. ಹೇಗೂ, "*ದೇವರ* ಕೋಪ" ಎಂಬ ಪದಗುಚ್ಛವು ಪ್ರಕಟನೆ ಪುಸ್ತಕವನ್ನು ಪೂರ್ತಿಯಾಗಿ ಒದ್ದೆಮಾಡುತ್ತದೆ (14:10, 19; 15:1, 7; 16:1; 19:15; ನೋಡಿರಿ 11:18; 16:19). ದೇವರ ಸಿಂಹಾಸನವು ಯಜ್ಞದ ಕುರಿಯಾದಾತನ ಸಿಂಹಾಸನ ಸಹ ಆಗಿರುತ್ತದೆ (22:3); ಒಬ್ಬನು ಏನು ಮಾಡುತ್ತಾನೋ ಅದನ್ನೇ ಮತ್ತೊಬ್ಬನು ಸಹ ಮಾಡುವದಾಗಿ ಹೇಳಲ್ಪಟ್ಟಿರುತ್ತದೆ. ಪ್ರಕಟನೆ ಪುಸ್ತಕದಲ್ಲಿ, ಯೇಸುವು ಅನೇಕ ಸಾರಿ ದುಷ್ಟರನ್ನು ದಂಡಿಸುವವನಾಗಿ ಚಿತ್ರಿಸಲ್ಪಟ್ಟಿರುತ್ತಾನೆ (2:16, 22, 23; 17:14; 19:11-21). "ಯಜ್ಞದ ಕುರಿಯಾದಾತನ ಕೋಪ" ಎಂಬ ಪದಗುಚ್ಛವು ಪುಸ್ತಕದ ಉಳಿದ ಭಾಗದೊಂದಿಗೆ ಸಾಮಂಜಸ್ಯತೆಯನ್ನು ಹೊಂದಿದೆ.

ಹೇಗೂ, "ಯಜ್ಞದ ಕುರಿಯಾದಾತನ ಕೋಪ" ಎಂಬ ಪದಗುಚ್ಛದ ವಿಷಯದಲ್ಲಿ ನಡುಕ ಹುಟ್ಟಿಸುವ ಸಂಗತಿಯೊಂದು ಇರುತ್ತದೆ. ಒಂದು ಮುದ್ದಾದ, ಚೆನ್ನಾಟವಾಡುವ ಕುರಿಯು ಹೇಗೆ ಯಾವನಿಗಾದರೂ ಅಥವಾ ಯಾವದಕ್ಕಾದರೂ ಉದ್ದೇಶಪೂರ್ವಕವಾಗಿ ನೋವನ್ನುಂಟು ಮಾಡುವದಕ್ಕೆ ಸಾಧ್ಯ? ಕೆಲವು ಆಧುನಿಕ ಕಾಲದ ಭಯಾನಕ ಸಿನಿಮಾಗಳಲ್ಲಿ ನಿರೀಕ್ಷೆ ಮಾಡಲಾಗದಂಥ ಖಳನಟರನ್ನು ಹೊಂದಿರುತ್ತವೆ: ಒಂದು ಬೊಂಬೆ, ಒಂದು ಕೂಸು, ಅಥವಾ ಆ ರೀತಿಯಲ್ಲಿರುವಂಥವುಗಳನ್ನು ಹೊಂದಿರುತ್ತವೆ. ಈ ಖಳನಟರಿಗಿರುವ ಸ್ವಾಭಾವಿಕವಾದ ಮುಗ್ಧತೆಯು ಅವರ ಕಥೆಗಳನ್ನು ಇನ್ನಷ್ಟು ತೀವ್ರವಾಗಿ ಭಯಾನಕಗೊಳಿಸುತ್ತವೆ. ಒಂದು ಕುರಿಯು ನಮ್ಮ ಮೇಲೆ ದಾಳಿ ಮಾಡುವದೆಂದರೆ ನಾವು ಬಹುವಾಗಿ ಮುದ್ದಿಸುವ ಸಾಕು ನಾಯಿಯು ನಮ್ಮ ಮೇಲೆ ಆಕ್ರಮಣ ಮಾಡಿದಂತೆ ಅಥವಾ ಪ್ರೀತಿಯ ಮಗುವು ನಮ್ಮ ಮೇಲೆ ದಾಳಿ ಮಾಡುವ ರೀತಿಯಲ್ಲಿರುತ್ತದೆ. ಈ ಅಸಾಮಂಜಸ್ಯತೆಯು ದೇವರಿಂದ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವವರ ಪಾಪವು ಎಷ್ಟು ಆಗಾಧ ಪ್ರಮಾಣದಲ್ಲಿರುತ್ತೆಂಬುದನ್ನು ತೋರಿಸುತ್ತದೆ. ಒಬ್ಬ ಕುರಿಯಾದಾತನನ್ನು ಕೋಪಕ್ಕೆ ನಡಿಸುವಂಥ ಆ ಪಾಪದ ದೈತ್ಯಾಕಾರವು ಎಷ್ಟಿರಬಹುದು!

**ವಚನ 17.** ಭಯದಿಂದ ಅಡಗಿಕೊಂಡವರು ಮುಂದುವರೆದು ಹೇಳುತ್ತಾರೆ, **ಅದರ ಮುಂದೆ ನಿಲ್ಲುವದಕ್ಕೆ ಯಾರು ಶಕ್ತರು.** ವಿಶ್ವದ ಕಣ್ಮರೆ ಮತ್ತು ಅವಿಶ್ವಾಸಿಗಳ ಹತಾಶೆಯು ರಕ್ತಸಾಕ್ಷಿಗಳ,

"ಒಡೆಯನೇ, . . . ಎಷ್ಟು ಕಾಲದ ವರೆಗೂ . . . ? (6:10) ಎಂಬ ಕೂಗಿಗೆ ಕರ್ತನು ನೀಡುವ ಉತ್ತರವನ್ನು ಪ್ರಕಟಗೊಳಿಸುತ್ತವೆ. ಕರ್ತನು ಅವರ ಹಿಂಸಕರಿಗೆ ಪಶ್ಚಾತ್ತಾಪ ಪಡುವದಕ್ಕೆ ಸಾಕಷ್ಟು ದೀರ್ಘಕಾಲವನ್ನು, ಅವರ ದಾರಿಗಳನ್ನು ಮಾರ್ಪಡಿಸಿಕೊಳ್ಳಲು ಇನ್ನು ಎಷ್ಟೋ ದೀರ್ಘಕಾಲವನ್ನು ಕೊಡುವವನಾಗಿದ್ದನು. ಹೇಗೂ, ಕ್ರಮೇಣದಲ್ಲಿ ಆತನು ಅವರಿಗೆ ನ್ಯಾಯತೀರ್ಪು ಮಾಡಲಿದ್ದನು; ಅಂತಿಮವಾಗಿ ಆತನು ಪ್ರತಿದಂಡನೆಯನ್ನು ಮಾಡುವನು. ಕೊನೆಯಲ್ಲಿ, ದೇವರು "ಧಹಿಸುವ ಅಗ್ನಿ" ಆಗಿರುವನು (ಇಬ್ರಿಯ 12:29).

"**ಕೋಪವು ಕಾಣಿಸುವ ಮಹಾದಿನ**ವು ಎಂಬುದು ದೇವರು ರೋಮನ್ ಸಾಮ್ರಾಜ್ಯವನ್ನೆಲ್ಲಾ ನಾಶಮಾಡುವದನ್ನು ಸೂಚಿಸುತ್ತಿದೆಯೋ ಅಥವಾ ಯುಗಾಂತ್ಯದಲ್ಲಿ ವಿಶ್ವದ ನಾಶನವನ್ನು ಕುರಿತು ಮಾತಾಡುತ್ತಿದೆಯೋ?" ಈ ಪ್ರಶ್ನೆಯ ವಿಷಯದಲ್ಲಿ ವ್ಯಾಖ್ಯಾನಕಾರರು ಸಮಾನವಾಗಿಯೇ ವಿಭಜಿತಗೊಂಡಿರುತ್ತಾರೆ.

6:12-17ರಲ್ಲಿನ ಹೇಳಿಕೆಗಳು ರೋಮನ್ ಸಾಮ್ರಾಜ್ಯವನ್ನು ದೇವರು ಕಿತ್ತು ಹಾಕುವದನ್ನು ಸೂಚಿಸುತ್ತಿರ*ಬಹುದಾಗಿದೆ.* ಈ ಮುಂಚೆ ಕೊಡಲಾಗಿರುವ ಉಲ್ಲೇಖನಗಳಲ್ಲಿ - ಹಳೆಯ ಒಡಂಬಡಿಕೆಯ ಪ್ರವಾದಿಗಳು ಭೂಕಂಪಗಳು, ಸೂರ್ಯನು ಕತ್ತಲಾಗುವಿಕೆ, ಚಂದ್ರನು ರಕ್ತವಾಗುವಿಕೆ, ಮತ್ತು ನಕ್ಷತ್ರಗಳು ಬೀಳುವ ಕುರಿತಾಗಿ ಮಾತಾಡುವ ವೇಳೆ - ಲೇಖಕರು ಸಾಮಾನ್ಯವಾಗಿ ದೇವರನ್ನು ವಿರೋಧಿಸುತ್ತಿದ್ದ ದೇಶಗಳನ್ನು ತಾತ್ಕಾಲಿಕವಾಗಿ ದಂಡಿಸುವ ಕುರಿತಾಗಿ ಮುಂತಿಳಿಸಿದರು: ಬಾಬಿಲೋನ, ಅಶ್ಶೂರ್ಯ, ಮತ್ತು ಇತರ ದೇಶಗಳು. ಗತಕಾಲದಲ್ಲಿ ದೇವರು ಅಪರಾಜಿತವೆಂದು ಕಾಣಿಸಿದ್ದ ಜನಾಂಗಗಳನ್ನು ನಾಶಗೊಳಿಸಿದನೆಂಬುದನ್ನು ಯೋಹಾನನ ವಾಚಕರು ಜ್ಞಾಪಕ ಮಾಡಿಕೊಳ್ಳುವವರಾಗಿದ್ದರು. ಅದೇ ರೀತಿಯಲ್ಲಿ ದೇವರಿಗೆ ರೋಮನ್ ಸಾಮ್ರಾಜ್ಯವನ್ನು ಕಿತ್ತೇಸೆಯುವದು ಒಂದು ಸಮಸ್ಯೆಯೇ ಅಲ್ಲ.

ರೋಮನ್ ಸಾಮ್ರಾಜ್ಯದ ಪರಾಜಯವು ರಕ್ತಸಾಕ್ಷಿಗಳ, ". . . ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀನು ಎಷ್ಟು ಕಾಲದ ವರೆಗೂ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ" ಎಂಬ ಕೂಗಿಗೆ ನೀಡಲಾಗುವ ಒಂದು ನೇರವಾದ, ವೈಯಕ್ತಿಕವಾದ ಮತ್ತು ನಿರ್ದಿಷ್ಟವಾದ ಪ್ರತ್ಯುತ್ತರವಾಗಿರಲಿತ್ತು. ರೋಮನ್ ಸರ್ಕಾರವು ಕ್ರೈಸ್ತರ ರಕ್ತವನ್ನು ಸುರಿಸಿತ್ತಾದ್ದರಿಂದ, ನಿಶ್ಚಯವಾಗಿಯೂ ರೋಮನ್ ಸರ್ಕಾರವು ದಂಡಿಸಲ್ಪಡಬೇಕೆಂಬುದು ದೈವಿಕ ನ್ಯಾಯದ ಬೇಡಿಕೆಯಾಗಿತ್ತು. ಇದಕ್ಕೆ ಸಂಬಂಧಿಸಿದ ಹಾಗೆಯೇ, ಪ್ರಕಟನೆ 17ರಿಂದ 19 ಅಧ್ಯಾಯಗಳನ್ನು ಓದಿರಿ. ಬಾಬೆಲೆಂಬ ಮಹಾ ನಗರದ, ಅಂದರೆ ರೋಮ್ ನಗರದ ನಾಶನದ ಬಳಿಕ (17:9, 18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಪರಲೋಕದಲ್ಲಿ ಜನರ ಒಂದು ಮಹಾ ಸಮೂಹವು ಕರ್ತನಿಗೆ ಈ ಪದಗಳಿಂದ ಒಂದು ಸ್ತುತಿ ಗೀತೆಯನ್ನು ಹಾಡಿದರು: ". . . ಜಯವೂ ಪ್ರಭಾವವೂ ಶಕ್ತಿಯೂ ನಮ್ಮ ದೇವರಲ್ಲಿ ಉಂಟು; . . . ಆ ಮಹಾ ಜಾರಸ್ತ್ರೀಗೆ ಆತನು ನ್ಯಾಯ ತೀರಿಸಿ ಅವಳು *ಆತನ ಸೇವಕರನ್ನು ಕೊಂದದ್ದಕ್ಕಾಗಿ ಅವಳಿಗೆ ಪ್ರತಿದಂಡನೆಯನ್ನು ಮಾಡಿದ್ದಾನೆ"* (ಒತ್ತಿ ಹೇಳಿದ್ದು ನನ್ನದು). ಈ ವಚನಗಳು 6:10ರಲ್ಲಿನ ಮನವಿಯೊಂದಿಗೆ ನೇರವಾದ ಸಂಬಂಧವನ್ನು ಹೊಂದಿವೆ ಎಂದು ಅನೇಕರು ನಂಬುತ್ತಾರೆ, ಮತ್ತು ಅವರು ಹಾಗೆ ನಂಬಿದ್ದು ಸರಿಯಾಗಿಯೇ ಇರಬಹುದಾಗಿದೆ.

ನಮ್ಮ ಮುಂದಿರುವ ವಾಕ್ಯಭಾಗವು ನಿರ್ದಿಷ್ಟವಾಗಿ ಮತ್ತು ಪ್ರತ್ಯೇಕವಾಗಿ ರೋಮನ್ ಸಾಮ್ರಾಜ್ಯದ ನಾಶನವನ್ನು ಕುರಿತು ಸೂಚಿಸುತ್ತೆಂದು ನಂಬುವವರಿಂದ ಇನ್ನು ಕೆಲವು ವಾದಗಳು ಬಳಸಲ್ಪಟ್ಟಿರುತ್ತವೆ. ಉದಾಹರಣೆಗೆ, ಒಂದು ವಾದವು ಏನೆಂದರೆ, "ಇದು

ಯುಗಾಂತ್ಯದ ವೇಳೆಯಲ್ಲಿ ನಡೆಯುವ ವಿಶ್ವದ ನಾಶನವನ್ನು ಸೂಚಿಸುವದಕ್ಕೆ ಸಾಧ್ಯವಿಲ್ಲ, ಯಾಕೆಂದರೆ ಅದೆಲ್ಲವೂ 'ರೆಪ್ಪೆ ಬಡಿಯುವದಷ್ಟರೊಳಗೆ' ಸಂಭವಿಸುವದು (1 ಕೊರಿಂಥ 15:52)." ಹೇಗೂ, ಈ ವಾಕ್ಯಭಾಗವು ಸಾಂಕೇತಿವಾಗಿರುತ್ತದೆ ಮತ್ತು ಸಂಕೇತವೊಂದರಲ್ಲಿ ಏನೂ ಬೇಕಾದರೂ ಸಂಭವಿಸುವ ಸಾಧ್ಯತೆಯಿರುತ್ತಾದ್ದರಿಂದ, ಈ ವಾದಕ್ಕೆ ಹೆಚ್ಚಾದ ಮಹತ್ವಪೂರ್ಣತೆಯು ಇರುವಂತೆ ಕಾಣಿಸುವದಿಲ್ಲ. ಇನ್ನೊಂದು ವಾದವೆಂದರೆ "ಭಾಷೆಯು ಸಾಂಕೇತಿಕವಾದದ್ದೇ ಹೊರತು ಅಕ್ಷರಶಃ ಅಲ್ಲ, ಮತ್ತು ಈ ಕಾರಣದಿಂದ ವಿಶ್ವದ ನಾಶನವನ್ನು ಸೂಚಿಸುವದಕ್ಕೆ ಸಾಧ್ಯವಿರುವದಿಲ್ಲ" ಎಂಬುದೆ. ಆ ವಾದವು ಇಬ್ಬಾಯಿ ಕತ್ತಿಯಾಗಿದ್ದು ಎರಡೂ ಕಡೆಯಿಂದಲೂ ಕತ್ತರಿಸುವದಾಗಿದೆ. ಈ ವಾಕ್ಯಭಾಗವು ತಾತ್ಕಾಲಿಕ ದಂಡನೆಯ *ಅಥವಾ* ಅಂತಿಮ ದಂಡನೆಯ ಸಂಕೇತವಾಗಿರುವದು; ವಾಕ್ಯಭಾಗವು ಸಾಂಕೇತಿಕವಾಗಿರುತ್ತದೆಂಬ ವಾಸ್ತವಾಂಶವು ಇವೆರಡರಲ್ಲಿ ಸಾಧ್ಯತೆಯನ್ನು ಅಳಿಸಿ ಹಾಕುವದಿಲ್ಲ.

ಇನ್ನೊಂದು ಕಡೆಯಲ್ಲಿ, 6:12-17 ವಚನಗಳು *ಅಂತಿಮವಾದ* "ಕೋಪವು ಕಾಣಿಸುವ ಮಹಾದಿನ"ವನ್ನು ಸೂಚಿಸುತ್ತದೆ ಎಂಬ ವಾದವನ್ನು ಮಾಡಬಹುದಾಗಿದೆ. ಈ ನಿಲುವನ್ನು ತೆಗೆದುಕೊಳ್ಳುವವರು ಈ ಕೆಳಗಿನ ಪುರಾವೆಗಳನ್ನು ಒದಗಿಸುತ್ತಾರೆ: (1) ಈ ವಾಕ್ಯಭಾಗವು ನಾಶನದ *ಎಲ್ಲಾ* ಸಾದೃಶ್ಯಗಳನ್ನು ಒಟ್ಟುಗೂಡಿಸುವಂತೆ ಹಳೆಯ ಒಡಂಬಡಿಕೆಯ ಬೇರಾವ ವಾಕ್ಯಭಾಗವೂ ಮಾಡುವದಿಲ್ಲ. (2) ಚಿತ್ರಣದ ಕೆಲವೊಂದು ಅಂಶಗಳು ನಮಗೆ ಲೋಕಾಂತ್ಯದ ವೇಳೆಯಲ್ಲಿ ಸಂಭವಿಸುವ ಘಟನೆಗಳನ್ನು ಜ್ಞಾಪಿಸುವದು. ಇವುಗಳೊಳಗೆ ಎಲ್ಲಾ ಮಾನವರು ಒಟ್ಟಾಗಿ ಸೇರಿಸಲ್ಪಡುವದು (2 ಕೊರಿಂಥ 5:10) ಮತ್ತು ತಂದೆ ಮತ್ತು ಮಗನನ್ನು ಜಾಗತಿಕವಾಗಿ ಒಪ್ಪಿಕೊಳ್ಳುವಿಕೆಯಂತಹ (ಫಿಲಿಪ್ಪಿ 2:11) ಘಟನೆಗಳು ಸೇರಿರುತ್ತವೆ. (3) ಕುರಿಯಾದಾತನನ್ನು ಪ್ರಸ್ತಾಪಿಸುವದು ಈ ದೃಶ್ಯವನ್ನು ವಿಶಿಷ್ಟಗೊಳಿಸುತ್ತದೆ. ಹಳೆಯ ಒಡಂಬಡಿಕೆ ವಾಕ್ಯಭಾಗಗಳು ಕ್ರಿಸ್ತನನ್ನು ಸೇರ್ಪಡೆಗೊಳಿಸಿರಲಿಲ್ಲ.

ಅಲ್ಲದೆ *ಪರಿಚಯ* ಭಾಗದಲ್ಲಿ ನೀಡಲಾಗಿರುವ ಪ್ರಕಟನೆ ಪುಸ್ತಕದ ಚಿಕ್ಕದಾದ ಸಂಕ್ಷಿಪ್ತ ವಿವರಣೆಯನ್ನು ಸಹ ಪರಿಗಣಿಸಿರಿ. ಈ ಸಂಕ್ಷಿಪ್ತ ವಿವರಣೆಯ ಪ್ರಕಾರವಾಗಿ, ಪ್ರಕಟನೆ ಪುಸ್ತಕದಲ್ಲಿ ಏಳು ವಿಭಾಗಗಳಿರುತ್ತವೆ, ಒಂದೊಂದು ವಿಭಾಗವು "ಕ್ರಿಸ್ತನ ಮೊದಲನೆಯ ಬರೋಣದಿಂದ ಎರಡನೆಯ ಬರೋಣದ ವರೆಗಿನ"[29] ಇಡೀ ಕ್ರೈಸ್ತೀಯ ಯುಗವನ್ನು ವ್ಯಾಪಿಸಿರುತ್ತದೆ. 6:12-17ರಲ್ಲಿರುವ ದೃಶ್ಯವು ಈ ಮುಂಚೆ 1:7ರಲ್ಲಿ ಕೊಡಲಾಗಿರುವ ಎರಡನೆಯ ಬರೋಣದ ಚಿತ್ರಣದೊಂದಿಗೆ ಖಂಡಿತವಾಗಿಯೂ ಸರಿ ಹೊಂದುತ್ತದೆ: "ಇಗೋ ಮೇಘಗಳೊಂದಿಗೆ ಬರುತ್ತಾನೆ; ಎಲ್ಲರ ಕಣ್ಣುಗಳು ಆತನನ್ನು ಕಾಣುವವು . . . *ಭೂಮಿಯಲ್ಲಿರುವ ಎಲ್ಲಾ ಕುಲದವರು* ಆತನನ್ನು ನೋಡಿ *ಎದೆಬಡುಕೊಳ್ಳುವರು . . .*" (ಒತ್ತಿ ಹೇಳಿದ್ದು ನನ್ನದು; 1:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಏಳು-ವಿಭಾಗಗಳ ಸಂಕ್ಷಿಪ್ತ ವಿವರಣೆಯು 6:12-17 ವಚನಗಳು ಅಂತಿಮ ಕೋಪದ ದಿನವನ್ನು ಕುರಿತು ತಿಳಿಸುತ್ತವೆಂದು ಸೂಚಿಸುತ್ತದೆ.

ಹೀಗಿದ್ದರೂ, ಈ ವಾಕ್ಯಭಾಗವು ತಾತ್ಕಾಲಿಕ ದಂಡನೆಯನ್ನು ಕುರಿತು ಮಾತಾಡುತ್ತದೋ ಅಥವ ನಿತ್ಯವಾದ ದಂಡನೆಯನ್ನು ಕುರಿತು ಮಾತಾಡುತ್ತದೋ ಎಂಬ ಪ್ರಶ್ನೆಯು ಪ್ರಾಮುಖ್ಯವಾಗಿರುವದಿಲ್ಲ. ಈ ವಾಕ್ಯಭಾಗವು ಪ್ರಾಥಮಿಕವಾಗಿ ರೋಮನ್ ಸಾಮ್ರಾಜ್ಯದ ನಾಶನವನ್ನು ಸೂಚಿಸುವದಾದರೆ, ಅದು ಕಡೇ ಮಹಾ ದಿನದ ಪೂರ್ವಛಾಯೆಯಾಗಿರುತ್ತದೆ ಮತ್ತು ದೇವರಿಗೆ ವಿರುದ್ಧವಾಗಿ ನಿಲ್ಲಲು ಪ್ರಯತ್ನಿಸುವ *ಯಾವನಿಗಾದರೂ* ಅದೊಂದು ಎಚ್ಚರಿಕೆಯಾಗಿದೆ. ಈ ಕಡೇ ಮಹಾ ದಿನದ ಕುರಿತು ಮಾತಾಡುವದಾದಲ್ಲಿ, *ಯಾವನಾದರೂ*

ಕರ್ತನನ್ನು ವಿರೋಧಿಸುವದಾದರೆ - ರೋಮನ್ ಸಾಮ್ರಾಜ್ಯವೂ ಸೇರಿದಂತೆ - ಅಂತಿಮವಾಗಿ ಆತನ ಕೋಪದ ರುಚಿಯನ್ನು ಅನುಭವಿಸುವರು ಎಂದು ಕಲಿಸುತ್ತದೆ. ವಾಕ್ಯಭಾಗವು ಒತ್ತಿ ಹೇಳುವದೇನೆಂದರೆ ಕೋಪದ ಮಹಾ ದಿನವು ಬರುತ್ತಿ*ದೆ* ಎಂಬುದೆ. ಬಾಬಿಲೋನಿನವರಿಗೆ ಒಂದು ಕೋಪದ ದಿನವು ಬಂದಿತ್ತು, ಅಶ್ಶೂರ್ಯರಿಗೆ ಕೋಪದ ದಿನವೊಂದು ಬಂದಿತ್ತು, ರೋಮನ್ನರಿಗೆ ಒಂದು ಕೋಪದ ದಿನವು ಬಂದಿತ್ತು, ಮತ್ತು ದೇವರ ಪ್ರೀತಿಯ ಸಂಜ್ಞೆಗಳನ್ನು ನಿರ್ಲಕ್ಷ್ಯ ಮಾಡುತ್ತಾ ಜೀವಿಸುತ್ತಿರುವರಾಗಿರುವ ಇಂದು ಜೀವಿಸುತ್ತಿರುವವರೆಲ್ಲರ ಮೇಲೆ ಬರುವದು (ರೋಮಾ 2:5; ಎಫೆಸ 5:6).

ಜೀವನಕ್ಕೆ ಏನಾದರೂ ಅರ್ಥವಿರಬೇಕೆಂದರೆ ಒಬ್ಬನು ಅಂತಿಮ ಘಟ್ಟವನ್ನು ನೋಡತಕ್ಕದ್ದು. ಮಾನವ ಚರಿತ್ರೆಯು ಅಂತ್ಯವಿಲ್ಲದ, ಯಾವ ಅರ್ಥವೇ ಇಲ್ಲದೆ ಪುನರಾವರ್ತನೆಗೊಳ್ಳುವ ಕಾಲಚಕ್ರವಲ್ಲ. ಬದಲಾಗಿ, ಇತಿಹಾಸವು "ಒಂದು ನಿಖರವಾದ ಗುರಿಯನ್ನೊಳಗೊಂಡಿರುವ ಒಂದು ಪ್ರಯಾಣವಾಗಿದೆ."[30] ಗತಿಸಿ ಹೋಗುವ ಪ್ರತಿ ದಿನವು ನಮ್ಮನ್ನು ಲೋಕಾಂತ್ಯಕ್ಕೆ ನಿಕಟವಾಗಿ - ನಿತ್ಯತ್ವಕ್ಕೆ, ಪರಲೋಕಕ್ಕೆ ಮತ್ತು ನರಕಕ್ಕೆ - ಕರೆದೊಯ್ಯುತ್ತದೆ. ಪ್ರಕಟನೆ 6:12-17 ರೀತಿಯ ವಾಕ್ಯಭಾಗಗಳು ದುಷ್ಟರ ಜಯವು ಕ್ಷಣಿಕವಾದದ್ದು (ನೋಡಿರಿ ಕೀರ್ತನೆ 94:1-7, 21-23) ಮತ್ತು ನ್ಯಾಯತೀರ್ಪು ಖಚಿತ (ಇಬ್ರಿಯ 9:27) ಎಂಬುದನ್ನು ಘೋಷಿಸುತ್ತದೆ. ದೇವರು ತನ್ನ ಸ್ವಂತ ಉದ್ದೇಶಗಳಿಗೋಸ್ಕರ ತನ್ನ ಕೋಪವನ್ನು ವಿಳಂಬಗೊಳಿಸಬಹುದು, ಆದರೆ ಕೋಪದ ದಿನವು ಬರುತ್ತಿದೆ - ಮತ್ತು ಪ್ರತಿಯೊಬ್ಬ ವ್ಯಕ್ತಿಯು ಸಿದ್ಧಗೊಳ್ಳುವ ಅಗತ್ಯವಿರುತ್ತದೆ!

17ನೇ ವಚನದಲ್ಲಿರುವ "ಕೋಪವು ಕಾಣಿಸುವ ಮಹಾದಿನ"ದ ಗುರುತು ಆಸಕ್ತಿಕರವಾಗಿರುತ್ತದೆ, ಆದರೆ ಮುಖ್ಯವಾಗಿರುವ ಪ್ರಶ್ನೆಯು ಇದೇ ಆಗಿದೆ: **"ಅದರ ಮುಂದೆ ನಿಲ್ಲುವದಕ್ಕೆ ಯಾರು ಶಕ್ತರು?"** ಇದಕ್ಕೆ ಮುಂಚೆ "ಯಾರು ನಿಂತುಕೊಳ್ಳಲು ಶಕ್ತರು?" ಎಂಬ ಪ್ರಶ್ನೆಯು ಕೇಳಲ್ಪಟ್ಟಿದೆ. ನಹೂಮನು ಹೀಗೆ ಬರೆಯುತ್ತಾನೆ, "ಆತನ ಸಿಟ್ಟಿಗೆ ಯಾರು ತಡೆದಾರು? ಆತನ ರೋಷಾಗ್ನಿಗೆ ಯಾರು ನಿಂತಾರು? ಆತನ ರೌದ್ರವು ಜ್ವಾಲಾಪ್ರವಾಹದಂತೆ ಹರಿಯುತ್ತದೆ, ಬಂಡೆಗಳು ಆತನಿಂದ ಕೆಡವಲ್ಪಟ್ಟಿವೆ" (ನಹೂಮ 1:6). ಮಲಾಕಿಯನು ಸಹ ಹೀಗೆ ಕೇಳಿದ್ದನು, "ಆತನು ಬರುವ ದಿನವನ್ನು ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು ನಿಂತಾರು? ಆತನು ಅಕ್ಕಸಾಲಿಗನ ಬೆಂಕಿಗೂ ಅಗಸನ ಚೌಳಿಗೂ ಸಮಾನನಾಗಿದ್ದಾನೆ" (ಮಲಾಕಿಯ 3:2). ಎಜ್ರನು ಹೀಗೆ ಪ್ರಾರ್ಥಿಸುವ ವೇಳೆಯಲ್ಲಿ ಆ ಪ್ರಶ್ನೆಗೆ ಉತ್ತರಿಸಿದನು, "ಯೆಹೋವನೇ, ಇಸ್ರಾಯೇಲ್ ದೇವರೇ, . . . ನಾವಾದರೋ ನಿನ್ನ ದೃಷ್ಟಿಯಲ್ಲಿ ಅಪರಾಧಿಗಳು. ಈ ನಮ್ಮ ದುಷ್ಕೃತ್ಯದ ನಿಮಿತ್ತವಾಗಿ ನಿನ್ನೆದುರಿನಲ್ಲಿ ನಿಲ್ಲಲಾರೆವು" (ಎಜ್ರನು 9:15). ಕರ್ತನ ಮುಂದೆ ಯಾವ*ನೊಬ್ಬನೂ* ನಿಲ್ಲಲಾರನು - ಅಂದರೆ, *ಸಿದ್ಧ ಮಾಡಿಕೊಂಡರದ ಯಾವನೊಬ್ಬನೂ* ನಿಲ್ಲಲಾರನು. Edward Myersನು ಹೀಗೆ ವ್ಯಾಖ್ಯಾನಿಸುತ್ತಾನೆ, "'ನಿಲ್ಲುವದಕ್ಕೆ ಯಾರು ಶಕ್ತರು?' ಎಂಬುದು ದೇವರ ಅತ್ಯಾಶ್ಚರ್ಯವಾದ ಕೃಪೆಯ ಸುವಾರ್ತೆಯನ್ನು ತಿರಸ್ಕರಿಸಿದವರ ನಿರೀಕ್ಷೆರಹಿತತೆಯನ್ನು ವ್ಯಕ್ತಪಡಿಸುತ್ತದೆ. ಇದೊಂದು ಅಪರಾಧಿಯೆಂದು ನಿರ್ಣಯಿಸುವ ಪ್ರಶ್ನೆಯಾಗಿದ್ದು ಪ್ರತಿಯೊಂದು ಭಕ್ತಿಹೀನ ಜೀವಿತದ ಅಂತಿಮ ಅರ್ಥವನ್ನೇ ದೋಚುವಂಥದ್ದಾಗಿದೆ."[31]

ನಾವು 9ರಿಂದ 11 ವಚನಗಳಲ್ಲಿ ಬಣ್ಣಿಸಲ್ಪಟ್ಟಿರುವವರು ಹಾಗೂ 15ರಿಂದ 17 ವಚನಗಳಲ್ಲಿ ಬಣ್ಣಿಸಲ್ಪಟ್ಟಿರುವವರ ನಡುವಿನ ಹಲವಾರು ವಿರುದ್ಧ ಹೋಲಿಕೆಗಳನ್ನು ಕಾಣುತ್ತೇವೆ. ಒಂದು ವಿರುದ್ಧ ಹೋಲಿಕೆಯೆಂದರೆ, ತತ್ಪರಿಣಾಮವಾಗಿ ರಕ್ತಸಾಕ್ಷಿಗಳು ಹೀಗೆ ಮೊರೆಯಿಡುತ್ತಾರೆ,

"ನಮ್ಮನ್ನು ಕೊಂದವರಿಗೆ ಪ್ರತಿದಂಡನೆ ಮಾಡು!" ಸಿದ್ಧತೆ ಮಾಡಿಕೊಂಡಿರದವರಾದರೋ, "ನಮ್ಮನ್ನು ಮರೆಮಾಡು!" ಎಂದು ಕೂಗಿಕೊಂಡರು. ಇನ್ನೊಂದು ವಿರುದ್ಧ ಹೋಲಿಕೆಯು ಏನೆಂದರೆ ಬಾಧೆಯನ್ನನುಭವಿಸುವಿಕೆಯು ಮನುಷ್ಯರನ್ನು ದೇವರಿಂದ ಬೇರ್ಪಡಿಸಲಿಲ್ಲ ಆದರೆ ಪಾಪವೇ ಬೇರ್ಪಡಿಸಿತು. ಅತ್ಯಂಥ ಮನಸೆಳೆಯು ವಿರುದ್ಧ ಹೋಲಿಕೆಯೆಂದರೆ ಬಹುಶಃ ಪ್ರತಿಯೊಂದು ಗುಂಪು ಕೇಳಿದ ಪ್ರಶ್ನೆಯೇ ಆಗಿರಬಹುದಾಗಿದೆ: ರಕ್ತಸಾಕ್ಷಿಗಳು "ಇನ್ನು ಎಷ್ಟು ಕಾಲದ ವರೆಗೂ?" ಎಂಬುದನ್ನು ತಿಳಿದುಕೊಳ್ಳಲು ಇಚ್ಚೈಸಿದರೆ, ಭಯಗೊಂಡಿದ್ದವರು, "ನಿಲ್ಲುವದಕ್ಕೆ ಯಾರು ಶಕ್ತರು?" ಎಂದು ಕೂಗಿಕೊಂಡರು.

"ನಿಲ್ಲುವದಕ್ಕೆ ಯಾರು ಶಕ್ತರು?" ಎಂಬ ಪ್ರಶ್ನೆಗೆ ಉತ್ತರವು ಏನೆಂದರೆ "ದೇವರ ಚಿತ್ತವನ್ನು ಮಾಡುವವರೇ ನಿಲ್ಲುವರು" ಎಂಬುದೆ. ಮುಂದಿನ ಅಧ್ಯಾಯವು ದೇವರು ಭಕ್ತಿವಂತರ ಬಗ್ಗೆ ಕಾಳಜಿ ಮಾಡುವದರ ಮತ್ತು ಪ್ರತಿಫಲ ಕೊಡುವದರ ಕುರಿತಾಗಿ ಮಾತಾಡುತ್ತದೆ. 7:9ರಲ್ಲಿ, ನಾವು "ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ *ನಿಂತಿರುವದನ್ನು*" ಕುರಿತು ಓದುತ್ತೇವೆ (ಒತ್ತಿ ಹೇಳಿದ್ದು ನನ್ನದು). ರಕ್ತಸಾಕ್ಷಿಗಳು "ಇನ್ನು ಎಷ್ಟು ಕಾಲ?" ಎಂದು ಕೂಗಿಕೊಳ್ಳುತ್ತಿರುವ ವೇಳೆಯಲ್ಲಿ ಹಿಂಸಕರು ನಿಂತುಕೊಂಡಿದ್ದರು, ಅದೇ ಸಮಯದಲ್ಲಿ ಹಿಂಸಿಸಲ್ಪಟ್ಟವರ ದೇಹಗಳು ಸತ್ತವುಗಳಾಗಿ ಬೀದಿಗಳಲ್ಲಿ ಬಿದ್ದಿದ್ದವು. ಅಂತ್ಯದಲ್ಲಿ, ನಿಂತುಕೊಳ್ಳುವವರು ಮಾತ್ರ ದೇವರ ಜನರೇ ಆಗಿರುವರು - ದುಷ್ಟರು ಅದೇ ವೇಳೆಯಲ್ಲಿ ದೇವರ ಕೋಪಾಗ್ನಿಯಿಂದ ತುಂಡರಿಸಲ್ಪಡುವರು.

# ಅನ್ವಯಿಸುವಿಕೆ

## ಮೊದಲ ಆರು ಮುದ್ರೆಗಳಿಂದ ಪ್ರಸಂಗಗಳು (ಅಧ್ಯಾಯ 6)

ನೀವು 6ನೇ ಅಧ್ಯಾಯವನ್ನು ಒಂದೇ ಪಾಠದೊಳಗೆ ಕಲಿಸುವಸುವದಕ್ಕೆ ಬಯಸುವದಾದರೆ, Merrill C. Tenneyನು ಈ ಸಂಕ್ಷಿಪ್ತ ವಿವರಣೆಯನ್ನು ಹೊಂದಿದ್ದಾನೆ: (1) ಇತಿಹಾಸದ ಘೋರ ಪೀಡೆಗಳು (ಮೊದಲ ನಾಲ್ಕು ಮುದ್ರೆಗಳು), (2) ಪರಿಶುದ್ಧರಿಗಾಗುವ ಹಿಂಸೆ (ಐದನೆಯ ಮುದ್ರೆ), (3) ಆಕಾಶಗಳನ್ನು ಕದಲಿಸುವದು (ಆರನೆಯ ಮುದ್ರೆ).[32]

6ನೇ ಅಧ್ಯಾಯವನ್ನು ಅರ್ಥೈಸುವದಕ್ಕೆ ಅನುಸರಿಸಬಹುದಾದ ಇನ್ನೊಂದು ಆಸಕ್ತಿಕರವಾದ ದಾರಿಯೆಂದರೆ "ಸಂಕಷ್ಟದ ಕುರಿತು ದೇವರ ಏಳು-ಅಂಶಗಳ ಪ್ರಸಂಗ." ಸಂಭಾವ್ಯವಾದ ಪ್ರಮುಖ ಅಂಶಗಳೆಂದರೆ (1) ಸಂಕಷ್ಟ - ನೀನು ಅದರಿಂದ ತಪ್ಪಿಸಿಕೊಳ್ಳಲಾರಿ! (ಮೊದಲನೆಯ ಮುದ್ರೆ), (2) ಸಂಕಷ್ಟವು ನಿನ್ನ ಹೃದಯವನ್ನು ಒಡೆಯಬಲ್ಲದು (ಎರಡನೆಯ ಮುದ್ರೆ), (3) ಸಂಕಷ್ಟವು ನಿನ್ನ ಆತ್ಮವನ್ನು ಕುಂದಿಸಬಲ್ಲದು (ಮೂರನೆಯ ಮುದ್ರೆ), (4) ಸಂಕಷ್ಟವು ನಿನ್ನ ಪ್ರಾಣವನ್ನು ತೆಗೆಯಬಲ್ಲದು (ನಾಲ್ಕನೆಯ ಮುದ್ರೆ), (5) ಸಂಕಷ್ಟವು ವಿಶ್ವಾಸಿಗೆ ದುಪ್ಪಟ್ಟಾಗಿ ಬರುವದು (ಐದನೆಯ ಮುದ್ರೆ), (6) ಮುಖ್ಯವಾಗಿರುವ ಏಕೈಕ ಸಂಕಷ್ಟವು ಅವಿಶ್ವಾಸಿಗಳ ಮೇಲೆಯೇ ಬರುವಂಥದ್ದು (ಆರನೆಯ ಮುದ್ರೆ), (7) ಇಂದಿನ ಸಂಕಷ್ಟಗಳನ್ನು ಸಹಿಸಿಕೊಳ್ಳುವಂತೆ ದೇವರು ನಿನಗೆ ಸಹಾಯ ಮಾಡುವನು - ಮತ್ತು ಸಂಕಷ್ಟರಹಿತ ನಾಳೆಯನ್ನು ವಾಗ್ದಾನ ಮಾಡುತ್ತಾನೆ (7ನೇ ಅಧ್ಯಾಯ). 6ನೇ ಅಧ್ಯಾಯದಲ್ಲಿ ಈ ಅರ್ಥೈಸುವ ದಾರಿಯು ಬಳಸಲ್ಪಡುವದಾದರೆ, ನೀವು ಕೇವಲ 7ನೇ ಅಧ್ಯಾಯದಲ್ಲಿ ಬರಲಿರುವ ಪಾಠಕ್ಕಾಗಿ ಹಸಿವೆಯಿಂದ ಕಾದುಕೊಳ್ಳುವಂತೆ ಮಾಡುವದಕ್ಕೆ ಏಳನೆಯ ಅಂಶವನ್ನು ಪ್ರಸ್ತಾಪಿಸಿದರೆ ಸಾಕಾಗುತ್ತದೆ. ಈ ಸಂಕ್ಷಿಪ್ತ ವಿವರಣೆಯು ಎರಡು-ಭಾಗದ ಪ್ರಸಂಗವಾಗಬಹುದು, ಅದರಲ್ಲಿ ಮೊದಲ ನಾಲ್ಕು ಅಂಶಗಳನ್ನು ಮುಂಜಾನೆಯಲ್ಲಿ

ಮತ್ತು ಕೊನೆಯ ಮೂರು ಅಂಶಗಳನ್ನು ಸಾಯಂಕಾಲದಲ್ಲಿ ಬೋಧಿಸಬಹುದು.

## ಅಂತ್ಯಕಾಲಿಕದ ನಾಲ್ಕು ಕುದುರೆ ಸವಾರರು (6:1-8)

ಈ ಕೆಳಗಿನವುಗಳನ್ನು 1-8 ವಚನಗಳನ್ನು ಸಾರಾಂಶಗೊಳಿಸುವ ನಕ್ಷೆಯಾಗಿ ಬಳಸಬಹುದಾಗಿದೆ:

1. *ವಿಜಯ* - *ಸಾಮ್ರಾಜ್ಯಶಾಹಿ*ಯಲ್ಲಿ (ಇತರರ ಮೇಲೆ, ವಿಶೇಷವಾಗಿ ಕ್ರೈಸ್ತರ ಮೇಲೆ ಜಯ ಹೊಂದಿದಂತೆ ಕಾಣಿಸುವದು) ಕಾಣುವ ಪ್ರಕಾರ ಮನುಷ್ಯನ ದುರಾಶೆಯ ವಿಜಯ.
2. *ಕ್ಷೋಭೆ* - ಅನೇಕ ಮುಗ್ದರನ್ನು ಕೊಲ್ಲುವದರೊಂದಿಗೆ *ಯುದ್ಧ*ದಲ್ಲಿ ಮಾದರಿಗೊಳಿಸಲ್ಪಟ್ಟಿರುವ ಪ್ರಕಾರ.
3. *ಸಂಕಷ್ಟ* - ಉದಾಹರಣೆಗೆ ಕೊಲ್ಲಲ್ಪಡದವರ ಮೇಲೆ (ವಿಶೇಷವಾಗಿ ಕ್ರೈಸ್ತರ ಮೇಲೆ) ಬರುವ *ಆರ್ಥಿಕ ಸಂಕಷ್ಟ.*
4. *ಉಪದ್ರವ* - ಇದು ಲೋಕದಲ್ಲೆಲ್ಲಾ ಅನುಭವಿಸಲ್ಪಡುವಂಥದ್ದಾಗಿದ್ದು ಅನೇಕ ಅಸ್ವಾಭಾವಿಕ ಕಾರಣಗಳಿಂದಾಗುವ *ಮರಣ*ವು ಅದರ ಪರಾಕಾಷ್ಠೆಯಾಗುವದು (ಕ್ರೈಸ್ತರು ಮತ್ತು ಕ್ರೈಸ್ತೇತರರು ಇಬ್ಬರಿಗೂ).

## ಆಶ್ಚರ್ಯಗಳೇನೂ ಇಲ್ಲ (6:1-8)

ಕ್ರೈಸ್ತರು ಏನೂ ತಿಳಿಯದ ಮುಗ್ಧರಂತೆ - ವಿಶೇಷವಾಗಿ ಹಿಂಸೆಯ ವಿಷಯವಾಗಿ - ಜೀವಿಸದಿರುವದು ಪ್ರಾಮುಖ್ಯವಾಗಿರುತ್ತದೆಂದು ಕರ್ತನು ಯೋಚಿಸಿದನು (ನೋಡಿರಿ ಮತ್ತಾಯ 5:10–12, 44; 10:23; 13:21; 23:34; ಲೂಕ 11:49; 21:12; ಯೋಹಾನ 15:20). ಆತನು ತನ್ನ ಶಿಷ್ಯರು ಅನುಭವಿಸಲಿದ್ದ ಹಿಂಸೆಯ ವಿಷಯದಲ್ಲಿ ಅತ್ಯಾಶ್ಚರ್ಯವಾಗುವಷ್ಟು ಮುಚ್ಚುಮರೆಯಿಲ್ಲದೆ ಮಾತಾಡಿದನು:

> ಇದಲ್ಲದೆ ಅಣ್ಣನು ತಮ್ಮನನ್ನು, ತಂದೆಯು ಮಗನನ್ನು ಮರಣಕ್ಕೆ ಒಪ್ಪಿಸುವರು; ಮಕ್ಕಳು ಹೆತ್ತವರ ಮೇಲೆ ತಿರುಗಿಬಿದ್ದು ಅವರನ್ನು ಕೊಲ್ಲಿಸುವರು. ಮತ್ತು ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲರೂ ಹಗೆಮಾಡುವರು (ಮತ್ತಾಯ 10:21, 22).

> ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು (ಮತ್ತಾಯ 5:34).

ಅಪೊಸ್ತಲನಾದ ಪೌಲನು ಇದೇ ರೀತಿಯಲ್ಲಿ ಯೋಚಿಸಿದನು. ಆತನು ಹೊಸದಾಗಿ ಕ್ರೈಸ್ತರಾದವರಿಗೆ ಹೀಗೆ ಹೇಳಿದನು, "ನಾವು ಬಹುಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಪ್ರವೇಶಿಸಬೇಕು" (ಅಪೊಸ್ತಲರ ಕೃತ್ಯಗಳು 14:22). ಅಲ್ಲದೆ ಆತನು ಹೀಗೆ ಸಹ ಬರೆದನು, "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗಬೇಕು" (2 ತಿಮೊಥೆ 3:12). ಯೇಸುವಿನ ಹಿಂಬಾಲಕರಿಗಾಗುವ ಹಿಂಸೆಯ ಕುರಿತು ಬೈಬಲ್ ಬಹಳಷ್ಟನ್ನು ತಿಳಿಸುವದಾಗಿರುವದರಿಂದ ಅಪೊಸ್ತಲನಾದ ಪೇತ್ರನು ಹೀಗೆ ಬರೆಯುವದಕ್ಕೆ ಶಕ್ತನಾದವು, "ಪ್ರಿಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ *ಆಶ್ಚರ್ಯಪಡಬೇಡಿರಿ*; ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ" (1 ಪೇತ್ರ 4:12; ಒತ್ತಿ ಹೇಳಿದ್ದು ನನ್ನದು).

ಪ್ರಕಟನೆ ಪುಸ್ತಕದ ಮುಖ್ಯಭಾಗವನ್ನು ಅಶುಭಕರವಾದ ನಾಲ್ಕು ಕುದುರೆ ಸವಾರರ ದರ್ಶನದೊಂದಿಗೆ ಆರಂಭಿಸುವದಕ್ಕೆ ಒಂದು ಸಂಭಾವ್ಯ ಕಾರಣವು ಏನೆಂದರೆ ಮೊದಲ ಶತಮಾನದ ಕ್ರೈಸ್ತರಿಗೆ ಮುಂದೆ "ಬರಲಿದ್ದ ಅಗ್ನಿ ಪರೀಕ್ಷೆ"ಯ ವಿಷಯವಾಗಿ "ಯಾವ ಆಶ್ಚರ್ಯಗಳು" ಸಹ ಉಂಟಾಗದಿರಲಿ ಎಂಬುದೆ. ನಾವು ನಮ್ಮನ್ನು ಯೇಸುವಿಗೆ ಸಮರ್ಪಿಸಿಕೊಳ್ಳುವಾಗ ಏನೇನು ಅದರಲ್ಲಿ ಅಡಕವಾಗಿರುತ್ತದೆಂಬುದನ್ನು *ಈಗಲೂ* ನಾವು ಅರ್ಥಮಾಡಿಕೊಳ್ಳುವ ಅಗತ್ಯವಿದೆ.

ಸಮಸ್ಯೆಗಳ ವಿಷಯದಲ್ಲಿ, ಪ್ರಕಟನೆ ಪುಸ್ತಕವನ್ನು ಓದುವ ಕ್ರೈಸ್ತನಿಗೆ "ಯಾವ ಆಶ್ಚರ್ಯಗಳೂ" ಇರುವದಿಲ್ಲ. ಮೊದಲ ನಾಲ್ಕು ಮುದ್ರೆಗಳು ನಮಗೆ ತೊಂದರೆಯು ಅನಿವಾರ್ಯವಾಗಿರುತ್ತದೆ. ದುರಾಶೆ, ಯುದ್ಧ, ಆರ್ಥಿಕ ಸಂಕಷ್ಟ, ಮತ್ತು ಮರಣಗಳು ಜೀವನದ ದೃಶ್ಯಾವಳಿಯ ಭಾಗವಾಗಿರುತ್ತವೆ, ಪಾಪದಿಂದ ಕಲ್ಮಶಗೊಂಡಿರುವ ಲೋಕದ ಕರಾಳ ಭಾಗವಾಗಿರುತ್ತದೆ. ಈ ವಾಸ್ತವಾಂಶದ ಅರ್ಥವು ಕ್ರೈಸ್ತರು ಹತಾಶರಾಗಬೇಕೆಂಬ ಎಂದಾಗಿರುವದಿಲ್ಲ. "ದೇವರು ನಮ್ಮ ಕಡೆಗೆ ಇದ್ದರೆ . . . ನಾವು ಹೇಗೆ ಸೋತು ಹೋಗಲು ಸಾಧ್ಯ?" (ರೋಮಾ 8:31).[33]

2ನೇ ವಿಶ್ವ ಯುದ್ಧದ ಕರಾಳ ದಿನಗಳ ವೇಳೆಯಲ್ಲಿ, Winston Churchillನು Harrow ಶಾಲೆಯಲ್ಲಿ ವ್ಯಾಸಂಗ ಮುಗಿಸಿದ ವಿದ್ಯಾರ್ಥಿಗಳ ಕಾರ್ಯಕ್ರಮದಲ್ಲಿ ಭಾಷಣ ಮಾಡಿದನು, ಅದು ಇಂಗ್ಲೆಂಡಿನ Middlesexನಲ್ಲಿರುವ Harrow ಎಂಬ ಊರಿನಲ್ಲಿರುವ ಖಾಸಗಿ ಬಾಲಕರ ಶಾಲೆ. ಆತನ ಭಾಷಣದಲ್ಲಿನ ಈ ಮಾತುಗಳು ಇಂದಿಗೂ ಜೀವಿಸುತ್ತವೆ: "ಎಂದಿಗೂ ಸೋಲದಿರು, ಎಂದಿಗೂ, ಎಂದಿಗೂ, ಎಂದಿಗೂ, ಎಂದಿಗೂ - ಚಿಕ್ಕದಿರಲಿ ಅಥವಾ ದೊಡ್ಡದಿರಲಿ, ಬೃಹತ್ತಾಗಿರಲಿ ಅಥವಾ ಕ್ಷುಲ್ಲಕವಾಗಿರಲಿ, ಯಾವುದರಲ್ಲಿಯೂ - ಎಂದಿಗೂ ಸೋತು ಹೋಗದಿರು."[34] ಸೈತಾನನೊಂದಿಗಿನ ನಮ್ಮ ಯುದ್ಧದಲ್ಲಿ, ಬೈಬಲ್ ಸಹ ಹೀಗೆ ಹೇಳುತ್ತದೆ, "ಸ್ಥಿರಚಿತ್ತನಾಗಿರು, ಧೈರ್ಯದಿಂದಿರು. ಅಂಜಬೇಡ, ಕಳವಳಗೊಳ್ಳಬೇಡ. ನೀನು ಹೋಗುವಲ್ಲೆಲ್ಲಾ ನಿನ್ನ ದೇವರಾದ ಯೆಹೋವನು ನಿನ್ನ ಸಂಗಡ ಇರುತ್ತಾನೆ" (ಯೆಹೋಶುವ 1:9).

## ಇಂದು ನಾಲ್ಕು ಕುದುರೆ ಸವಾರರು (6:1-8)

ಭಯಾನಕರಾದ ನಾಲ್ಕು ಕುದುರೆ ಸವಾರರು ಕೇವಲ ಮೊದಲನೆಯ, ಎರಡನೆಯ, ಮತ್ತು ಮೂರನೆಯ ಶತಮಾನಗಳಲ್ಲಿ ಮಾತ್ರವೇ ಸವಾರಿ ಮಾಡಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಿರಿ. ಪಾಪವು ಲೋಕವನ್ನು ಪ್ರವೇಶಿಸಿದಂದಿನಿಂದಲೇ ಆ ನಾಲ್ವರು ತಮ್ಮ ಓಟವನ್ನು ಆರಂಭಿಸಿದರು (ಆದಿಕಾಂಡ 3), ಮತ್ತು ಅವರು ಮಾನವರನ್ನು ಅನೇಕ ಯುಗಗಳಿಂದಲೂ ನಿರಂತರವಾಗಿ ಬಾಧಿಸಿದ್ದಾರೆ. ಪ್ರಕಟನೆ 6:1-8ರ ವಾಕ್ಯಭಾಗವು "ಇತಿಹಾಸದಲ್ಲಿನ ಬಾಧೆಯ ವೈಭವಿಕರಿಸಿದ ದೃಶ್ಯ" ಎಂದು ಕರೆಯಲ್ಪಟ್ಟಿದೆ. John Bowmanನು ಹೇಳಿದ್ದೇನೆಂದರೆ ಮೊದಲ ನಾಲ್ಕು ದೃಶ್ಯಗಳು "ನಿರಾಶದಾಯಕ ಕಥೆಯನ್ನು ಹೇಳುತ್ತವೆ; ಅದು ಸಂಸ್ಕೃತಿಗಳು ಮತ್ತು ನಾಗರೀಕತೆಗಳ ಏಳು ಮತ್ತು ಬೀಳುಗಳು ಕಂಪನಗೊಳ್ಳುವ ಕಾಲಚಕ್ರವಾಗಿರುತ್ತದೆ."[35] Eugene Petersonನು ಮನುಷ್ಯನು ಮನುಷ್ಯನಿಗೆ ತೋರುವ ಅಮಾನವಿಕತೆಯ ಫಲಿತವಾಗಿ ಉಂಟಾಗುವ ದುಷ್ಟತ್ವಕ್ಕೆ ಕುದುರೆ ಸವಾರರು ಮಾದರಿಯಾಗುತ್ತಾರೆ:

ಯುದ್ಧವು ಸಾಮಾಜಿಕ ದುಷ್ಟತನವಾಗಿದೆ; ಕ್ಷಾಮವು ಪರಿಸರಾತ್ಮಕ ದುಷ್ಟತ್ವವಾಗಿದೆ;

> ಅನಾರೋಗ್ಯವು ಜೈವಿಕ ದುಷ್ಟತ್ವವಾಗಿದೆ. ಯುದ್ಧವು ಸಮುದಾಯದ ಒಳ್ಳೇತನದ ಮೇಲೆ ಆಕ್ರಮಣ ಮಾಡುತ್ತದೆ; ಕ್ಷಾಮವು ದೇವರ ಕೊಡುಗೈತನವನ್ನು ಭಂಗಪಡಿಸುತ್ತದೆ ಮತ್ತು ಧ್ವಂಸಗೊಳಿಸುತ್ತದೆ; ಅನಾರೋಗ್ಯವು ದೇವರಿಂದ ಕೊಡಲ್ಪಟ್ಟ ದೇಹಗಳನ್ನು ನಾಶಗೊಳಿಸುತ್ತದೆ ಮತ್ತು ವ್ಯರ್ಥಗೊಳಿಸುತ್ತದೆ: ಸಮಾಜದ ವಿರುದ್ಧ ಪಾಪಗಳು, ದೇಶದ ವಿರುದ್ಧ ಪಾಪಗಳು, ದೇಹದ ವಿರುದ್ಧ ಪಾಪಗಳು.[36]

ಕೆಲವರು ಹೀಗೆ ಆಕ್ಷೇಪಣೆಯನ್ನು ಮಾಡುವರು: "ನಿಶ್ಚಯವಾಗಿಯೂ, ನಾಲ್ಕು ಸವಾರರು ಗತಕಾಲದೊಳಗೆ ಒಂದು ಹಂತದಲ್ಲಿ ತಮ್ಮ ಕುದುರೆಗಳನ್ನು ಕಟ್ಟಿ ಹಾಕಿರುತ್ತಾರೆ. ಅವರು ಜ್ಞಾನಪ್ರಕಾಶಗೊಂಡಿರುವ ನಮ್ಮ ಯುಗದಲ್ಲಿ ಈಗಲೂ ಸವಾರಿ ಮಾಡುತ್ತಿಲ್ಲ, ಮಾಡುತ್ತಿರುವರೋ?" ಆದರೆ ಪುರಾವೆಯನ್ನು ನೋಡುವದಾದರೆ ಒಂದು ಘಂಟಾಘೋಷದ ಉತ್ತರವು ಅಗತ್ಯವೆನ್ನುತ್ತದೆ: "ಹೌದು, ಅವರು ಈಗಲೂ ಸವಾರಿ ಮಾಡುತ್ತಿದ್ದಾರೆ!" Burton Coffmanನು ಹೀಗೆ ವ್ಯಾಖ್ಯಾನಿಸಿದನು: "ಈ ವಿನಾಶಕಾರಿ ಕುದುರೆ ಸವಾರರು . . . ಈಗ ಸದ್ಯ ಪ್ರಪಂಚದಾದ್ಯಂತವೂ ಏನು ಮಾಡುತ್ತಿದ್ದಾರೆ ಎಂಬುದನ್ನು ಪ್ರತಿ ಮುಂಜಾನೆಯ ಸುದ್ದಿ ಪತ್ರಿಕೆಗಳು ವರದಿಗಳನ್ನು ಒದಗಿಸುತ್ತವೆ."[37]

ನಾಲ್ಕು ಕುದುರೆ ಸವಾರರು ಯಾವಾಗಲೂ ಭೂಮಿಯ ಮೇಲೆ ಸಂಚರಿಸುತ್ತಿದ್ದರು, ಮತ್ತು ಮುಂದೆಯೂ ಇರುವರು ಎಂಬುದಕ್ಕೆ ಪುರಾವೆಯು ಅಗತ್ಯವಿರುವದಾದರೆ, ಈ ಕೆಳಗಿನದನ್ನು ಪರಿಗಣಿಸಿರಿ:

*ಬಿಳಿ ಕುದುರೆಯ ಮೇಲಿನ ಸವಾರನು.* ತಮ್ಮ ಚಿತ್ತವನ್ನು ಬೇರೆಯವರ ಮೇಲೆ ಒತ್ತಾಯದಿಂದ ಹಾಕುವದಕ್ಕೆ ಪ್ರಯತ್ನಿಸುವ ಯಾವದೇ ವ್ಯಕ್ತಿ ಅಥವಾ ಗುಂಪೇ ಆ ಮೊದಲನೆಯ ಸವಾರ. ಕಾಯಿನನಿಂದ ಆರಂಭಗೊಂಡು, ಬೇರೆಯವರಿಗೆ ಸೇರಿದ್ದನ್ನು ಜನರು ಆಶಿಸುತ್ತಲೇ ಬಂದಿದ್ದಾರೆ - ಮತ್ತು ಅದನ್ನು ತಮ್ಮದಾಗಿಸಿಕೊಳ್ಳಲು ಏನು ಬೇಕಾದರೂ ಮಾಡುವದಕ್ಕೆ ಹಿಂಜರಿದಿಲ್ಲ.

> ಭಿಕ್ಷುಕನೊಬ್ಬನು ಒಬ್ಬ ಲಕ್ಷಾಧಿಪತಿಗೆ ಹೀಗೆ ಕೇಳಿದನು,
> "ನಿನಗೆ ನಿಜವಾಗಿಯೂ ಸಂತೋಷವನ್ನುಂಟು ಮಾಡುವದಕ್ಕೆ ಇನ್ನೆಷ್ಟು ಡಾಲರ್‌ಗಳ ಅಗತ್ಯವಿರುತ್ತದೆ?"
>
> ಲಕ್ಷಾಧಿಪತಿಯು,
> ತನ್ನ ಒರಟೊರಟಾದ ಕೈಯನ್ನು ಭಿಕ್ಷುಕ ತಟ್ಟೆಯೊಳಗೆ ಹಾಕುತ್ತಾ, "ಇನ್ನು ಒಂದೇ ಒಂದು!"
> ಎಂದು ಉತ್ತರಿಸಿದನು.[38]

ಲೋಭಿಯಾದ ಭೂಒಡೆಯನು ಹೇಳುತ್ತಾನೆ, "ನನಗೆ ಪ್ರಪಂಚದಲ್ಲಿರುವ ಭೂಮಿಯೆಲ್ಲಾ ಬೇಕಾಗಿಲ್ಲ; ನನಗೆ ಕೇವಲ *ನನ್ನ ಭೂಮಿಗೆ ಪಕ್ಕದಲ್ಲಿರುವ ಜಾಗವಷ್ಟೇ ಬೇಕು.*"

ಬಿಳಿ ಕುದುರೆಯ ಮೇಲಿನ ಸವಾರನು ಸಂಬಂಧಗಳ ಸಕಲ ಹಂತಗಳಲ್ಲಿಯೂ ಕಾರ್ಯ ಮಾಡುತ್ತಾನೆ: ವೈಯಕ್ತಿಕ, ರಾಷ್ಟ್ರೀಯ, ಮತ್ತು ಅಂತರ್‌ರಾಷ್ಟ್ರೀಯ. ನೀವು ಆತನನ್ನು "ವಿಜಯ," "ಸಾಮ್ರಾಜ್ಯಶಾಹಿ," "ದುರಾಶೆ," ಅಥವಾ "ಲಂಗುಲಗಾಮಿಲ್ಲದ ತಾಂಡವವಾಡುತ್ತಿರುವ ಸ್ವಾರ್ಥ" ಹೀಗೆ ಯಾವ ಹೆಸರಿನಿಂದ ಕರೆದರೂ ಸರಿಯೇ, ಆತನು ನಮ್ಮ ಲೋಕದುದ್ದಕ್ಕೂ ದೌಡಾಯಿಸುವದನ್ನು ಮುಂದುವರೆಸುತ್ತಾನೆ - ಮತ್ತು ವಿನಾಶವು ಯಾವ ಮಾರ್ಪಾಡಿಲ್ಲದೆ ಹಿಂಬಾಲಿಸುತ್ತದೆ.

*ಕೆಂಪು ಕುದುರೆಯ ಮೇಲಿನ ಸವಾರನು.* ಪಾಪ-ಪೀಡಿತ ಲೋಕದಲ್ಲಿ "ಯುದ್ಧಗಳು ಮತ್ತು

ಯುದ್ಧಗಳಾಗುವವು ಎಂಬ ಸುದ್ದಿಗಳು" ಯಾವಾಗಲೂ ಇದ್ದೇ ಇದ್ದವು. Albert Einsteinನು ಈ ವಿಷಾದನೀಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ: "ಮಹಾ ಶಕ್ತಿಯನ್ನು ಹೊಂದಿರುವ ಸಾರ್ವಭೌಮ ದೇಶಗಳಿರುವ ತನಕವೂ, ಯುದ್ಧ ಎಂಬುದು ಅನಿವಾರ್ಯವಾಗಿರುತ್ತದೆ."[39] ಯುದ್ಧವನ್ನು ವೈಭವೀಕರಿಸುವ ಪ್ರಯತ್ನಗಳು ನಡೆದಿರುತ್ತವೆ, ಆದರೆ 1880ರಲ್ಲಿ ಮಾತಾಡಲಾಗಿರುವ ಸಿವಿಲ್ ವಾರ್ ಯುನಿಯನ್ ಸೇನಾಧಿಪತಿ William Tecumseh Shermanನ ಮಾತುಗಳು ಈಗಲೂ ಸತ್ಯವಾಗಿ ಮೊಳಗುತ್ತವೆ: "ನನಗೆ ಯುದ್ಧವನ್ನು ಮಾಡಿ ಬಳಲಿಕೆಯಾಗಿರುತ್ತದೆ ಮತ್ತು ವಾಕರಿಕೆ ಬರುತ್ತದೆ . . . ಎಂದಿಗೂ ಒಂದು ಗುಂಡನ್ನಾದರೂ ಹಾರಿಸದವರು ಅಥವಾ ಗಾಯಗೊಂಡವರ ಕೀರಲು ಧ್ವನಿಯನ್ನಾಗಲಿ ನರಳಾಟವನ್ನಾಗಲಿ ಎಂದಿಗೂ ಕೇಳಿಸಿಕೊಂಡಿರದವರು ಮಾತ್ರವೇ ಹೆಚ್ಚು ರಕ್ತವನ್ನು ಸುರಿಸುವಂತೆ, ಸೇಡು ತೀರಿಸಿಕೊಳ್ಳಬೇಕೆಂದು, ಹೆಚ್ಚು ನಾಶನಕ್ಕಾಗಿ ಗಟ್ಟಿಯಾದ ಶಬ್ದದಿಂದ ಕೂಗುವವರಾಗಿದ್ದಾರೆ."[40] ಯಾವನೇ ಆಗಲಿ ಯುದ್ಧದಲ್ಲಿ ಸತ್ತವರ ಸಮಾಧಿಗಳಿರುವ ಜಾಗಕ್ಕೆ ಹೋಗಿ ಅಲ್ಲಿ ಬಾನೆತ್ತರಕ್ಕೆ ಕಾಣುವ ಸಮಾಧಿಗಳ ಸಾಲು ನೋಡಿದರೆ, ಅಥವಾ ಛಿದ್ರಗೊಂಡಿರುವ ದೇಹಗಳ, ಮನಸ್ಸುಗಳ, ಮತ್ತು ಜೀವಿತಗಳ ಮೇಲಾಗಿರುವ ಯುದ್ಧದ ಕರಾಳ ಛಾಯೆಯನ್ನು ನೋಡುವದಾದರೆ, ಅಥವಾ ಯುದ್ಧದಲ್ಲಿ ಸತ್ತವರ ಸಂಬಂಧಿಗಳ ಜುಮ್ಮೆನ್ನಿಸುವ ವೇದನೆಯನ್ನು ಅನುಭವಿಸಿರುವದಾದರೆ ಯುದ್ಧದ ಪರಿಣಾಮಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಎರಡನೆಯ ಕುದುರೆ ಸವಾರನು ಈಗಲೂ ಸವಾರಿ ಮಾಡುತ್ತಾನೆ - ಮತ್ತು ತನ್ನ ಕುದುರೆಯನ್ನು, ಒಂದು ದಿನಕ್ಕಾದರೂ ಕಟ್ಟಿ ಹಾಕುವದಕ್ಕೆ ನಿರಾಕರಿಸುತ್ತಾನೆ.

*ಕಂದು ಬಣ್ಣದ ಕುದುರೆಯ ಸವಾರನು.* ಯಾವದೇ ಕುದುರೆ ಸವಾರನು ಬಹಳ ಕಾಲದ ಹಿಂದೆ ನಿವೃತ್ತನಾಗಿರಬೇಕಾಗಿದ್ದಲ್ಲಿ, ಅದು ಕಂದು ಬಣ್ಣದ ಕುದುರೆಯ ಸವಾರನೇ: ಆರ್ಥಿಕ ಸಂಕಷ್ಟ. ಕೃಷಿ ತಂತ್ರಜ್ಞಾನವು ನಿರಂತರವಾಗಿ ಉತ್ತಮಗೊಳ್ಳುತ್ತಲೇ ಇದೆ; ಒಬ್ಬ ಮನುಷ್ಯನು ಸಾವಿರಾರು ಜನರಿಗೆ ಉಣ್ಣುವದಕ್ಕಾಗುವಷ್ಟು ಬೆಳೆಯನ್ನು ಬೆಳೆಯುತ್ತಿದ್ದಾನೆ. ಹಾಗಿದ್ದರೂ, ಪ್ರಪಂಚದ ಜನಸಂಖ್ಯೆಯಲ್ಲಿ ಶೇಕಡಾ 70ರಷ್ಟು ಜನರು ಪ್ರತಿ ರಾತ್ರಿಯೂ ಊಟವಿಲ್ಲದೆ ಮಲಗುತ್ತಿದ್ದಾರೆ ಎಂಬುದು ಈಗಲೂ ಸತ್ಯವೇ ಆಗಿದೆ. ಹಾತೋರೆಯುವ ಪುರುಷರು ಹಾಗೂ ಸ್ತ್ರೀಯರು ತಮ್ಮ ಹಸಿವೆಯನ್ನು ತಣಿಸಿಕೊಳ್ಳುವದಕ್ಕಾಗಿ ಕಸದ ರಾಶಿಯಲ್ಲಿಯೇ ಬೇರೂರಿ ಕುಳಿತುಕೊಂಡು ಉಳಿದು ಚೆಲ್ಲಿದ ಆಹಾರದ ಕೆಲವು ತುಂಡುಗಳಿಗಾಗಿ ಹುಡುಕಾಡುವಂಥ - ಅಥವಾ ಬಡಕಲು ಅಂಗಾಂಗಗಳು ಹಾಗೂ ಉಬ್ಬಿದ ಹೊಟ್ಟೆಯುಳ್ಳ ಹಸಿವೆಯಿಂದ ಬಳಲುವ ಮಕ್ಕಳ ಚಿತ್ರಗಳನ್ನು ಟಿವಿಗಳಲ್ಲಿ ತೋರಿಸುತ್ತಿರುತ್ತಾರೆ.

*ಬೂದಿಬಣ್ಣದ ಕುದುರೆಯ ಸವಾರನು.* ಮೃತ್ಯು ಮತ್ತು ಪಾತಾಳಗಳು "ಕತ್ತಿಯಿಂದಲೂ ಬರದಿಂದಲೂ ಅಂಟುರೋಗದಿಂದಲೂ ಕಾಡುಮೃಗಗಳಿಂದಲೂ ಕೊಲ್ಲುವದನ್ನು" ಮುಂದುವರೆಸಿರುತ್ತವೋ (ವ. 8)?

ಕತ್ತಿಯು ಎಂದಿಗೂ ಒರೆಯಲ್ಲಿ ಹಾಕಲ್ಪಟ್ಟಿರುವದಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಗತಕಾಲದಿಂದ ಮತ್ತು ಈಗಿನ ಕಾಲದಿಂದ ಅದಕ್ಕೆ ಸಾಕಷ್ಟು ದಾರಾಳವಾದ ಉದಾಹರಣೆಗಳಿರುತ್ತವೆ: ಹೊಲೊಕೊಸ್ಟ್ (ಯೆಹೂದಿ ಹತ್ಯಾಕಾಂಡ) ನಲ್ಲಿ ಲಕ್ಷಾಂತರ ಯೆಹೂದಿಗಳು ಕೊಲ್ಲಲ್ಪಟ್ಟರು; ಹೀರೊಶೀಮಾದಲ್ಲಿ ಪುರುಷರು, ಸ್ತ್ರೀಯರು, ಬಾಲಕರು, ಹಾಗೂ ಹುಡುಗಿಯರು ಅಣುವಿನ ಬಿರುಗಾಳಿಯಲ್ಲಿ ಕರಗಿ ಮಾಯೆಯಾದರು; ಈ ದಿನವೂ ಯುದ್ಧ-ಪೀಡಿತ ಪಟ್ಟಣಗಳಲ್ಲಿ ಛಿದ್ರಗೊಂಡಿರುವ ದೇಹಗಳು ಬಿದ್ದುಕೊಂಡಿರುತ್ತವೆ. ಇನ್ನೂ ಸಮೀಪಕ್ಕೆ ಬರುವದಾದರೆ, ಜೀವಕ್ಕಿಂತಲೂ ಅಮೂಲ್ಯವಾದ ಪ್ರಿಯರೊಬ್ಬರನ್ನು ಸಮಾಧಿಯಲ್ಲಿ

ಹೂತಿಡದವರು ಯಾರಿದ್ದಾರೆ?

ಈ ಮರಣಾಂತಿಕ ಜೋಡಿಗಳಿಂದ ಕ್ಷಾಮವು ಈಗಲೂ ಬಳಸಲ್ಪಡುತ್ತಿದೆ. ಯುದ್ಧದಿಂದಾದ ಕ್ಷಾಮವು 1943ರಲ್ಲಿ ಚೀನಾ ದೇಶದೊಳಗೆ ಲಕ್ಷ ಜನರ ಮರಣದಲ್ಲಿ ಫಲಿತಗೊಂಡಿರುತ್ತದೆ ಮತ್ತು 1970ರ ನಂತರದ ಭಾಗದಲ್ಲಿ ಹೇಳಲಾರದಷ್ಟು ಬಾಧೆಯನ್ನು ಕಾಂಬೋಡಿಯ ದೇಶದಲ್ಲಿ ಉಂಟು ಮಾಡಿರುತ್ತದೆ. ಮಳೆಯಿಲ್ಲದೆ ಆಗುವ ಕ್ಷಾಮವು ಈ ಕ್ಷಣದ ವರೆಗೂ ಕೊಲ್ಲುತ್ತಲೇ ಇದೆ.

ಮರಣದ ಬತ್ತಳಿಕೆಯಲ್ಲಿ ಅಂಟುರೋಗವು ಯಾವಾಗಲೂ ಒಂದು ವಿನಾಶಕಾರಿ ಆಯುಧವಾಗಿರುತ್ತದೆ. Black Death (ಗೆಡ್ಡೆ ಪ್ಲೇಗು) ಆರನೆಯ ಶತಮಾನದೊಳಗೆ ಮಧ್ಯಪ್ರಾಚ್ಯದಲ್ಲಿ, ಯುರೋಪ್, ಮತ್ತು ಏಶಿಯ ದೇಶಗಳಲ್ಲಿ ಒಂದು ನೂರು ಮಿಲಿಯನ್ ಜನರನ್ನು ಕೊಂದಿರುತ್ತದೆ, ಮತ್ತು ಹದಿನಾಲ್ಕನೆಯ ಶತಮಾನದಲ್ಲಿ ಯುರೋಪಿನ ಎಪ್ಪತ್ತೈದು ಮಿಲಿಯನ್ ಜನರನ್ನು ಕೊಂದಿರುತ್ತದೆ.[41] Influenza (ತೀವ್ರ ಸಾಂಕ್ರಾಮಿಕ ರೋಗ) 1918-19ರಲ್ಲಿ ಇಪ್ಪತ್ತೊಂದು ಮಿಲಿಯನ್ ಜನರನ್ನು ಕೊಂದಿರುತ್ತದೆ.[42] ಬಹಳಷ್ಟು ಜನರಿಗೆ ಇಂದಿನ ಏಡ್ಸ್ ಅಂಟುರೋಗದ ಕುರಿತು ತಿಳುವಳಿಕೆಯು ಇರುತ್ತದೆ.

"ಕಾಡುಮೃಗಗಳು" ಕುರಿತ ವಿಷಯವೇನು? ಅಮೆರಿಕದಲ್ಲಿ ಬಹುಪಾಲು ಕಾಡುಮೃಗಗಳು ಪ್ರಾಣಿ ಸಂಗ್ರಹಾಲಯಗಳಲ್ಲಿರುತ್ತವೆ. ಹಾಗಾದರೆ ಮರಣವು ತನ್ನ ಬತ್ತಳಿಕೆಯಲ್ಲಿ ಬಳಸುವದಕ್ಕೆ ಕೆಲವೇ ಕೆಲವು "ಕಾಡುಮೃಗಗಳ" ನ್ನು ಹೊಂದಿರುತ್ತದೋ? ಅಥವಾ ಪ್ರಾಣಿ ಸಾಮ್ರಾಜ್ಯದಲ್ಲಿ ಮೃಗಗಳ ಸ್ಥಾನದಲ್ಲಿ ಈಗ ಅವುಗಳಿಗಿಂದಲೂ ಹೆಚ್ಚು ಮರಣಾಂತಿಕವಾದ, "ಕಾಡುಮೃಗಗಳು" - ಭಯೋತ್ಪಾದಕರು, ವಕ್ರಗೊಂಡಿರುವ ಮನುಷ್ಯರು, ಕೊಲೆಗಾರರು, ಮತ್ತು ಅತ್ಯಾಚಾರಿಗಳು - ತೆಗೆದುಕೊಂಡಿರುತ್ತಾರೋ?

ನಾಲ್ಕನೆಯ ಕುದುರೆ ಸವಾರನು ಸಂಚರಿಸುವದನ್ನು ಮುಂದುವರೆಸಿರುವದಿಲ್ಲ ಎಂಬದಾಗಿ ಯಾರು ವಾದಿಸುವರು? ಆತನಿಂದ ಯಾರೊಬ್ಬನೂ ದೂರವಿರುವದಕ್ಕೆ ಸಾಧ್ಯವಿಲ್ಲ. ಒಬ್ಬನು ಮೊದಲ ಮೂರು ಸವಾರರ ದಾರಿಯಲ್ಲಿ ಕಾಣಿಸಿಕೊಳ್ಳದಂತೆ ದೂರವಿರುವದಕ್ಕೆ ಶಕ್ತರಾದಾಗ್ಯೂ, ಬೂದಿಬಣ್ಣದ (ಮಂಕು ಬಣ್ಣದ) ಕುದುರೆ ಸವಾರನಿಂದ ತಪ್ಪಿಸಿಕೊಳ್ಳುವದಕ್ಕೆ ಯಾವನಿಂದಲೂ ಸಾಧ್ಯವಿಲ್ಲ (ಇಬ್ರಿಯ 9:27).

ಖಂಡಿತವಾಗಿಯೂ, ನಾಲ್ಕು ಕುದುರೆ ಸವಾರರು ಈಗಲೂ ಸವಾರಿ ಮಾಡುತ್ತಿದ್ದಾರೆ 1980ರ ಆರಂಭಿಕ ದಿನಗಳಲ್ಲಿ, Earl Palmerನು ಅವರು "ಕಾಲರಹಿತ ಭೀತಿಗಳು" ಆಗಿದ್ದಾರೆ ಎಂಬ ಮುಕ್ತಾಯಕ್ಕೆ ಬಂದನು, ಮತ್ತು ಅವರು ಕಾರ್ಯಮಾಡುವ ವಿಧಾನವಷ್ಟೇ ಬದಲಾಗಿರುವ ಏಕೈಕ ಸಂಗತಿಯಾಗಿದೆ:

> ಮೊದಲ ಶತಮಾನದಲ್ಲಿ ತನ್ನ ಬಲಿಪಶುಗಳನ್ನು ಬೇಟೆಯಾಡಿದ ಬಿಲ್ಲುಗಾರನು ಈ ಶತಮಾನದಲ್ಲಿ ಒಂದು ಖಂಡದಿಂದ ಮತ್ತೊಂದು ಖಂಡವನ್ನು ತಲುವಂಥ ಬೀರುಗುಂಡಿನ ಕ್ಷಿಪಣಿಗಳನ್ನು ಸಿಡಿಸುತ್ತಾನೆ. ಯುದ್ಧದ ರಥಗಳ ಸವಾರನು ಅತಿ ವೇಗದ ಯುದ್ಧ ಟ್ಯಾಂಕರ್‌ಗಳು, ಹೆಲಿಕಾಪ್ಟರ್‌ಗಳು, ಮತ್ತು ಬೀದಿಯಲ್ಲಿ ಹಠಾತ್ತಾಗಿ ಭಯೋತ್ಪಾದಕ ದಾಳಿಗಳನ್ನು ಮಾಡುವ ಮೂಲಕ ಇಪ್ಪತ್ತನೆಯ ಶತಮಾನಕ್ಕೆ ಅಂತ್ಯದ [ದಿನಗಳ] ಭೀತಿಯನ್ನುಂಟು ಮಾಡುತ್ತಾನೆ. ಕ್ಷಾಮ ಮತ್ತು ಮೃತ್ಯುಗಳು ಮಾತ್ರವೇ ಯಥಾಃರೀತಿಯಲ್ಲಿರುತ್ತವೆ. [ಕೃಷಿ ಪ್ರಧಾನವಾಗಿದ್ದ] ಮೊದಲ ಶತಮಾನದ ಹಸಿವೆಯಿಂದ ಬಳಲುವ ಮಗುವು ಉದ್ಯಮೀಕರಣಗೊಳಿಸಲ್ಪಟ್ಟಿರುವ ಇಪ್ಪತ್ತನೆಯ ಶತಮಾನದ ಮಗುವಿನಂತೆಯೇ ಕಾಣಿಸುತ್ತಾನೆ.[43]

ಒಂದು ಪ್ರಶ್ನೆಯು ಉದ್ಭವಿಸುತ್ತದೆ - ಯೋಹಾನನ ದಿನದಲ್ಲಿ ಸಹ ಖಂಡಿತವಾಗಿಯೂ ಉದ್ಭವವಾಗಿರಬಹುದಾದ ಪ್ರಶ್ನೆ: *"ದೇವರು ಏಕೆ ಅವರನ್ನು ಸವಾರಿ ಮಾಡುವಂತೆ ಅನುಮತಿಸುತ್ತಿದ್ದಾನೆ?"* ದೇವರು ಒಂದು ಉದ್ದೇಶವಿಲ್ಲದೆ ಏನನ್ನೂ ಮಾಡುವದಿಲ್ಲ. ನಾಲ್ಕು ಸವಾರರ ದರ್ಶನದಲ್ಲಿ ಕರ್ತನು ಏನನ್ನು ತಿಳಿಸುವದಕ್ಕೆ ಪ್ರಯತ್ನಿಸುತ್ತಿದ್ದನು?

ನಾವು ತಿಳಿದುಕೊಳ್ಳಬೇಕೆಂದ ದೇವರು ಬಯಸುವ ಒಂದು ಸತ್ಯವು ಏನೆಂದರೆ, ಈ ಲೋಕಕ್ಕೆ ಸಂಬಂಧ ಪಟ್ಟಂತೆ, ಭವಿಷ್ಯತ್ಕಾಲವು ಯಾವಾಗಲೂ ದುರಂತಗಳಿಂದ ತುಂಬಿರುವದು ಎಂಬುದೆ. Tommy Southನು ಹೀಗೆ ಬರೆದನು, "ಕೆಲವು ಜನರು ಯಾವಾಗಲೂ ಆದರ್ಶ ರಾಜ್ಯವನ್ನು, ಒಂದು 'ಭೂಮಿಯ ಮೇಲಿನ ಸ್ವರ್ಗ,' ಸಮಾಧಾನ ಮತ್ತು ಶಾಂತಿಯಿರುವ 'ಒಂದು ಸುವರ್ಣ ಯುಗ'" ವನ್ನು ಎದುರು ನೋಡುತ್ತಿರುತ್ತಾರೆ. ಅದು ಎಂದಿಗೂ ಸಾಧ್ಯವೇ ಇರುವದಿಲ್ಲ ಎಂಬುದನ್ನು ಮೊದಲ ನಾಲ್ಕು ಮುದ್ರೆಗಳು ಖಡಾಖಂಡಿತವಾಗಿ ತಿಳಿಸುತ್ತವೆ. ಪರಲೋಕವು *ಪರಲೋಕದಲ್ಲಿಯೇ* ಇರುವದು, ಮತ್ತು ಒಂದು ನಿಮಿಷವೂ ಮುಂದಿರುವದಿಲ್ಲ."[44]

ನಾವು ಒಂದು ಪಾಪಭರಿತ ಲೋಕದಲ್ಲಿ ಜೀವಿಸುತ್ತಿದ್ದೇವೆಂಬುದಕ್ಕೆ ನಮ್ಮ ಸುತ್ತಲಿರುವ ಸಮಸ್ಯೆಗಳೇ ಪುರಾವೆಯಾಗಿರುತ್ತವೆ. ಮೊದಲ ಪಾಪವು ಮುಳ್ಳುಗಳ ಮತ್ತು ಕಳೆಗಳ, ಮತ್ತು ಬೆವರು ಸುರಿಸುವ, ಮತ್ತು ಬಾಧೆಯ ಶಾಪವನ್ನು ಬರಮಾಡಿತ್ತು (ಆದಿಕಾಂಡ 3:16-19). ಮನುಷ್ಯನು ಎಡೆಬಿಡದೆ ಪಾಪಭರಿತತೆಯು ಭೂಮಿಯನ್ನು ನಿರಂತರವಾಗಿ ಅಂಟುರೋಗದಂತೆ ಹರಡಿಕೊಳ್ಳುತ್ತಲೇ ಇದೆ. Metzgerನು ಹೀಗೆ ಬರೆದನು:

> ದೇವರು ಕ್ಷಾಮ ಮತ್ತು ಮರಣ ಮತ್ತು ನರಕ ಇವುಗಳನ್ನು ಅನುಮೋದಿಸುವದಿಲ್ಲ, ಆದರೆ ಜನರು ದೇವರನ್ನು ವಿರೋಧಿಸುವ ಆಳ್ವಿಕೆಯೇ ಬೇಕೆಂದು ಪಟ್ಟು ಹಿಡಿಯುವದಾದರೆ ಅವುಗಳು ಬರಲೇ ಬೇಕಾಗುತ್ತದೆ . . . ಒಂದು ಬೆಟ್ಟದ ತುದಿಯಿಂದ ದಾಟಿ ಹೆಜ್ಜೆಯಿಡುವದಂತಹ ಭೌತಿಕ ನಿಯಮಗಳನ್ನು ನಿರ್ಲಕ್ಷ್ಯ ಮಾಡಿದರೆ ಮುಂದೆ ವಿನಾಶವು ಖಚಿತ. ನೈತಿಕ ನಿಯಮಗಳನ್ನು ನಿರ್ಲಕ್ಷ್ಯ ಮಾಡಿರಿ, ಆಗ ಅಷ್ಟೇ ಖಚಿತವಾಗಿ ವಿನಾಶವು ಅದರ ಬೆನ್ನಲ್ಲೇ ಬರುತ್ತದ . . . ಅದೋಗತಿಗಳು ಬರಬೇಕೆಂದು ದೇವರ ಚಿತ್ತವಲ್ಲ, ಆದರೆ ಎಲ್ಲಿಯ ತನಕ ನಾವು ಸ್ವತಂತ್ರ ಪ್ರತಿನಿಧಿಗಳಾಗಿರುತ್ತೇವೋ ಅಲ್ಲಿಯ ವರೆಗೆ ದೇವರು ಅವುಗಳನ್ನು ಅನುಮತಿಸುತ್ತಾನೆ.[45]

ಅಲ್ಲದೆ ನಾವು ನಂಬಿಗಸ್ತರಾಗಿದ್ದಾಗ್ಯೂ, ಜೀವನದಲ್ಲಿ ನಾವು ಆಗಲೂ ಸಂಕಷ್ಟಗಳನ್ನು ಎದುರಿಸತಕ್ಕದ್ದೆಂಬುದನ್ನು ತಿಳಿದುಕೊಳ್ಳಬೇಕೆಂದು ಸಹ ದೇವರು ಬಯಸುತ್ತಾನೆ. ಇಂದಿನ "ಆರೋಗ್ಯ-ಐಶ್ವರ್ಯ" ಪ್ರವಾದಿಗಳು ನಿಜವಾಗಿಯೂ ನಂಬಿಗಸ್ತರಾಗಿರುವವರಿಗೆ ಜೀವನದ ಸಮಸ್ಯೆಗಳಿಂದ ವಿನಾಯಿತಿ ಇರುತ್ತದೆಂದು ವಾದಿಸುತ್ತಾರೆ. ಅವರ ಶಿಷ್ಯರಿಗೆ ಪರಿಪೂರ್ಣವಾದ ಆರೋಗ್ಯ ಮತ್ತು ಆರ್ಥಿಕ ಭದ್ರತೆಯ ವಾಗ್ದಾನ ಮಾಡಲ್ಪಡುತ್ತದೆ. ಸಾಮಾನ್ಯವಾಗಿ, ಈ ರೀತಿಯ ಬೋಧಕರಿಗೆ ಶಿಷ್ಯರಾಗಿರಬೇಕಾದರೆ ಆರೋಗ್ಯಕರವಾದ ದೇಣಿಗೆಗಳನ್ನು ಕೊಡುವದು ಅಗತ್ಯವಾಗಿರುತ್ತದೆ. ಸಂಕಷ್ಟಗಳ ವಿಷಯದಲ್ಲಿ, ಅವರ ಸಂದೇಶವು "ಬಾಧೆಯನ್ನುವದೇ ಇಲ್ಲ" ಎಂದಾಗಿದ್ದರೆ, ಯೇಸುವಿನ ಸಂದೇಶವು "ಆಶ್ಚರ್ಯಗಳೇನೂ ಇಲ್ಲ" ಎಂಬುದಾಗಿತ್ತು. ಯೇಸುವು "ಬಹುಮಂದಿ ಸುಳ್ಳುಪ್ರವಾದಿಗಳು" ಎದ್ದು "ಅನೇಕರನ್ನು ಮೋಸಗೊಳಿಸುವರು" ಎಂಬುದರ ಕುರಿತು ಮಾತಾಡಿದನು (ಮತ್ತಾಯ 24:11). ಯೋಹಾನನು "ಅನೇಕ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವರು" ಎಂಬುದಾಗಿ ಹೇಳಿದನು (1 ಯೋಹಾನ 4:1). ಯೇಸು ಮತ್ತು ಯೋಹಾನ ಇಬ್ಬರು ಹೇಳಿದ್ದು ಸತ್ಯವೇ ಎಂಬುದಕ್ಕೆ

ವಿಶ್ವಾಸಿಗಳಿಗೆ ಯಾವ ಸಮಸ್ಯೆಗಳೇ ಇರುವದಿಲ್ಲ ಎಂದು ಹೇಳಿಕೊಳ್ಳುವವರು ಪುರಾವೆಯಾಗಿರುತ್ತಾರೆ. ಬೈಬಲ್ ನಮಗೆ ಬಾಧೆಯನ್ನನುಭವಿಸುತ್ತಿದ್ದ ನಂಬಿಗಸ್ತರಿಗೆ ಉದಾಹರಣೆಯಾಗಿ ಯೋಬನ ಮತ್ತು ಊಟದ ತುಂಡುಗಳಿಗಾಗಿ ಹೋರಾಡುತ್ತಿದ್ದ ಲಾಜರನು ಹಾಗೂ ಇನ್ನು ನೂರಾರು ಜನರ ಕುರಿತು ತಿಳಿಸುತ್ತದೆ.

> ಸತ್ಯವು ಏನೆಂದರೆ, ಕ್ರೈಸ್ತರು ದೀಕ್ಷಾಸ್ನಾನದ ಆತ್ಮೀಕ ಜಲಸಮಾಧಿಯೊಳಗಿಂದ ಶಾರೀರಿಕ ಶಾಂತಿ ಹಾಗೂ ಐಶ್ವರ್ಯಭರಿತವಾದ ಒಂದು ಪರಿಪೂರ್ಣವಾದ ಲೋಕದೊಳಗೆ ಬರುವದಿಲ್ಲ. ಶಾರೀರಿಕ ಜೀವಿಗಳಾಗಿ, ನಾವು ದೈನಂದಿನ ಸಕಲ ಆಘಾತಗಳನ್ನು, ಗಂಡಾಂತರೊಡ್ಡುವ ಪ್ರಪಂಚ ಘಟನೆಗಳನ್ನು, ವ್ಯಾಧಿಗಳನ್ನು, ಮತ್ತು ಉಳಿದ ಮಾನವರೆಲ್ಲರೂ ಎದುರಿಸಬೇಕಾಗಿರುವ ಮರಣವನ್ನು ಅನುಭವಿಸಲೇ ಬೇಕಾಗಿರುತ್ತದೆ . . .[46]

ಕಳವಳಗಳು, ಪರಿಶೋಧನೆಗಳು, ಮತ್ತು ಸಂಕಷ್ಟಗಳು ಎಲ್ಲಾ ಮನುಷ್ಯರ ಪಾಲಿಗೂ ಇರುತ್ತವೆ, ಆದರೆ *ಕ್ರೈಸ್ತರು* ಎರಡರಷ್ಟು ಪಾಲು ಹೊಂದುತ್ತಾರೆ: ಯೇಸುವಿನ ಹಿಂಬಾಲಕರು ಜೀವನದ ಸಾಮಾನ್ಯವಾದ ವಿಪರ್ಯಗಳಿಗೆ ಒಳಪಟ್ಟವರು ಮಾತ್ರವೇ ಆಗಿರುವದಿಲ್ಲ, ಆದರೆ ಅವರು ಅನೇಕ ಸಾರಿ ಅವರ ನಂಬಿಕೆಯ ನಿಮಿತ್ತವಾಗಿ ಅಪಾರ್ಥಕ್ಕೂ ಹಿಂಸೆಗೂ ಗುರಿಯಾಗುತ್ತಾರೆ. ಯೇಸುವಿನ ಹಿಂಬಾಲಕನಾಗಿರುವದೆಂದರೆ ಅಷ್ಟು ಸುಲಭವಲ್ಲ ಎಂಬುದಕ್ಕೆ ನಾಲ್ಕು ಕುದುರೆ ಸವಾರರು ಮತ್ತಷ್ಟು ಪುರಾವೆಯಾಗುತ್ತಾರೆ.

ತುಳಿದಾಡುವ ಕುದರೆಗಳು ಮತ್ತು ಅವುಗಳಿಂದ ಉಂಟಾಗುವ ದಿಗಿಲು ಕುರಿತ ಭಾವನೆಯನ್ನು ತಿಳಿಯಪಡಿಸುವದು ಕಷ್ಟಕರವಾಗಿರುತ್ತದೆ. ಕೆಲವೇ ಕೆಲವರು ಕಾಲ್ತುಳಿತವನ್ನು ಕಂಡಿರುತ್ತಾರೆ, ಅಂಥದ್ದರೊಂದರಲ್ಲಿ ಸಿಲುಕಿಕೊಂಡಿರುವ ಜನರು ಅವರಿಗಿಂತಲೂ ಕಡಿಮೆ ಇರುತ್ತಾರೆ. ಬಹುಶಃ ಈ ಕೆಳಗಿನ ದೃಷ್ಟಾಂತವು ಸಹಾಯಕರವಾಗಿರುತ್ತದೆ: ಒಂದು ರೈಲು ಬರುತ್ತಿರುವ ವೇಳೆಯಲ್ಲಿ ರೈಲು ಹಳಿಗಳ ಮೇಲೆ ಹಾಗೆಯೇ ನಿಂತುಕೊಳ್ಳುವದರಿಂದಾಗುವ ಅಪಾಯದ ಕುರಿತು ನಮ್ಮಲ್ಲಿ ಬಹಳಷ್ಟು ಜನರಿಗೆ ತಿಳಿದದೆ. ಏನೇ ನಡೆದರೂ ಸರಿಯೇ, ರೈಲು ಹಳಿಗಳ ಮೇಲೆಯೇ ಉಳಿದು ಬಿಡಬೇಕೆಂದು ನಾವು ತಿರ್ಮಾನಿಸಿಕೊಳ್ಳುತ್ತೇವೆಂದು ಊಹಿಸಿರಿ. ಒಂದು ಬೃಹತ್ ಲೋಕೊಮೋಟಿವ್ ರೈಲು, ಚಕ್ರಗಳನ್ನು ಸುತ್ತುತ್ತಾ, ದೊಡ್ಡ ಶಬ್ದದಲ್ಲಿ ಹಾರ್ನ್ ಹಾಕುತ್ತಾ ನಮ್ಮ ಕಡೆಗೆ ದೌಡಾಯಿಸುತ್ತಾ ಇರುವಾಗ ನಾವು ಅಲ್ಲಿಯೇ ಹಳಿಗಳ ಮೇಲೆ ನಿಂತುಕೊಂಡಿದ್ದರೆ ನಮಗೆ ಹೇಗನ್ನಿಸುತ್ತದೆಂದು ಊಹಿಸಿಕೊಳ್ಳಿರಿ. ನಮ್ಮ ಭಾವವು ಕಾಲಿನಿಂದ ತುಳಿಯುವದಕ್ಕೆ ಆ ಕುದುರೆಗಳು ಅವರೆಡೆಗೆ ರಭಸವಾಗಿ ಓಡಿ ಬರುತ್ತಿದ್ದು ಅವರಿಗೆ ಬಚ್ಚಿಟ್ಟುಕೊಳ್ಳಲು ಯಾವ ಸ್ಥಳವೂ ಇಲ್ಲದೆ ಹೋದಾಗ ಆ ಪ್ರಾಚೀನ ಜಗತ್ತಿನಲ್ಲಿದ್ದವರಿಗೆ ಹೇಗನ್ನಿಸಿದ್ದಿರಬಹುದು ಎಂಬ ಅಂದಾಜನ್ನು ಮಾಡುತ್ತದೆ.

ಮೊದಲ ನಾಲ್ಕು ಮುದ್ರೆಗಳ ಮೂಲಕ ಕ್ರೈಸ್ತರು ಕಲಿತುಕೊಳ್ಳಬೇಕೆಂದು ದೇವರು ಬಯಸುವ ಪ್ರಮುಖ ಸತ್ಯವು ಏನೆಂದರೆ ಆತನು ಸಮಸ್ಯೆಗೊಳಗಾಗಿರುವ ತನ್ನ ಮಕ್ಕಳ ಕಡೆಗೆ ಯಾವಾಗಲೂ ಕೃಪಾಕಟಾಕ್ಷವನ್ನು ತೋರುವವನು ಎಂಬುದೆ. ಈ ಪ್ರಪಂಚವು ಸಮಸ್ಯೆಗಳಿಂದ ತುಂಬಿ ಹೋಗಿದ್ದು ಅವುಗಳಲ್ಲಿ ಕೆಲವು ಚಿಮ್ಮಿಕೊಂಡು ಬಂದು ನಮ್ಮ ಜೀವಿತಗಳಲ್ಲಿ ಬೀಳಬಲ್ಲವು ಎಂಬುದನ್ನು ನಮ್ಮಲ್ಲಿ ಬಹಳಷ್ಟು ಮಂದಿ ಈಗಾಗಲೇ ಬಲ್ಲವರಾಗಿದ್ದೇವೆ. ನಾವು ತಿಳಿದುಕೊಳ್ಳುವ ಅಗತ್ಯವಿರುವ ಸಂಗತಿಯು ಏನೆಂದರೆ ಸಮಸ್ಯೆಗಳು ಬರುವಾಗ ದೇವರು ನಮ್ಮನ್ನು ಕೈ ಬಿಡುವದಿಲ್ಲ ಎಂಬುದೆ.

ದೇವರು ಆ ನಾಲ್ಕು ಕುದುರೆ ಸವಾರರನ್ನು ಸಂಚರಿಸುವಂತೆ ಅನುಮತಿಸುವದಕ್ಕೆ ಒಂದು

ಕಾರಣವೇನೆಂದರೆ ನಮಗೆ ಆತನ ಅಗತ್ಯವಿದೆ ಎಂಬ ಮನವರಿಕೆಯನ್ನು ನಮಗೆ ಮಾಡಿಕೊಡುವದೇ - ನಾವು ಆತನ ಕಡೆಗೆ ತಿರುಗಿಕೊಳ್ಳುವಂತೆ ಮಾಡುವದಕ್ಕಾಗಿಯೇ ಆಗಿದೆ. ಸೈತಾನನು ನಾಲ್ಕು ಕುದುರೆ ಸವಾರರನ್ನು ಅದಕ್ಕೆ ವಿರುದ್ಧವಾದ ಉದ್ದೇಶಕ್ಕಾಗಿ ಬಳಸುತ್ತಾನೆ: ಜನರನ್ನು ಕರ್ತನಿಂದ ದೂರಕ್ಕೆ ನಡಿಸುವದಕ್ಕಾಗಿ. ಸೈತಾನನ ಯಶಸ್ಸಿನ ಕುರಿತ ಒಂದು ಉದಾಹರಣೆಯನ್ನು ದೇವರು ಇಲ್ಲವೇ ಇಲ್ಲ ಎಂದು "ಸಾಭಿತು" ಪಡಿಸುವದಕ್ಕೆ ಮಾಡುವ ಅತ್ಯಂಥ ಪ್ರಸಿದ್ಧ ವಾದದಲ್ಲಿ ಕಾಣಬಹುದಾಗಿದೆ: ಹುಸಿ-ಬುದ್ಧಿವಂತರು ಕೇಳುವದೇನೆಂದರೆ "ದೇವರು ಇರುವದು ನಿಜವೇ ಆಗಿದ್ದಲ್ಲಿ, ಲೋಕದಲ್ಲಿ ಏಕೆ ಅಷ್ಟೊಂದು ಸಮಸ್ಯೆಯು ಇರುತ್ತದೆ?" ಈ ವಾದದ ಜನಪ್ರಿಯತೆಯ ಹೊರತಾಗಿಯೂ, ಅದು ಈ ಪ್ರಶ್ನೆಯ ಕುರಿತಾಗಿ ಉತ್ತರವನ್ನು ಕೊಡುವದಿಲ್ಲ. ಇದು ನಿಜವಾಗಿಯೂ ದೇವರ *ಅಸ್ತಿತ್ವ*ದ ಕುರಿತಲ್ಲ, ಆದರೆ ಆತನ *ಸ್ವಭಾವ*ದ ಕುರಿತಾಗಿಯೇ ಆಗಿದೆ. ಕ್ರೈಸ್ತೀಯ ಆಧಾರಗಳ ಕುರಿತಾದ ಪ್ರಮಾಣಬದ್ಧವಾಗಿ ಪುಸ್ತಕಗಳು ಇದರ ಕುರಿತು ಮತ್ತು ಅದೇ ರೀತಿಯ ವಾದಗಳಿಗೆ ಉತ್ತರವನ್ನು ಕೊಡುತ್ತವೆ.

ಹೇಗೂ, ಜನಸಮೂಹಗಳ ವಿಷಯದಲ್ಲಿ ನೋಡುವದಾದರೆ, ಸೈತಾನನು ಕುದುರೆ ಸವಾರರನ್ನು ಬಹಳ ಠಕ್ಕತನದಿಂದ ಬಳಸಿಕೊಳ್ಳುತ್ತಾನೆ: ನಾಲ್ಕು ಸವಾರರಿಂದ ಉಂಟು ಮಾಡಲ್ಪಟ್ಟಿರುವ ವಿನಾಶತೆಯನ್ನು ಬಳಸಿಕೊಂಡು ಜನರು ಭೂಮಿಯ ಸಮಸ್ಯೆಗಳ ಮೇಲೆ ಮುಖ್ಯವಾದ ಗಮನವನ್ನೆಲ್ಲಾ ಕೊಡುವಂತೆ ಮಾಡುತ್ತಾನೆ. ಈ ಕಾರ್ಯತಂತ್ರದ ವಿಷಯವಾಗಿ, Eldred Echolsನು ಹೀಗೆ ಬರೆಯುತ್ತಾನೆ,

> ನಾವು ಶಾರೀರಿಕ ಜೀವಿಗಳೆಂಬುದನ್ನು ಅರಿತುಕೊಂಡಿರುವ ಸೈತಾನನು ನಮ್ಮನ್ನು ಆತ್ಮೀಕವಾಗಿ ಆತಂಕಕ್ಕೀಡು ಮಾಡುವದಕ್ಕೆ ಸಕಲ ಶಾರೀರಿಕ ದಾರಿಗಳನ್ನೂ ಬಳಸುತ್ತಾನೆ. ಆತನು ಶಾರೀರಿಕವಾಗಿ ನಮ್ಮ ಮೇಲೆ ದಾಳಿ ಮಾಡುತ್ತಾನೆ ಮತ್ತು ಹಸಿವೆಯಿಂದ ಬಳಲುವಿಕೆ, ವ್ಯಾಧಿ, ಕ್ಷಾಮ, ಪರಿಸರ, ಇತ್ಯಾದಿಗಳಂತಹ ಸಂಗತಿಗಳ ಮೇಲೆಯೇ ಎಲ್ಲಾ ಗಮನವನ್ನು ಇಡುವಂತೆ ಮಾಡುತ್ತಾನೆ. ಆತನು ನಮ್ಮ ಗಮನವನ್ನು ಅದಕ್ಕಿಂತಲೂ ಪ್ರಾಮುಖ್ಯವಾಗಿರುವ *ಆತ್ಮೀಕ ಯುದ್ಧ*ದ [ಅಂದರೆ, ನಾವು ನಮ್ಮೊಳಗೆ ಮಾಡುತ್ತಿರುವ ಯುದ್ಧ] ಕಡೆಯಿಂದ ಬೇರೆಡೆ ಸೆಳೆಯುತ್ತಾನೆ.[47]

ವಿಶ್ವಾಸಿಗಳ ವಿರುದ್ಧದ ತನ್ನ ಯುದ್ಧದಲ್ಲಿ, ಸೈತಾನನು ಈ ಕಾರ್ಯತಂತ್ರವನ್ನು ಒಂದು ಹೆಜ್ಜೆ ಮುಂದಕ್ಕೆ ಕೊಂಡೊಯ್ಯುತ್ತಾನೆ. ನಾವು ಕುದುರೆ ಸವಾರರು ನಮ್ಮ ಸ್ವಂತ ಜೀವಿತಕ್ಕೆ ಬಂದು ಅಪ್ಪಳಿಸುವವರಾಗಿದ್ದಾರೆ ಎಂಬುದನ್ನು ಕಂಡುಕೊಳ್ಳುವಾಗ, ಸೈತಾನನು ನಮ್ಮ ಕಿವಿಯಲ್ಲಿ ಉಸುರುತ್ತಾನೆ, "ನಿಮ್ಮ ಏಕಾಗ್ರತೆಯನ್ನೆಲ್ಲಾ ಕ್ರೂರ ಮೃಗಗಳ ಮತ್ತು ದಾಕ್ಷಿಣ್ಯವಿಲ್ಲದ ಅವುಗಳ ಸವಾರರ ಮೇಲೆಯೇ ಇರಿಸು. ಅವರ ದಬ್ಬಾಳಿಕೆಯು ನಿನ್ನ ಮನಸ್ಸು ಹಾಗೂ ಹೃದಯವನ್ನು ನುಗ್ಗುವಂತೆ ಬಿಡು. ಅವರು ನಿನ್ನನ್ನು ತುಳಿದು ಹತಾಶೆ ಹಾಗೂ ನಿರಾಶೆಯಲ್ಲಿ ಮುಳುಗಿಸಲಿ!" Petersonನು ಹೀಗೆ ಬರೆಯುತ್ತಾನೆ,

> ನಾವು ಕೆಟ್ಟತನವನ್ನು ಯಾವ ರೂಪದಲ್ಲಿ ಅನುಭವಿಸುವಾಗ ಅದು ಒಟ್ಟಾರೆಯಾಗಿ ಅನುಭವಕ್ಕೆ ಬರುತ್ತದೆ. ಅದು ಮಿಕ್ಕ ಎಲ್ಲವನ್ನೂ ಅಳಸಿ ಹಾಕುತ್ತದೆ. ಒಂದು ಹಲ್ಲು ನೋವು ದೇವರ ಬೇರೆ ಎಲ್ಲಾ ಅಂಗಗಳಲ್ಲಿರುವ ಆರೋಗ್ಯದ ಅರುಹನ್ನು ನಿರ್ಮೂಲನೆ ಮಾಡುತ್ತದೆ. ಒಂದು ಗಾಯಗೊಂಡಿರುವ ಬೆರಳು ಮೊಣಕೈ ನಿರಾಯಾಸವಾಗಿ ಬಾಗುತ್ತದೆಂಬ ಅದ್ಭುತವಾದ ವಾಸ್ತವಾಂಶವನ್ನು ಅರ್ಥಮಾಡಿಕೊಂಡು ಆಸ್ವಾದಿಸುವದನ್ನು ಅಸಾಧ್ಯಗೊಳಿಸುತ್ತದೆ.[48]

ನಾವು ಜಾಗರೂಕತೆಯಿಂದ ಇಲ್ಲವಾದರೆ, ನಮ್ಮ ದಾರಿಯಲ್ಲಿ ಗಂಭೀರವಾದ ಸಮಸ್ಯೆಯೊಂದು ಬರುವಾಗ, ನಾವು ಅವುಗಳಲ್ಲಿ ಬಹುವಾಗಿ ಮಗ್ನರಾಗಿ ಬೇರೆ ಎಲ್ಲದರ ಮೇಲಿನ ದೃಷ್ಟಿಯನ್ನೂ ಕಳಕೊಳ್ಳಬಹುದಾಗಿದೆ: ನಾವು ಜೀವಿತದಲ್ಲಿರುವ ಒಳ್ಳೇದರ ಮೇಲಿನ ದೃಷ್ಟಿಯನ್ನು, ಅಗತ್ಯಗಳನ್ನು ಹೊಂದಿರುವ ಬೇರೆಯವರ ಮೇಲಿನ, ಮತ್ತು ನಮ್ಮನ್ನು ಪ್ರೀತಿಸುವ ದೇವರ ಮೇಲಿನ ದೃಷ್ಟಿಯನ್ನೂ ಕಳೆದುಕೊಳ್ಳಬಹುದು.

*Life* ಮ್ಯಾಗಜಿನ್‌ನ ಅಕ್ಟೋಬರ್ 1993ರ ಆವೃತ್ತಿಯಲ್ಲಿ Jenson ಎಂಬ ಹೆಸರಿನ ಒಬ್ಬ ಬಾಲಕನು ಕೊಳಲು ಬಾರಿಸುತ್ತಿದ್ದ ಚಿರಸ್ಮರಣೀಯ ಛಾಯಾಚಿತ್ರವೊಂದಿತ್ತು. ಆತನ ಉದ್ದವಾದ, ಕಪ್ಪಾಗಿರುವ ಮುಂಗುರುಳುಗಳ ಕೆಳಗೆ ಆತನ ಕಣ್ಣುಗಳಿರುವ ಜಾಗದಲ್ಲಿ ಕೇವಲ ಬರಿದಾದ ಕುಳಿಗಳಿದ್ದವು. ಕಾರಣವು ಏನೇ ಆಗಿದ್ದರೂ ಸರಿಯೇ, ಕುರುಡುತನವು ಅಸಹ್ಯಿಸುವಂಥದ್ದಾಗಿದೆ; ಆದರೆ Colombiaದ Bogota ಎಂಬಲ್ಲಿ ಇದ್ದ Jensonನು ಬಹಳಷ್ಟು ಜನರಿಗಿಂತಲೂ ಅತ್ಯಂಥ ದುಃಖಕರವಾದ ಅನುಭವವನ್ನು ಹೊಂದಿದ್ದನು. ಆತನು ಹತ್ತು ವಯಸ್ಸಿನವನಾಗಿರುವ ವೇಳೆ, ತೀವ್ರವಾದ ಭೇದಿಯಿದ್ದ ಆತನನ್ನು ಆತನ ತಾಯಿಯು ಆಸ್ಪತ್ರೆಗೆ ಕರೆದೊಯ್ದಳು. ಆಕೆಯು ಮರುದಿನ ಹಿಂದಿರುಗಿ ಬಂದು ನೋಡಿದಾಗ, ಆತನ ಕಣ್ಣುಗಳಿಗೆ ಪಟ್ಟಿಗಳನ್ನು ಸುತ್ತಲಾಗಿತ್ತು ಮತ್ತು ಆ ದೇಹದ ಮೇಲೆಲ್ಲಾ ರಕ್ತವು ಚೆಲ್ಲಾಡಿ ಒಣಗಿ ಹೋಗಿತ್ತು. ಆಕೆಯು ಆತನನ್ನು ತ್ವರಿತವಾಗಿ ಬೇರೊಂದು ಆಸ್ಪತ್ರೆಗೆ ರವಾನಿಸಿದಳು, ಅಲ್ಲಿ ಆತನ ಕಣ್ಣುಗಳನ್ನು ಯಾರೋ ದೋಚಿಕೊಂಡು ಹೋಗಿದ್ದಾರೆಂದು ಆಕೆಗೆ ತಿಳಿಸಲ್ಪಟ್ಟಿತು. ಎಂಥ ದುರಂತಮಯ! ಕೊಲಂಬಿಯಾದ ಅಂಗಾಂಗಗಳ ಕಳ್ಳರಿಗೆ ಇದಕ್ಕಿಂತ ದುರಂತಕರವಾದ ಕಥನವು ಇರುತ್ತದೆ: *ಆತ್ಮೀಕ* ದೃಷ್ಟಿಯನ್ನು, ನಿಜವಾಗಿಯೂ ಪ್ರಾಮುಖ್ಯವಾದದ್ದು ಯಾವದೆಂಬುದನ್ನು ನೋಡುವ ಹಾಗೂ ವಿವೇಚಿಸುವ ಸಾಮರ್ಥ್ಯವನ್ನು, ನಮ್ಮ ಜೀವಿತಗಳಿಗೆ ಲಗ್ಗೆ ಇಡುವ ಸಮಸ್ಯೆಗಳಲ್ಲಿರುವ ದೇವರ ಹಸ್ತವನ್ನು ಕಾಣುವದಕ್ಕೆ ಇರುವ ಸಾಮರ್ಥ್ಯವನ್ನು ಕದ್ದುಕೊಳ್ಳುವವನೊಬ್ಬನು ಇದ್ದಾನೆ. ಆ ಕಳ್ಳನು ಸೈತಾನನೇ![49] "ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ" ಎಂಬುದಕ್ಕಾಗಿ ದೇವರಿಗೆ ಸ್ತೋತ್ರ (2 ಕೊರಿಂಥ 2:11). "ಈ ಜೀವಮಾನದಲ್ಲಾಗುವ ಚಿಂತೆ . . ." ಗಳನ್ನು ಬಳಸಿಕೊಂಡು (ಲೂಕ 8:14) ನಿಮ್ಮ ಆತ್ಮೀಕ ವಿವೇಚನಾಶಕ್ತಿಯನ್ನು ಕದ್ದುಕೊಳ್ಳುವಂತೆ ಸೈತಾನನಿಗೆ ಅವಕಾಶವನ್ನು ಕೊಡದಿರಿ.

ದೇವರು ಅಧಿಕಾರದಲ್ಲಿದ್ದಾನೆ ಮತ್ತು ಆತನು ತನ್ನ ಯೋಜನೆಗಳನ್ನು ಹಾಗೂ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದಾನೆಂಬುದನ್ನು 6:1-8ರಲ್ಲಿನ ಭಾಷೆಯು ಒತ್ತಿ ಹೇಳುತ್ತದೆ. ಆತನ ಯೋಜನೆಗಳು ಹಾಗೂ ಉದ್ದೇಶಗಳ ಹೃದಯಭಾಗದಲ್ಲಿ ತನ್ನ ಜನರನ್ನು ಆಶೀರ್ವದಿಸಬೇಕೆಂಬ ಬಯಕೆಯು ಇರುತ್ತದೆ. ದೇವರು ನಮ್ಮನ್ನು ಪ್ರೀತಿಸುತ್ತಾನೆ; ಆತನು ನನ್ನ ಪಕ್ಷದಲ್ಲಿದ್ದಾನೆ. ಬಹಳ ಕಾಲದ ಹಿಂದೆ, ಆತನು ಮೋಶೆಗೆ ಹೀಗೆ ಹೇಳಿದನು, ". . . ನನ್ನ ಜನರ ದುರವಸ್ಥೆಯನ್ನು ನೋಡೇ ನೋಡಿದ್ದೇನೆ; ಅವರ ಮೊರೆಯನ್ನು ಕೇಳಿ ಅವರನ್ನು ಬಿಡಿಸುವದಕ್ಕೆ ಇಳಿದುಬಂದಿದ್ದೇನೆ" (ಅಪೊಸ್ತಲರ ಕೃತ್ಯಗಳು 7:34). ದೇವರು ಮೊದಲ ಶತಮಾನದಲ್ಲಿ ಅದೇ ಭಾವಾನಾತ್ಮಕತೆಯನ್ನು ಹೊಂದಿದ್ದನು, ಮತ್ತು ಈ ದಿನವೂ ಅದನ್ನೇ ಹೊಂದಿರುವನು.

## ಐದನೆಯ ಹಾಗೂ ಆರನೆಯ ಮುದ್ರೆಗಳು (6:9-17)

ನೀವು ಐದು ಮತ್ತು ಆರನೆಯ ಮುದ್ರೆಗಳನ್ನು (6:9-17) ಒಂದು ಪಾಠದಲ್ಲಿಯೇ ಮುಗಿಸುವದಕ್ಕೆ ಇಷ್ಟ ಪಡುವದಾದರೆ, ನೀವು ಆ ಪಾಠಕ್ಕೆ "ಸರಿಯಾದ ದಾರಿ ಮತ್ತು ತಪ್ಪಾದ

ದಾರಿ" ಎಂದು ಹೆಸರಿಡಬಹುದು. ಐದನೆಯ ಮುದ್ರೆಯು "ಹಿಂಸೆಯ ವಿಷಯದಲ್ಲಿ ಅನುಸರಿಸಬೇಕಾದ ಸರಿಯಾದ ದಾರಿಯನ್ನು" ದೃಷ್ಟಾಂತ ಪಡಿಸಬಹುದಾಗಿದೆ: (1) ಹಿಂಸೆಯ ಕುರಿತು ಕಳಕಳಿಯುಳ್ಳವರಾಗಿ ಇರುವದರಲ್ಲಿ ತಪ್ಪೇನೂ ಇಲ್ಲ. (2) ಹಿಂಸೆಯು ಬರುವ ವೇಳೆ, ದೇವರ ಕಡೆಯಿಂದ *ವಿಮುಖವಾಗಿ* ತಿರುಗಿಕೊಳ್ಳುವದರ ಬದಲಾಗಿ ದೇವರ *ಕಡೆಗೆ* ತಿರುಗಿಕೊಳ್ಳಿರಿ. (3) ನೀವೇ ಸ್ವತಃ ಮುಯ್ಯಿಗೆ ಮುಯ್ಯಿ ತೀರಿಸಬೇಡಿರಿ, ಆದರೆ ಅಂಥ ಸಂಗತಿಗಳನ್ನು ದೇವರ ಕೈಗೆ ಒಪ್ಪಿಸಿರಿ. ಆರನೆಯ ಮುದ್ರೆಯು "ನ್ಯಾಯತೀರ್ಪಿಗೋಸ್ಕರ ಸಿದ್ಧತೆ ಮಾಡಿಕೊಳ್ಳುವದರ ತಪ್ಪಾದ ದಾರಿಯನ್ನು" ದೃಷ್ಟಾಂತ ಪಡಿಸಬಹುದಾಗಿದೆ: (1) ನ್ಯಾಯತೀರ್ಪು ಬರುವ ತನಕ ಏನನ್ನೂ ಮಾಡದಿರುವದು. (2) ಜೀವಿತದಲ್ಲಿ ನೀವಿರುವ ಸ್ಥಾನವು ನಿಮ್ಮನ್ನು ದೇವರ ಕೋಪಾಗ್ನಿಗೆ ಅಭೇದ್ಯವಾಗಿರುತ್ತದೆ ಎಂದು ಭಾವಿಸಿಕೊಳ್ಳಿರಿ. (3) ನ್ಯಾಯತೀರ್ಪು ಬರುವಾಗ, ಒಂದು ಬಿಲವನ್ನು ಕೊರೆದು ಅದರೊಳಗೆ ತೆವಳಿಕೊಂಡು ಹೋಗುವದಕ್ಕೆ ಪ್ರಯತ್ನಿಸಿರಿ.

ಆರನೆಯ ಮುದ್ರೆಯ ಕುರಿತಾದ ಪಾಠಕ್ಕೆ ಇಡಬಹುದಾದ ಸಂಭಾವ್ಯ ಶಿರ್ಷೀಕೆಗಳಲ್ಲಿ ಸೇರಿದವುಗಳೆಂದರೆ "ಕುರಿಯಾದಾತನ ಕೋಪ," "ದೇವರಿಂದ ಮರೆಯಾಗಿ ನೀವು ಅಡಗಿಕೊಳ್ಳಲಾರಿರಿ!" ಮತ್ತು "ನಿಲ್ಲುವದಕ್ಕೆ ಯಾರು ಶಕ್ತರು?"

## ಮನುಷ್ಯನ ಪ್ರಶ್ನೆ (6:10)

ಪ್ರಕಟನೆ 6:10ರಲ್ಲಿ, ರಕ್ತಸಾಕ್ಷಿಗಳಾಗಿ ಸತ್ತು ಯಜ್ಞವೇದಿಯ ಕೆಳಗಿದ್ದವರು ಹೀಗೆ ಹೇಳುತ್ತಾ ಕೂಗಿಕೊಂಡರು, "ಒಡೆಯನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ, ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀನು ಇನ್ನು ಎಷ್ಟು ಕಾಲದ ವರೆಗೂ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ?" ಈ ಮನಸ್ಸನ್ನು ಸೆಳೆಯುವ ಈ ಪ್ರಶ್ನೆಗೆ ಸ್ವಲ್ಪ ವಿಚಾರಪೂರ್ಣ ಪರಿಶೀಲನೆಯನ್ನು ಮಾಡುವದು ಯೋಗ್ಯವಾಗಿರುತ್ತದೆ.

*ಒಂದು ದಿಗ್ಭ್ರಾಂತಗೊಳಿಸುವ ಪ್ರಶ್ನೆ.* ಆಧುನಿಕ ವಾಚಕರಿಗೆ ಸಂಬಂಧ ಪಡುವಂಥಹ ಪ್ರಶ್ನೆಯ ಒಂದು ಅಂಶವು ಯಾವದೆಂದರೆ ಪ್ರತಿದಂಡನೆ ಮಾಡುವದರ ಮೇಲೆ ಒತ್ತು ಕೊಟ್ಟಿರುವದು. ಕ್ರೈಸ್ತೀಯ ದಸ್ತಾವೇಜಿನಲ್ಲಿ ಪ್ರತಿದಂಡನೆಯೆಂಬ ವಿಚಾರಕ್ಕೆ ಅವಕಾಶವೇ ಇರುವದಿಲ್ಲ. ಅವರು ಹೇಳುವದೇನೆಂದರೆ, "ಅಂತೂ, ನಮ್ಮನ್ನು ಹೊಡೆಯುವವರಿಗೆ ನಮ್ಮ ಇನ್ನೊಂದು ಕೆನ್ನೆಯನ್ನು ತಿರುಗಿಸಬೇಕೆಂದು ಯೇಸುವು ನಮಗೆ ಹೇಳಲಿಲ್ಲವೇ? [ಮತ್ತಾಯ 5:39]. ಯೇಸುವು ತನ್ನ ವೈರಿಗಳು ಅವನನ್ನು ಶಿಲುಬೆಗೆ ಹಾಕುತ್ತಿರುವಾಗಲೂ ಅವರಿಗೋಸ್ಕರ ಪ್ರಾರ್ಥಿಸಲಿಲ್ಲವೋ? [ಲೂಕ 23:34]. ಸ್ತೇಫನನು ತನಗೆ ಕಲ್ಲೇಸೆಯುತ್ತಿದ್ದರಿಗೋಸ್ಕರ ಇದೇ ವಿಧದಲ್ಲಿಯೇ ಪ್ರಾರ್ಥಿಸಿದನು [ಅಪೊಸ್ತಲರ ಕೃತ್ಯಗಳು 7:60]." ಈ ನಿಮಿತ್ತವಾಗಿ ಕೆಲವರು ಪ್ರಕಟನೆ ಪುಸ್ತಕವನ್ನು ಹೊಸ ಒಡಂಬಡಿಕೆಯ ಕ್ಯಾನೋನಿನ ಭಾಗವೆಂಬುದನ್ನು ತಿರಸ್ಕರಿಸಿರುತ್ತಾರೆ, ಪ್ರತಿದಂಡನೆ (ಪ್ರತೀಕಾರ) ಕುರಿತು ಒತ್ತು ಕೊಟ್ಟಿರುವದನ್ನು ಬಳಸಿಕೊಂಡು ಆ ಪುಸ್ತಕದ ವಿಶ್ವಾಸರ್ಹತೆಯ ವಿಷಯದಲ್ಲಿ ತಕರಾರು ಸಲ್ಲಿಸುತ್ತಾರೆ. ಪ್ರಕಟನೆ ಪುಸ್ತಕವು ಪ್ರೇರಿತವಾದದ್ದೆಂಬುದನ್ನು ನಂಬುವ ಇನ್ನು ಕೆಲವರು, ಆ "ಯಜ್ಞವೇದಿಯ ಕೆಳಗಿದ್ದವರು" ಕ್ರೈಸ್ತರಾಗಿರುವದಕ್ಕೆ ಸಾಧ್ಯವಿಲ್ಲ ಮತ್ತು ಆ ಕಾರಣದಿಂದ ಅವರು ಯೆಹೂದ್ಯರೇ ಆಗಿರಬೇಕು ಎಂಬ ಮುಕ್ತಾಯಕ್ಕೆ ಬರುತ್ತಾರೆ. ಹೇಗೂ, ಇವರು ನಿಸ್ಸಂಶಯವಾಗಿಯೂ ಕ್ರೈಸ್ತರೇ ಆಗಿದ್ದರು: (1) ಯೋಹಾನನು ಯಾವ ಕಾರಣಕ್ಕಾಗಿ ಗಡಿಪಾರು ಮಾಡಲ್ಪಟ್ಟಿದ್ದನೋ ಅದೇ ಕಾರಣಕ್ಕಾಗಿಯೇ ಅವರು ಕೊಲ್ಲಲ್ಪಟ್ಟಿದ್ದರು (1:9; 6:9). (2) ಅವರು ಕ್ರೈಸ್ತರಿಗೆ ವಾಗ್ದಾನ ಮಾಡಲ್ಪಟ್ಟಿದ್ದ ಪ್ರತಿಫಲಗಳನ್ನು ಹೊಂದಿಕೊಂಡರು (3:5; 6:11). (3) ಪ್ರಕಟನೆ ಪುಸ್ತಕವು

ಕ್ರೈಸ್ತರಿಗೆ ಸಾಂತ್ವನ ಹೇಳುವದಕ್ಕೆ ಬರೆಯಲ್ಪಟ್ಟಿತ್ತು (ಹೊರತು ಯೆಹೂದ್ಯರಿಗೋಸ್ಕರವಲ್ಲ), ಈ ಕ್ರೈಸ್ತರು ಹಿಂಸೆಯ ಮಧ್ಯದಲ್ಲಿ ಅರ್ಥವನ್ನು ಕಂಡುಕೊಳ್ಳಲು ಹೋರಾಡುತ್ತಿದ್ದರು.

ಇದೊಂದು ಸುಲಭವಾದ ವಿಚಾರವಾಗಿರುವದಿಲ್ಲ, ಆದರೆ ಕೆಲವೊಂದು ಯೋಚನೆಗಳು ಇರುತ್ತವೆ:

1. ಕೆಲವು ಸಾರಿ ಕ್ರೈಸ್ತರಿಗೆ ಸಮಸ್ಯೆಗಳು ಮತ್ತು ಸಂಕಷ್ಟಗಳು ಬರುವ ವೇಳೆಯಲ್ಲಿ ಅವರೊಳಗೆ ಹೃದಯ-ಹಿಂಡುವಂಥ ಪ್ರಶ್ನೆಗಳಿರುತ್ತವೆ ಎಂಬುದನ್ನು ಈ ವಾಕ್ಯಭಾಗವು ಒಪ್ಪಿಕೊಳ್ಳುತ್ತದೆ. ಅಲ್ಲದೆ ಪ್ರಶ್ನೆ ಮಾಡುವವನು ಸರ್ವಶಕ್ತನಲ್ಲಿ ನಂಬಿಕೆಯನ್ನು ಕಳೆದುಕೊಳ್ಳದೆ ಇರುವಷ್ಟರ ವರೆಗೂ ಅಂತಹ ಪ್ರಶ್ನೆಗಳನ್ನು ಹೊಂದಿರುವದರಲ್ಲಿ ತಪ್ಪೇನೂ ಇಲ್ಲ ಎಂಬುದನ್ನು ಸಹ ಇದು ಪರೋಕ್ಷವಾಗಿ ಸೂಚಿಸುತ್ತದೆ.

2. ಈ ಆತ್ಮಗಳು ಪ್ರತಿದಂಡನೆಯ ವಿಚಾರವನ್ನು *ದೇವರ* ಕೈಗಳಲ್ಲಿ ಬಿಟ್ಟು ಬಿಡುತ್ತಿದ್ದಾವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹೊಸ ಒಡಂಬಡಿಕೆಯು ವೈಯಕ್ತಿಕವಾಗಿ ಸೇಡು ತೀರಿಸಿಕೊಳ್ಳುವಿಕೆಯ ವಿರುದ್ಧವಾಗಿ ಕಲಿಸುತ್ತದೆ, ಆದರೆ ದೇವರು ಒಂದು ಭಕ್ತಿಹೀನರಿಗೆ ನ್ಯಾಯತೀರಿಸುವನೆಂಬುದನ್ನು ಸಹ ಅದು ಒತ್ತಿ ಹೇಳುತ್ತದೆ. ಉದಾಹರಣೆಗೆ, ಈ ವಿಷಯದ ಕುರಿತು ಪೌಲನು ರೋಮಾ 12:17-21ರಲ್ಲಿ ನೀಡಿರುವ ಉಪದೇಶವನ್ನು ಪರಿಗಣಿಸಿರಿ. ಪೌಲನು ತನ್ನ ವಾಚಕರಿಗೆ ಹೀಗೆ ಆದೇಶ ಮಾಡುತ್ತಾನೆ:

> ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ . . . ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ. ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದಿರಿ . . . ಹಾಗಾದರೆ ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು . . . ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು.

ಹೇಗೂ, ಪ್ರತೀಕಾರವನ್ನು ಮಾಡದಿರುವದರ ಕುರಿತಾದ ಪೌಲನ ಪ್ರಕರಣ ಗ್ರಂಥದ ಮಧ್ಯದಲ್ಲಿ, ದೇವರು ಒಂದು ದಿನ ಕ್ರೈಸ್ತರ ಪರವಾಗಿ ನ್ಯಾಯವನ್ನು ಸ್ಥಾಪಿಸುವನು ಮತ್ತು ಆವರ ವಿರುದ್ಧ ಅನ್ಯಾಯದಿಂದ ನಡೆದುಕೊಂಡವರಿಗೆ ದಂಡನೆಯನ್ನು ನೀಡುವನು ಎಂಬುದನ್ನು ಪೌಲನು ಒತ್ತಿ ಹೇಳುತ್ತಾನೆ. ಪೌಲನು "ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದಿರಿ" ಎಂದು ಹೇಳಿದ ಬಳಿಕ, ಆತನು ಮುಂದುವರೆದು ಹೇಳಿದ್ದೇನೆಂದರೆ, "*ಶಿಕ್ಷಿಸುವದನ್ನು ದೇವರಿಗೆ* ಬಿಡಿರಿ. ಯಾಕೆಂದರೆ ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ" (ರೋಮಾ 12:19; ಒತ್ತಿ ಹೇಳಿದ್ದು ನನ್ನದು).

ಹೊಸ ಒಡಂಬಡಿಕೆಯು ವೈಯಕ್ತಿಕ ಹಾಗೂ ಖಾಸಗಿಯಾಗಿ ಪ್ರತೀಕಾರ ಸಲ್ಲಿಸುವದನ್ನು ಖಂಡಿಸುತ್ತದೆಂಬುದನ್ನು ಕ್ರೈಸ್ತರು ಅರ್ಥಮಾಡಿಕೊಳ್ಳಬೇಕು. ಸೇಡು ತೀರಿಸಿಕೊಳ್ಳುವದನ್ನು ಅನೇಕರು ನಿಜವಾಗಿರಲಿ ಅಥವಾ ಕಲ್ಪನೆಯಲ್ಲಾಗಿದ್ದರೂ ಸರಿಯೇ, ಯಾವದೇ ತೇಜೋವಧೆಗೆ ಪ್ರತ್ಯುತ್ತರವನ್ನು ನೀಡುವದು ಸ್ವಾಭಾವಿಕವಾದದ್ದು, ತಾರ್ಕಿಕವಾದದ್ದು, ಮತ್ತು ಸ್ವೀಕಾರಾರ್ಹವಾದದ್ದೆಂದು ಘೋಷಿಸುತ್ತಾರೆ. ಈ ರೀತಿಯ ಪ್ರವೃತ್ತಿಗೆ ಒಂದು ಕಾರಣವೆಂದರೆ ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ಕೊಡುವದಕ್ಕೆ ನ್ಯಾಯಾಂಗ ವ್ಯವಸ್ಥೆಯು ಸತತವಾಗಿ ವಿಫಲವಾಗುವದೇ ಆಗಿರುತ್ತದೆಂದು ಕೆಲವರು ಯೋಚಿಸುತ್ತಾರೆ. ಕಾರಣವು ಏನೇ ಆಗಿದ್ದರೂ ಸರಿಯೇ, ಕ್ರೈಸ್ತರು ವೈಯಕ್ತಿಕವಾಗಿ ಸೇಡು ತೀರಿಸಿಕೊಳ್ಳುವದಕ್ಕೆ ಅಥವಾ ಹಾಗೆ ಮಾಡುವಂತೆ ಬೇರೆಯವರಿಗೆ ಪ್ರೋತ್ಸಾಹಿಸುವದಕ್ಕೆ ಒಲವು ತೋರುವಿಕೆಯನ್ನು ಎದುರಿಸಿ ನಿಲ್ಲತಕ್ಕದ್ದು.

"ಪ್ರತೀಕಾರವು ಮಧುರವಾದದ್ದು!" ಎಂಬುದು ಒಂದು ಪುರಾತನ ಕೂಗು ಆಗಿದೆ. ಕೆಲವರು ಅದನ್ನು ಈ ವಿಧವಾಗಿ ವ್ಯಕ್ತಪಡಿಸುತ್ತಾರೆ: "ನಾನು ಬುದ್ಧಿಗೆಟ್ಟವನಾಗುವದಿಲ್ಲ; ನಾನು ಸೇಡು ತೀರಿಸಿಕೊಳ್ಳುತ್ತೇನೆ." ಬಹಳಷ್ಟು ಪುಸ್ತಕಗಳ ಮತ್ತು ಸಿನಿಮಾಗಳ ಕಥಾಹಂದರಗಳು ಪ್ರತೀಕಾರದ ವಿಷಯದ ಸುತ್ತಲೂ ಸುತ್ತುತ್ತವೆ; "ನಾಯಕನು" ಖಳನಾಯಕನ ಮೇಲೆ ಸಮಸ್ಯೆ ಮತ್ತು ಅವಮಾನದ ರಾಶಿಯನ್ನು ಸುರಿಯುತ್ತಿದ್ದರೆ ಪ್ರೇಕ್ಷಕರು ಚಪ್ಪಾಳೆ ತಟ್ಟುತ್ತಿರುತ್ತಾರೆ. ಯೇಸುವಿನ ಶಿಷ್ಯರಾಗಿ, ಈ ಪ್ರವೃತ್ತಿಯಲ್ಲಿ ಸಿಕ್ಕಿಕೊಳ್ಳುವ ಶೋಧನೆಯನ್ನು ಎದುರಿಸಿ ನಿಲ್ಲಬೇಕು. ಬೈಬಲ್ ಈಗಲೂ ಹೇಳುವದೇನೆಂದರೆ, "ಯಾರೂ ಅಪಕಾರಕ್ಕೆ ಅಪಕಾರಮಾಡದಂತೆ ನೋಡಿಕೊಳ್ಳಿರಿ; ಯಾವಾಗಲೂ ನೀವು ಒಬ್ಬರಿಗೊಬ್ಬರು ಹಿತವನ್ನು ಮಾಡಿಕೊಂಡಿರುವದಲ್ಲದೆ ಎಲ್ಲರಿಗೂ ಹಿತವನ್ನು ಮಾಡುವವರಾಗಿರಿ" (1 ಥೆಸಲೋನಿಕ 5:15). ಪ್ರತೀಕಾರದಲ್ಲಿ ಅಪರಿವರ್ತನೀಯವಾಗಿ ಕ್ರೈಸ್ತೀಯವಲ್ಲದ ಯೋಚನೆಗಳು ಮತ್ತು ಭಾವಗಳು ಅಡಕವಾಗಿರುತ್ತವೆ. ಹೃದಯದಲ್ಲಿ ಏಕಕಾಲದಲ್ಲಿ ಕಹಿಭಾವನೆ ಮತ್ತು ಪ್ರೀತಿಗಳು ತುಂಬಿರುವದಕ್ಕೆ ಸಾಧ್ಯವಿಲ್ಲ.

ಇನ್ನೊಂದೆಡೆಯಲ್ಲಿ, ಕೆಟ್ಟತನಕ್ಕೆ ದಂಡನೆಯಾಗತಕ್ಕದ್ದು ಎಂಬುದನ್ನು ಹೊಸ ಒಡಂಬಡಿಕೆಯು ಕಲಿಸುತ್ತದೆಂಬುದು ನಿಜವೇ ಆಗಿದೆ - ಮತ್ತು ದುಷ್ಟತ್ವಕ್ಕೆ ದಂಡನೆಯಾಗುವಂಥ ಒಂದು ದಿನವು ಬರು*ವದು* ಎಂಬ ಭರವಸವನ್ನು ನೀಡುತ್ತದೆ. ಹೀಗೆ ನಾವು ಮುಂಚೆ ತಿಳಿಸಲ್ಪಟ್ಟ ರೀತಿಯ ವಾಕ್ಯಭಾಗಗಳನ್ನು ಹೊಂದಿದ್ದೇವೆ: "ತನ್ನ ಸೇವಕರ ರಕ್ತವನ್ನು ಚೆಲ್ಲಿದ ಶತ್ರುಗಳಿಗೆ ಯೆಹೋವನು ಪ್ರತಿದಂಡನೆ ಮಾಡುತ್ತಾನೆ" (ಧರ್ಮೋಪದೇಶಕಾಂಡ 32:43). "ದೇವರಾದುಕೊಂಡವರು ಆತನಿಗೆ ಹಗಲು ರಾತ್ರಿ ಮೊರೆಯಿಡುವಲ್ಲಿ ಆತನು ಅವರ . . . ನ್ಯಾಯವನ್ನು ತೀರಿಸದೆ ಇರುವನೇ?" (ಲೂಕ 18:7).

ಪ್ರಕಟನೆ 6:10 ಪರಿಭಾಷೆಯು ಕೆಲವರಿಗೆ ರಕ್ತ-ದಾಹವುಳ್ಳದ್ದು ಎಂದನ್ನಿಸಿದರೂ, ಪಾಪಕ್ಕೆ ದಂಡನೆಯಾಗದೆ ಹೀಗೆಯೇ ನಿರಂತರವಾಗಿ ಸಾಗುವದು ತಪ್ಪಾದದ್ದು ಎಂಬುದನ್ನು ಬಹಳಷ್ಟು ಮಂದಿ ಒಪ್ಪಿಕೊಳ್ಳುತ್ತಾರೆ. ಜನರು ಒಳ್ಳೇದಕ್ಕೆ ಪ್ರತಿಫಲ ಮತ್ತು ಕೆಟ್ಟದ್ದಕ್ಕೆ ದಂಡನೆ ಸಿಕ್ಕುವದು ಸರಿಯಾದದ್ದು, ಮತ್ತು ಇದಕ್ಕೆ ಹಿಮ್ಮೊಗವಾದದ್ದು ಸಂಭವಿಸುವದು ತಪ್ಪು ಎಂಬುದನ್ನು ಜನರು ಹುಟ್ಟರಿವಿನಿಂದಲೇ ತಿಳಿಯುವವರಾಗಿದ್ದಾರೆ.

ಹೇಗೂ, ದೇವರ ಪ್ರತಿದಂಡನೆ ಮಾಡುವ ಪಾತ್ರವನ್ನು ಸ್ವತಃ ತಾನೇ ವಹಿಸಿಕೊಳ್ಳುವದು ಯಾವದೇ ವ್ಯಕ್ತಿಗೆ ಸೇರಿರುವದಲ್ಲ. ತಪ್ಪಿಗೆ ವೈಯಕ್ತಿಕವಾಗಿ ಮತ್ತು ಖಾಸಗಿಯಾಗಿ ಪ್ರತಿದಂಡನೆ ಮಾಡುವಂತೆ ತಾವು ದೇವರಿಂದ ನೇಮಿಸಲ್ಪಟ್ಟವರೆಂದು ಕೆಲವು ವ್ಯಕ್ತಿಗಳು ನಂಬಿದ್ದರ ಫಲಿತವಾಗಿ ಅತ್ಯಂಥ ಕೆಟ್ಟ ಸಂಗತಿಗಳು ಸಂಭವಿಸಿರುತ್ತವೆ. *ನಾಗರೀಕ ಸರ್ಕಾರವು* "ದೇವರ ಸೇವಕನಾಗಿದ್ದು ಕೆಟ್ಟದ್ದನ್ನು ನಡಿಸುವವನಿಗೆ ದೇವರ ದಂಡನೆಯನ್ನು ವಿಧಿಸುತ್ತಾನೆ" ಎಂದು ಕರೆಯಲ್ಪಟ್ಟಿದೆ (ರೋಮಾ 13:4), ಆದರೆ ಪ್ರತಿದಂಡನೆಯನ್ನು ಮಾಡುವದು ಎಂದಿಗೂ ವೈಯಕ್ತಿಕ ಸೇಡು ತೀರಿಸುವಿಕೆಯಾಗಿರಬಾರದು. ಪೌಲನು ನೀಡಿದ ಆಜ್ಞೆಯನ್ನು ಮರೆಯದಿರಿ: "ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದಿರಿ" (ರೋಮಾ 12:19; ನೋಡಿರಿ 2 ತಿಮೊಥೆ 4:14). ಈ ಕಾರ್ಯವನ್ನೇ "ಯಜ್ಞವೇದಿಯ ಕೆಳಗಿರುವ" ದೇವಜನರು ಮಾಡುತ್ತಿದ್ದರು.

3. "ಇನ್ನು ಎಷ್ಟು ಕಾಲ?" ಎಂದು ಮೊರೆಯಿಟ್ಟವರು ವೈಯಕ್ತಿಕವಾಗಿ ಸೇಡು ತೀರಿಸಿಕೊಳ್ಳಬೇಕೆಂಬುದಕ್ಕಿಂತಲೂ ಅಧಿಕವಾಗಿ ದೇವರ ಧ್ಯೇಯವು ದೋಷಮುಕ್ತಗೊಳ್ಳಬೇಕು ಎಂಬ ಕಳಕಳಿಯನ್ನು ಹೊಂದಿದ್ದರು ಎಂದು ಕೆಲವು ವ್ಯಾಖ್ಯಾನಕಾರರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ - ಮತ್ತು ಬಹುಶಃ ಈ ವಿಚಾರವು ಸತ್ಯವೆಂದು ಅನ್ನಿಸುತ್ತದೆ. ದೇವರು

ಅವರಿಗಾಗಿ ಪ್ರತಿದಂಡನೆಯನ್ನು ಮಾಡುವದರ ಮೂಲಕವಾಗಿ ವೈಯಕ್ತಿಕವಾಗಿ ಅವರಿಗೆ ಯಾವ ಲಾಭವೂ ಇರಲಿಲ್ಲ; ಅವರು ಈಗಾಗಲೇ ತಮ್ಮ ನಿತ್ಯವಾದ ಬಾಧ್ಯತೆಯನ್ನು ಹೊಂದಿಕೊಳ್ಳುವ ಪ್ರಕ್ರಿಯೆಯಲ್ಲಿದ್ದರು. ಅವರು *ದೇವರ* ಕೀರ್ತಿಯ ಕುರಿತು ಚಿಂತೆಯಿತ್ತು. ದೇವರು ಏನನ್ನೂ ಮಾಡದೆ ಹೋದರೆ, ಬಹುಶಃ ಅವರ ವೈರಿಗಳಿಗೆ ರೋಮನ್ನರು ಆರಾಧಿಸುತ್ತಿದ್ದ ದೇವರುಗಳಿಗೆ ಹೋಲಿಸಿದರೆ ದೇವರು ದುರ್ಬಲನು ಮತ್ತು ಪರಿಣಾಮಕಾರಿಯಲ್ಲದವನು ಎಂದು ತೋರಬಹುದಾಗಿತ್ತು.

ಆ ಕಳಕಳಿಯು ಶಾಸ್ತ್ರಗಳಲ್ಲಿ ಆಗಾಗ ವ್ಯಕ್ತಡಿಸಲ್ಪಟ್ಟಿರುತ್ತದೆ. ಕೀರ್ತನೆ 19ರಲ್ಲಿ ಕೀರ್ತನೆಗಾರನು ಹೀಗೆ ಪ್ರಾರ್ಥಿಸಿದನು, "ನಮ್ಮನ್ನು ರಕ್ಷಿಸುವ ದೇವರೇ, ನಿನ್ನ ನಾಮದ ಘನತೆಗೋಸ್ಕರ ಸಹಾಯಮಾಡು; ನಿನ್ನ ಹೆಸರಿಗೆ ತಕ್ಕಂತೆ ರಕ್ಷಿಸಿ ನಮ್ಮ ಪಾಪಗಳನ್ನು ಅಳಿಸಿಬಿಡು" (ಕೀರ್ತನೆ 79:9). ಜನರು ಕರ್ತನು ಕುರಿತು ಏನಂದುಕೊಳ್ಳುವರೆಂಬ ಕಳಕಳಿಯು ವ್ಯಕ್ತಪಡಿಸಲ್ಪಟ್ಟಿರುತ್ತದೆ. ಲೇಖಕನು ಬಳಿಕ ಹೀಗೆ ಕೇಳುತ್ತಾನೆ, "ಮ್ಲೇಚ್ಛರು [ಜನಾಂಗಗಳು]- ಅವರ ದೇವರು ಎಲ್ಲಿ ಎಂದು ಅನ್ನುವದೇಕೆ?" (ಕೀರ್ತನೆ 79:10). ಈ ಭಾಷೆಯು ನಿರ್ದಿಷ್ಟವಾಗಿ ನೋವುಂಟು ಮಾಡುವ ರೀತಿಯಲ್ಲಿ ಅನ್ಯಜನಾಂಗಗಳವರು ಕೇಳುವ ರೀತಿಯಾಗಿತ್ತು, "ಆತನು ನಿಜವಾಗಿಯೂ ದೇವರಾಗಿದ್ದರೆ, ಏಕೆ ಆತನು *ಏನನ್ನಾದರೂ* ಮಾಡದೆ ಇದ್ದಾನೆ? ಈ ಕಾರಣಕ್ಕಾಗಿ, ಕೀರ್ತನೆಗಾರನು "ನಿನ್ನ ಸೇವಕರ ರಕ್ತವನ್ನು ಸುರಿಸಿದವರಿಗೆ . . . ದಂಡನೆಯಾಗಲಿ" (ಕೀರ್ತನೆ 79:10) ಎಂದು ಈ ಮಾತುಗಳಲ್ಲಿ ಬೇಡಿಕೊಳ್ಳುತ್ತಾನೆ: "ಸ್ವಾಮಿಯೇ, ನಿನ್ನನ್ನು ನಿಂದಿಸಿದ ಸುತ್ತಣ ಜನಾಂಗಗಳ [ಅಂದರೆ, ಅವರ ಸುತ್ತಲಿನ ವೈರಿ ಜನಾಂಗಗಳು] ಉಡಿಲಲ್ಲಿ ಏಳರಷ್ಟು ಪ್ರತಿಫಲವು ತುಂಬಿರುವಂತೆಮಾಡು" (ಕೀರ್ತನೆ 79:12). ಆತನು "ಅವರು *ನಮ್ಮನ್ನು* ನಿಂದಿಸಿದ ನಿಂದೆಯನ್ನು" ಎಂದು ಹೇಳಲಿಲ್ಲ, ಆದರೆ "ಸ್ವಾಮಿಯೇ, *ನಿನ್ನನ್ನು* ನಿಂದಿಸಿದ ನಿಂದೆಯನ್ನು" ಎಂದು ಹೇಳಿದನು (ಒತ್ತಿ ಹೇಳಿದ್ದು ನನ್ನದು). ಮೂರು ಕಾರಣಾಂಶಗಳಲ್ಲಿ ಒಂದೊಂದನ್ನು ಕುರಿತು ಯೋಚಿಸುವಾಗ, ಯಜ್ಞವೇದಿಯ ಕೆಳಗಿರುವವರ ಸರಳವಾದ ಮೊರೆಯು "ಮನ್ನಿಸಲ್ಪಡುವಂಥದ್ದು ಮಾತ್ರವೇ ಆಗಿರಲಿಲ್ಲ, ಆದರೆ ಸರಿಯಾದದ್ದೂ ಆಗಿತ್ತು"[50] ಎಂದು Michael Wilcockನು ಹೇಳಿದ್ದು ಸರಿ ಎಂಬುದನ್ನು ಬಹಳಷ್ಟು ಮಂದಿ ಒಪ್ಪಿಕೊಳ್ಳುವರು.

*ಒಂದು ಚಿರಸ್ಥಾಯಿ ಪ್ರಶ್ನೆ*. ಈಗ ನೆಲೆ ಬೆಳಕನ್ನು ಯೋಹಾನನ ದಿನದ ರಕ್ತಸಾಕ್ಷಿಗಳ ಮೇಲಿಂದ ತಿರುಗಿಸಿ ದೇವರ ಒಟ್ಟಾರೆಯಾದ ಜನರ ಮೇಲೆ ಪ್ರಕಾಶಗೊಳಿಸೋಣ. ಮೊದಲ ಶತಮಾನದ ಅಂತ್ಯದ ಸಮೀಪದಲ್ಲಿ ಎತ್ತಲಾದ ಪ್ರಶ್ನೆಯು ಕರ್ತನನ್ನು ಹಿಂಬಾಲಿಸುವದಕ್ಕೆ ಪ್ರಯತ್ನಿಸುವವರಲ್ಲಿ ಸಾರ್ವಕಾಲಿಕವಾಗಿ ಗೊಂದಲವನ್ನುಂಟು ಮಾಡಿರುತ್ತದೆ (ನೋಡಿರಿ ಕೀರ್ತನೆ 6:3; 35:17; 74:9-11; 79:5; 80:4; 89:46; 90:13; Is. 6:11; ಯೆರೆಮೀಯ 47:6; ಜೆಕರ್ಯ 1:12). ದಾವೀದನು ಹೀಗೆ ಕೇಳಿದನು, "ಯೆಹೋವನೇ, ನೀನು ಇನ್ನೆಷ್ಟರ ವರೆಗೆ ನನ್ನನ್ನು ಸಂಪೂರ್ಣವಾಗಿ ಮರೆತಿರುವಿ? ಇನ್ನೆಲ್ಲಿಯ ತನಕ ನನಗೆ ವಿಮುಖನಾಗಿರುವಿ? ನಾನು ಇನ್ನೆಷ್ಟರ ವರೆಗೆ ಹಗಲೆಲ್ಲಾ ದುಃಖಾಕ್ರಾಂತನಾಗಿ ಆಲೋಚಿಸಿಕೊಳ್ಳುತ್ತಾ ಇರಬೇಕು?" (ಕೀರ್ತನೆ 13:1, 2).

ಹಬಕ್ಕೂಕನು ಈ ಪ್ರಶ್ನೆಯನ್ನು ಕೇಳಿದನು, "ಯೆಹೋವನೇ, ನಾನು ಮೊರೆಯಿಡುತ್ತಿದ್ದರೂ ನೀನು ಎಷ್ಟು ಕಾಲ ಕೇಳದೇ ಇರುವಿ? ಹಿಂಸೆ ಹಿಂಸೆ ಎಂದು ಕೂಗಿಕೊಂಡರೂ ರಕ್ಷಿಸದೆ ಇರುವಿ" (ಹಬಕ್ಕೂಕ 1:2). ಯೆರೆಮೀಯನು "ಏಕೆ?" ಎಂಬ ಪ್ರಶ್ನೆಯೊಂದಿಗೆ "ಇನ್ನೆಷ್ಟರವರೆಗೆ?" ಎಂಬ ಪ್ರಶ್ನೆಯನ್ನು ಮಿಶ್ರಣಗೊಳಿಸುತ್ತಾನೆ: "ದುಷ್ಟರ ನಡತೆಗೆ *ಏಕೆ* ಸಫಲವಾಗುತ್ತದೆ?

ದ್ರೋಹಿಗಳೆಲ್ಲರೂ ನೆಮ್ಮದಿಯಾಗಿರುವದೇಕೆ? . . *ಇನ್ನೆಷ್ಟರವರೆಗೆ* ಎಲ್ಲಾ ಸೀಮೆಯ ಹುಲ್ಲು ಸೊಪ್ಪು ಒಣಗಿ ದೇಶವು ದುಃಖಿಸುತ್ತಿರುವದು? (ಯೆರೆಮೀಯ 12:1, 4; ಒತ್ತಿ ಹೇಳಿದ್ದು ನನ್ನದು).

ವಿಶ್ವಾಸಿಗಳು ಯಾವಾಗಲೂ ಈ ಪ್ರಶ್ನೆಗಳೊಂದಿಗೆ ಹೋರಾಟವನ್ನು ಅನುಭವಿಸಿದ್ದಾರೆ. ದೇವರು ದುಷ್ಟರಿಗೆ ದಂಡನೆಯನ್ನು ಮಾಡಿ ನೀತಿವಂತರ ನ್ಯಾಯವನ್ನು ಸ್ಥಾಪಿಸುವೆನೆಂದು ವಾಗ್ದಾನ ಮಾಡಿದ್ದಾನೆ, ಆದರೆ ಅದು ಬಹಳ ವಿರಳವಾಗಿ ಸಂಭವಿಸುವದರಿಂದಾಗಿ ಜನರು ತಾಳ್ಮೆಯನ್ನು ಕಳೆದುಕೊಳ್ಳುತ್ತಾರೆ. ಅನೇಕ ಸಾರಿ ಭಕ್ತಿಹೀನರು ಸಮೃದ್ಧಿಯಾಗುವಂತೆ ಕಾಣಿಸುತ್ತಿದ್ದರೆ, ಅದೇ ವೇಳೆಯಲ್ಲಿ ಭಕ್ತಿವಂತರು ದಬ್ಬಾಳಿಕೆಗೊಳಗಾಗುತ್ತಾರೆ. ನಮ್ಮ ಹೃದಯಗಳಲ್ಲಿ, ದೇವರು ಎಲ್ಲವನ್ನೂ ಚೆನ್ನಾಗಿ ಮಾರ್ಪಡುವಂತೆ ಮಾಡುವನೆಂದು ನಾವು ನಂಬುತ್ತೇವೆ, ಆದರೆ ಅದನ್ನು ಆತನು *ಯಾವಾಗ* ಮಾಡುವನು? ಇಷ್ಟು ವರ್ಷಗಳಿಂದಲೂ ಬೇರೆಯವರು ಸಮಸ್ಯೆಯನ್ನು ಹೊಂದಿರುವ ಪ್ರಕಾರವೇ, ನಾವು ಸಹ ದೇವರ ವೇಳಾಪಟ್ಟಿಯ ವಿಷಯದಲ್ಲಿ ಸಮಸ್ಯೆಯನ್ನು ಹೊಂದಿರುತ್ತೇವೆ (ನೋಡಿರಿ 2 ಪೇತ್ರ 3).

*ಒಂದು ವೈಯಕ್ತಿಕ ಪ್ರಶ್ನೆ*. ನಮಗೆ ಈಗಲೂ ಪ್ರಶ್ನೆಗಳಿರುತ್ತವೆ. ಕೆಲವು ಸಾರಿ ನಮ್ಮ ಪ್ರಶ್ನೆಗಳು ಪ್ರಕಟನೆ 6:10ರಲ್ಲಿ ಕೇಳಲಾಗಿರುವ ಪ್ರಶ್ನೆಯಂತೆಯೇ ಇರುತ್ತವೆ. ನಾವು ಜೀವಿಸುವ ಈ ಜಗತ್ತಿನಲ್ಲಿ ಮೊಳೆಯಿಂದ ಜಡಿಯಲ್ಪಟ್ಟಿರುವದೆಲ್ಲವೂ ಕಿತ್ತು ಬರುತ್ತಿದೆಯೆನೋ ಎಂಬಂತಿರುತ್ತದೆ. ನಾವು ನಮ್ಮ ತಲೆಯನ್ನು ಆಲ್ಲಾಡಿಸುತ್ತಾ ಹೀಗೆ ಹೇಳುತ್ತೇವೆ, "ಈ ಲೋಕವು *ಎಲ್ಲಿಗೆ* ಬಂದು ನಿಲ್ಲುವದೋ? ಎಲ್ಲಿಯ ತನಕ ಕರ್ತನು ಇದನ್ನು ನಡೆಯುವಂತೆ ಬಿಡುವನು? ಎಷ್ಟು ಕಾಲ, ಕರ್ತನೇ, ಈ ಅಸ್ತವ್ಯಸ್ತತೆಯನ್ನು ನೀನು ಸರಿ ಪಡಿಸುವದಕ್ಕೆ ಇನ್ನಷ್ಟು ಕಾಲ?"

ಕೆಲವು ಸಾರಿ ನಮ್ಮ ಪ್ರಶ್ನೆಯು ಹೆಚ್ಚು ವೈಯಕ್ತಿಕವಾಗಿರುತ್ತದೆ: "ಕರ್ತನೇ, ನೀನು *ನನ್ನ* ಜೀವಿತದಲ್ಲಿರುವ ತಪ್ಪಾದದ್ದನ್ನು ಸರಿಪಡಿಸುವದಕ್ಕೆ ಇನ್ನೆಷ್ಟು ಕಾಲ ಬೇಕು?" ಬಹುಶಃ ಯೋಹಾನನ ದಿನದಲ್ಲಿದ್ದ ಕ್ರೈಸ್ತರ ಹಾಗೆಯೇ ನೀವು ಹಿಂಸೆ ಪಡಿಸಲ್ಪಡುತ್ತಿರಬಹುದು - ಹಾಗೆ ಹಿಂಸಿಸುವವರು ನಿಮ್ಮ ಕುಟುಂಬದಲ್ಲಿರುವ ಒಬ್ಬರೋ, ಮಾಜಿ ಮಿತ್ರರಲ್ಲೊಬ್ಬರೋ, ಅಥವಾ ಒಬ್ಬ ನೆರೆಯವನೋ ಆಗಿರಬಹುದಾಗಿದೆ. ಬಹುಶಃ ನಿಮಗೆ ವಿರುದ್ಧ ತಪ್ಪು ನಡೆಯುತ್ತಿದ್ದರುವ ವೇಳೆಯಲ್ಲಿ, ನೀವು ಸರಿಯಾದದ್ದನ್ನು ಮಾಡುವದಕ್ಕೆ ಕಷ್ಟವನ್ನು ಅನುಭವಿಸುತ್ತಿರಬಹುದು. ಬಹುಶಃ ನೀವು ಪ್ರಾಮಾಣಿಕರು ಮತ್ತು ಯಾವಾಗಲೂ ನಿನ್ನ ಕೆಲಸವನ್ನು ಮಾಡುವವರಾಗಿದ್ದಿರಿ, ಆದರೆ ಭಡ್ತಿಯ ಮಾತ್ರ ಧಣಿಯ ಹಿಂದೆ ಮುಖಸ್ತುತಿ ಮಾಡುತ್ತಾ ತಿರುಗಾಡುವವನಿಗೇ ಸಿಕ್ಕುತ್ತಿರಬಹುದಾಗಿದೆ.

ಬಹುಶಃ ಪ್ರವಾದಿಯಾದ ಯೆರೆಮೀಯನ ಹಾಗೆ, ನೀವು ನಿಮ್ಮ ಪ್ರಶ್ನೆಗೆ "ಏಕೆ" ಎಂಬುದನ್ನು ಸೇರ್ಪಡೆಗೊಳಿಸಬಹುದು: "ಕರ್ತನೇ, *ಏಕೆ* ನನಗೆ ಇಷ್ಟೊಂದು ಸಮಸ್ಯೆಗಳು ಸಂಭವಿಸುತ್ತಿವೆ?" "ಕರ್ತನೇ, *ಏಕೆ* ನನ್ನ ಸಂಗಾತಿ [ಅಥವಾ ಮಗು] ಮರಣ ಹೊಂದಬೇಕಾಗಿತ್ತು?" "ಕರ್ತನೇ, ನಾನು ನನ್ನ ಮಕ್ಕಳನ್ನು ಬೆಳೆಸುವದಕ್ಕೆ ಪ್ರಯತ್ನಿಸಿದೆನು ಅಲ್ಲವೇ! *ಏಕೆ* ಅವರು ತಪ್ಪು ದಾರಿ ಹಿಡಿದರು?" "ಕರ್ತನೇ, ನನಗೆ *ಏಕೆ* ನನ್ನ ಬಿಲ್ ಗಳನ್ನು ಕಟ್ಟುವದಕ್ಕಾಗುತ್ತಿಲ್ಲ?" "ಕರ್ತನೇ, ನನಗೆ ಏಕೆ ಕ್ಯಾನ್ಸರ್ [ಅಥವಾ ಮೂರ್ಛೆರೋಗ, ಅಥವಾ ಹೃದಯ ಸಮಸ್ಯೆಗಳು] ಇರುತ್ತದೆ?" "ಕರ್ತನೇ, *ಏಕೆ* ನಾನು ಇಷ್ಟೊಂದು ಏಕಾಂಗಿಯಾಗಿದ್ದೇನೆ?" "ಕರ್ತನೇ, ಇನ್ನೆಷ್ಟರ ವರೆಗೆ ನಾನು ಸಹಿಸಿಕೊಂಡು ಇರುವದಕ್ಕಾಗುವದೋ ತಿಳಿಯದು! *ಇನ್ನೆಷ್ಟು ಕಾಲ* ನೀನು ನನಗೆ ಸಹಾಯ ಮಾಡದೆ ಇರುವಿ? ಇನ್ನೆಷ್ಟು ಕಾಲ?"

ಪ್ರಕಟನೆ 6:9 ಮತ್ತು 10ರಲ್ಲಿ, ದೇವರ ಜನರ ಮೇಲೆ ದಬ್ಬಾಳಿಕೆ ಮಾಡಲ್ಪಡುತ್ತಿತ್ತು, ಮತ್ತು ದೇವರು ತಕ್ಷಣವೇ ಏನನ್ನಾದರೂ ಮಾಡದೆ ಇರುವದು ಏಕೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಅವರು ಎಷ್ಟೊಂದು ತಬ್ಬಿಬ್ಬುಗೊಂಡಿರಬಹುದೆಂಬುದು ನಿಮಗೆ ಅರ್ಥವಾಗಬಹುದಾಗಿದೆ.

## ದೇವರ ಉತ್ತರ (6:11)

ಸಮಸ್ಯೆಗಳು ಬರುವ ವೇಳೆ, ಸಂಗತಿಗಳು ಏಕೆ ಹೀಗೆ ಸಂಭವಿಸಿದವು ಎಂಬುದನ್ನು ನಾವು ಕೆಲವು ಸಂದರ್ಭಗಳಲ್ಲಿ ಅರ್ಥಮಾಡಿಕೊಳ್ಳುತ್ತೇವೆ. ಕೆಲವು ಸಾರಿ ಬೈಬಲ್ ಆ ವಿಷಯದ ಕುರಿತು ವಾಕ್ಯಭಾಗವನ್ನು ಹೊಂದಿರುತ್ತದೆ; ಯಾವಾಗಲಾದರೂ ಒಮ್ಮೆ ನಾವು ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳಲು ಶಕ್ತರಾಗಬಹುದಾಗಿದೆ. ಹೇಗೂ, ಅನೇಕ ವೇಳೆ ನಮಗೆ ನಮ್ಮ ವಿನಾಶಗಳ ಕುರಿತು ಯಾವದೇ ತಾರ್ಕೀಕ ವಿವರಣೆಯನ್ನು ಕಾಣುವದಕ್ಕೆ ಆಗುವದಿಲ್ಲ. ನಮಗೆ ಅರ್ಥಮಾಡಿಕೊಳ್ಳಲು ಆಗದಿದ್ದಾಗ, ದೇವರ ಉತ್ತರವು ಆಗಲೂ "ನಾನು ಸರಿಯಾದದ್ದನ್ನೇ ಮಾಡುತ್ತೇನೆಂದು ನನ್ನಲ್ಲಿ ಭರವಸವಿಡಿರಿ" ಎಂದಾಗಿರುತ್ತದೆ - ಮತ್ತು ಆ ಉತ್ತರವು ಇನ್ನೂ ಮೂರು ಭಾಗಗಳನ್ನು ಹೊಂದಿದೆ:

1. *"ನನ್ನಲ್ಲಿ ಭರವಸವಿಡಿರಿ: ನಿಮಗೆ ಅರ್ಥಮಾಡಿಕೊಳ್ಳಲು ಆಗದು."* ನಾವು ಮೊದಲ ಶತಮಾನದ ಕ್ರೈಸ್ತರಷ್ಟೇ ದೇವರ ದೀರ್ಘ-ದೃಷ್ಟಿಯ ಯೋಜನೆಗಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗಿದ್ದೇವೆ. ಪ್ರಥಮ ಶತಮಾನದಲ್ಲಿನ ಪ್ರಶ್ನಿಸುವವರಿಗಿಂತಲೂ ದೇವರ ಕಳಕಳಿಗಳು ದೊಡ್ಡವುಗಳಾಗಿದ್ದವು - ಈ ದಿನವೂ ಅವುಗಳು ಅಷ್ಟೇ ದೊಡ್ಡವುಗಳಾಗಿವೆ. ನಾವು ಸುರಂಗ ದರ್ಶನಗಳನ್ನು ಹೊಂದಿದ್ದೇವೆ. ನಮಗೆ ಲೋಕದಲ್ಲಿರುವ ನಮ್ಮ ಚಿಕ್ಕ ಮೂಲೆಯ ಬಗ್ಗೆಯಷ್ಟೆ ಚಿಂತೆಯಿರುತ್ತದೆ, ಆದರೆ ದೇವರು ಪ್ರತಿಯೊಬ್ಬ ವ್ಯಕ್ತಿಯ ಕುರಿತಾಗಿಯೂ ಚಿಂತೆಯುಳ್ಳವನಾಗಿದ್ದಾನೆ. ನಾವು ನಮ್ಮ ಸಮಸ್ಯೆಗಳಿಂದ ಉಪಶಮನ ಹೊಂದಬೇಕೆಂಬ ಕಳಕಳಿಯನ್ನು ಹೊಂದಿದ್ದರೆ, ದೇವರು ನಮಗೆ ಯಾವದು ಉತ್ತಮವಾದದ್ದೆಂಬ ಕುರಿತು ಕಳಕಳಿ ಹೊಂದಿದ್ದಾನೆ. ದೇವರು ನಮ್ಮನ್ನು ಇನ್ನಷ್ಟು ಸಂತೋಷವುಳ್ಳವರನ್ನಾಗಿ ಮಾಡಬೇಕೆಂದು ಬಯಸಿದರೆ, ದೇವರು ನಮ್ಮನ್ನು ಇನ್ನಷ್ಟು ಉತ್ತಮಗೊಳಿಸಬೇಕೆಂದು ಬಯಸುತ್ತಾನೆ.

ದೇವರು ಹೀಗೆ ಹೇಳಿದನು, "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ" (ಯೆಶಾಯ 55:8, 9). ಅದು ಸತ್ಯವಾಗಿರುವದರಿಂದ, ನಾವು ಈ ಬುದ್ಧಿವಾದಕ್ಕೆ ವಿಧೇಯರಾಗುವ ಅಗತ್ಯವಿರುತ್ತದೆ: "ಸ್ವಬುದ್ಧಿಯನ್ನೇ ಆಧಾರಮಾಡಿಕೊಳ್ಳದೆ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು" (ಜ್ಞಾನೋಕ್ತಿ 3:5).

2. *"ನನ್ನಲ್ಲಿ ಭರವಸವಿಡಿರಿ: ನನಗೆ ನಿಮ್ಮ ಬಗ್ಗೆ ಕಾಳಜಿಯಿರುತ್ತದೆ."* ದೇವರು ರಕ್ತಸಾಕ್ಷಿಗಳಿಗೆ ಅನುಗ್ರಹಿಸಿದ ಅದೇ ಬಿಳಿ ವಸ್ತ್ರಗಳನ್ನು ನಮಗೆ ಸಹ ಕೊಡುವ ವಾಗ್ದಾನ ಮಾಡಿದ್ದಾನೆ (3:5), ಮತ್ತು ಅವರಿಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದ ರೀತಿಯಲ್ಲಿಯೇ ಆತನು ನಮ್ಮ ಕಡೆಗೆ ತನ್ನ ಪ್ರೀತಿಯನ್ನು ನಿರಂತರವಾಗಿ ವ್ಯಕ್ತಪಡಿಸುತ್ತಲೇ ಇರುತ್ತಾನೆ. ಮಕ್ಕಳು "ಯೇಸು ನನ್ನನ್ನು ಪ್ರೀತಿಸುತ್ತಾನೆ, ಇದನ್ನು ನಾನು ಬಲ್ಲೆನು" ಎಂದು ಹಾಡುತ್ತಾರೆ; ಪ್ರಾಯಸ್ಥರು "ಪ್ರೀತಿಯು ನನ್ನನ್ನು ಮೇಲಕ್ಕೆ ಎತ್ತಿತು" ಎಂದು ಹಾಡುತ್ತಾರೆ. ಈ ಹಾಡುಗಳ ಪದಗಳು ಸತ್ಯವಾದವುಗಳೆಂದು ನಾವು ನಂಬುವದರ ನಿಮಿತ್ತವಾಗಿ ಈ ಹಾಡುಗಳನ್ನು ಹಾಡುತ್ತೇವೆ.

ಯೋಹಾನನು ಹೀಗೆ ಬರೆಯುತ್ತಾನೆ, "ನಾವು ದೇವರನ್ನು ಪ್ರೀತಿಸಿದ್ದರಲ್ಲಿಯ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜಗುಣವು ತೋರಿ ಬರುತ್ತದೆ" (1 ಯೋಹಾನ 4:10). ದೇವರ ಪ್ರೀತಿಯ ನಿಶ್ಚಯತೆಯನ್ನು ಹೊಂದಿದವರಾಗಿ, ಆತನು ತನ್ನ ಹೃಯದಲ್ಲಿ ನಮ್ಮ ಅತ್ಯುತ್ತಮವಾದ ಹಿತವನ್ನೇ - ನಮ್ಮ ಜೀವಿತಗಳಲ್ಲಿ ಏನೇ ಸಂಭವಿಸಿದರೂ ಸರಿಯೇ - ಹೊಂದಿದ್ದಾನೆಂದು ನಾವು ತಿಳಿದುಕೊಳ್ಳಬಲ್ಲೆವು.

3. *"ನನ್ನಲ್ಲಿ ಭರವಸವಿಡಿರಿ: ಎಲ್ಲವೂ ಒಳ್ಳೇದೇ ಆಗುವದು."* ನಮ್ಮಲ್ಲಿ ಬಹಳಷ್ಟು ಮಂದಿ ಸಂಗತಿಗಳು *ಏಕೆ* ಸಂಭವಿಸುತ್ತವೆ, ನಮ್ಮ ಕುರಿತು ದೇವರ ಒಟ್ಟಾರೆಯಾದ ಯೋಜನೆ *ಏನು*, ಮತ್ತು ಆತನು ಅದನ್ನು *ಯಾವಾಗ* ಕಾರ್ಯರೂಪಕ್ಕೆ ತರಲಿದ್ದಾನೆ ಎಂಬದನ್ನು ತಿಳಿದುಕೊಳ್ಳಲು ಇಚ್ಛಿಸುತ್ತೇವೆ. ಬಹುಕಾಲದ ಹಿಂದೆ ಪ್ರಶ್ನೆ ಮಾಡಿದ ದೇವಜನರಿಗೆ ಸಂದೇಶವು ಮತ್ತು ಇಂದು ನಮಗಿರುವ ಸಂದೇಶವು ಮೂಲಭೂತವಾಗಿ ಏಕರೀತಿಯಾಗಿಯೇ ಇರುತ್ತದೆ: "ಶಾಂತವಾಗಿರು. ತಾಳ್ಮೆಯಿಂದಿರಿ. ನಾನು ನನ್ನ ಯೋಜನೆಗಳನ್ನು ಕಾರ್ಯಸಾಧಿಸುತ್ತಿರುವ ವೇಳೆಯಲ್ಲಿ ತಾಳ್ಮೆಯಿಂದಿರುವದಕ್ಕೆ ಕಲಿತುಕೊಳ್ಳಿರಿ. ಈ ಮಧ್ಯದಲ್ಲಿ, ನಾನು ನಿಮಗೆ ಅನುಗ್ರಹಿಸಿರುವ ಆಶೀರ್ವಾದಗಳನ್ನು ಆನಂದಿಸಿರಿ." ದೇವರ ಉತ್ತರವು ನಿಖರವಾಗಿ ನಾವು ಇಷ್ಟಪಡುವ ರೀತಿಯಲ್ಲಿಯೇ ಇರದಿರಬಹುದು, ಆದರೆ ಅದು ನಿಖರವಾಗಿ ನಮಗೆ ಅಗತ್ಯವಿರುವ ರೀತಿಯಲ್ಲಿಯೇ ಇರುವದಾಗಿದೆ.

ಒಂದು ಪರಿಚಿತವಾದ ಹಾಡು ಈ ಪದಗಳನ್ನೊಳಗೊಂಡಿದೆ:

ಆದಾಗ್ಯೂ ದೇವಜನರು ಎಚ್ಚರವಾಗಿದ್ದು ಸಮಯವನ್ನು ನೋಡುತ್ತಾ,
ಅವರು ಮೊರೆಯಿಡುವರು: "ಇನ್ನೆಷ್ಟು ಕಾಲ, ಇನ್ನೆಷ್ಟು ಕಾಲ?"
ಮತ್ತು ಶೀಘ್ರವೇ ಅಳುವ ರಾತ್ರಿಯು
ಹಾಡುವ ಮುಂಜಾನೆಯಾಗುವದು.[51]

"ಇನ್ನೆಷ್ಟರ ವರೆಗೆ?" ಎಂಬ ಪ್ರಶ್ನೆಯನ್ನು ಗಮನಿಸಿರಿ - ಆದರೆ ಒಂದು ದಿನ ಎಲ್ಲವೂ ಸರಿ ಪಡಿಸಲ್ಪಡುವದು ಎಂಬ ದೃಢವಿಶ್ವಾಸವನ್ನು ಸಹ ಗಮನಿಸಿರಿ. ಸಮಸ್ಯೆಗಳು ನಮ್ಮ ದಾರಿಯಲ್ಲಿ ಬರುವಾಗ, ನಾವು ನಮ್ಮ ಭರವಸವನ್ನು ಕರ್ತನಲ್ಲಿಡುವದಕ್ಕೆ ಕಲಿತುಕೊಳ್ಳಬೇಕು. ದೇವರು ಕೆಲವು ಪ್ರಶ್ನೆಗಳಿಗಾಗಿ ತಕ್ಷಣದಲ್ಲೇ ನಮಗೆ ಉತ್ತರಗಳನ್ನು ಕೊಡುತ್ತಾನೆ; ಇನ್ನು ಕೆಲವು ಪ್ರಶ್ನೆಗಳಿಗೆ ಹಾಗೆ ಮಾಡುವದಿಲ್ಲ. ಕೆಲವೊಂದು ಪ್ರಶ್ನೆಗಳಿಗೆ ಆತನು ಎಂದಿಗೂ ಉತ್ತರವನ್ನೇ ಕೊಡದಿರಬಹುದು ಯಾಕೆಂದರೆ ಅವುಗಳು ಉತ್ತರಿಸಲ್ಪಡುವದಕ್ಕೆ ಯೋಗ್ಯವಾಗಿರುವದಿಲ್ಲ. ದೇವರ ಉತ್ತರವು ಏನೇ ಆಗಿರಿಲಿ, ಆತನಂತೂ ಸರಿಯೇ ಆಗಿರುತ್ತಾನೆ - ಮತ್ತು ನಾವು ಆತನಲ್ಲಿ ವಿಶ್ವಾಸವಿಡಬೇಕು.

". . . ಯೆಹೋವನಲ್ಲಿ ಭರವಸವಿಡಿರಿ, ಆಗ ನೀವು ಸುರಕ್ಷಿತವಾಗಿರುವಿರಿ" (2 ಪೂರ್ವಕಾಲವೃತ್ತಾಂತ 20:20).

ನಿನ್ನ ಭೂಯಾತ್ರೆಯ ಚಿಂತೆಯನ್ನು ಯೆಹೋವನಿಗೆ ವಹಿಸಿಬಿಟ್ಟು ಭರವಸದಿಂದಿರು . . . (ಕೀರ್ತನೆ 37:5).

"ಯೆಹೋವನಲ್ಲಿ ಸದಾ ಭರವಸವಿಡಿರಿ; ಯಾಹುಯೆಹೋವನು ಶಾಶ್ವತವಾಗಿ

ಆಶ್ರಯಗಿರಿಯಾಗಿದ್ದಾನೆ" (ಯೆಶಾಯ 26:4).

"ಯಾವನು ಯೆಹೋವನಲ್ಲಿ ನಂಬಿಕೆಯಿಟ್ಟಿದ್ದಾನೋ ಯಾವನಿಗೆ ಯೆಹೋವನು ಭರವಸವಾಗಿದ್ದಾನೋ ಅವನು ಧನ್ಯನು" (ಯೆರೆಮೀಯ 17:7).

## ಸುಗ್ಗಿಯ ಕಾಲ (6:17)

ವರ್ಷಗಳ ಹಿಂದೆ, ಒಬ್ಬ ಕ್ರೈಸ್ತ ರೈತನ ಕುರಿತು ಒಂದು ಕಥೆಯು ಹೇಳಲ್ಪಡುತ್ತಿತ್ತು. ನಾವು ಆತನನ್ನು "Robert" ಎಂದು ಕರೆಯೋಣ. Robertನು ಕರ್ತನನ್ನು ಪ್ರೀತಿಸುವವನಾಗಿದ್ದನು. ಕರ್ತನ ಸಭೆಯು ಕೂಡಿ ಬರುತ್ತಿದ್ದ ಪ್ರತಿ ಸಾರಿಯೂ, ಆತನು ಉಪಸ್ಥಿತನಿರುತ್ತಿದ್ದನು. ಅದು ನೇಡುವ ಕಾಲವಾಗಿದ್ದಲ್ಲಿ, ಆತನು ಆರಾಧನೆಯ ಕೂಟಗಳಲ್ಲಿರುತ್ತಿದ್ದನು. ಹೊಲದ ಮೇಲೆಲ್ಲಾ ಮೋಡಗಳು ಆವರಿಸಿಕೊಂಡು ಗಂಡಾಂತರದ ಬೆದರಿಕೆಯನ್ನೊಡ್ಡಿದಾಗಲೂ ಆತನು ಹಾಜರಿರುತ್ತಿದ್ದನು. ಅದು ಸುಗ್ಗಿಯ ಕಾಲವಾಗಿದ್ದಾಗ್ಯೂ ಮತ್ತು ತನ್ನ ಬೆಳೆಗಳನ್ನು ಕೊಯ್ದು ಕೂಡಿಸಿಡುವದಕ್ಕೆ ಕೆಲವೇ ದಿನಗಳು ಬಾಕಿಯಿದ್ದರೂ ಸರಿಯೇ ಆತನು ದೇವರ ಜನರೊಂದಿಗೆ ಕೂಡಿ ಆರಾಧನೆಯಲ್ಲಿರುತ್ತಿದ್ದನು. Robertನ ಸಮರ್ಪಣೆಯನ್ನು ನೋಡಿ ಅವಿಶ್ವಾಸಿಯಾಗಿದ್ದ ಆತನ ನೆರೆಯವನಿಗೆ ಕಿರಿಕಿರಿಗೊಳಿಸಿತ್ತು, ಆದ್ದರಿಂದ ನೆರೆಯವನು ಪರೀಕ್ಷೆ ಮಾಡುವದಕ್ಕೋಸ್ಕರ ಒಂದಿಷ್ಟು ಹೊಲವನ್ನು ಪ್ರತ್ಯೇಕಿಸಿದನು. Robertನು ಆರಾಧಿಸುವದಕ್ಕೆ ಹೋದ ವೇಳೆಯಲ್ಲಿ ಮಾತ್ರವೇ ಆತನು ಆ ಹೊಲದಲ್ಲಿ ಕೆಲಸ ಮಾಡುತ್ತಿದ್ದನು. ಸುಗ್ಗಿಯ ಕಾಲವು ಬಂದಾಗ, Robertನ ನೆರೆಯವನು ಆತನನ್ನು ಬರುವಂತೆ ಕರೆದನು. ಆ ಮನುಷ್ಯನು ಮೇಜಿನ ಮೇಲೆ ಹಣದ ರಾಶಿಯನ್ನಿಟ್ಟು "ಈ ಹಣವೆಲ್ಲಾ ಎಲ್ಲಿಂದ ಬಂದಿತೆಂದು ನಿನಗೆ ಗೊತ್ತಾ? ನೀನು ದೇವರನ್ನು ಆರಾಧಿಸುತ್ತಾ ಸಮಯವನ್ನು ವ್ಯರ್ಥಮಾಡುತ್ತಿರುವ ವೇಳೆ ನಾನು ದುಡಿದ ಹೊಲದಿಂದ ಇದು ಬಂದಿತು. ಆ ಹೊಲದಿಂದ ಬೇರೆ ಯಾವದೇ ಹೊಲಕ್ಕಿಂತಲೂ 30% ರಷ್ಟು ಹೆಚ್ಚು ಫಲ ಸಿಕ್ಕಿರುತ್ತದೆ! ಈಗ ನೀನು ಇದಕ್ಕೇನು ಹೇಳುತ್ತೀ?" ಎಂದು ಹೇಳಿದನು. Robertನು ಹಣವನ್ನು ದೃಷ್ಟಿಸಿದನು ಮತ್ತು ಬಳಿಕ ಹೀಗೆ ಉತ್ತರ ನೀಡಿದನು, "ದೇವರು ಎಲ್ಲಾ ಲೆಕ್ಕವನ್ನೂ ಸುಗ್ಗಿ ಕಾಲದಲ್ಲಿ ತೀರಿಸುವದಿಲ್ಲ ಎಂದು ನಾನು ಹೇಳುತ್ತೇನೆ."

---

## ಅಡಿಟಿಪ್ಪಣಿಗಳು

[1]Eugene H. Peterson, *Reversed Thunder* (San Francisco: HarperCollins Publishers, 1988), 74. [2]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 59. [3]Frank Pack, *Revelation*, Part 1 (Austin, Tex.: R. B. Sweet Co., 1965), 64. See also James M. Efird, *Revelation for Today* (Nashville: Abingdon Press, 1989), 70. [4]ಈ ನಿಲುವಿನ ಕುರಿತಾದ ಬಲವಾದ ಬೆಂಬಲದ ಒಂದು ಸಾರಾಂಶವನ್ನು William Hendriksen, *More Than Conquerors* (Grand Rapids, Mich.: Baker Book House, 1954), 113–17ರಲ್ಲಿ ಕಾಣಬಹುದಾಗಿದೆ. [5]Pack, 64. [6]W. E. Vine, *The Expanded Vine's Expository Dictionary of New Testament Words,* ed. John R. Kohlenberger III with James A. Swanson (Minneapolis, Minn.: Bethany House Publishers, 1984), 724. [7]Eugene H. Peterson, *The Message: New Testament With Psalms and Proverbs.* [8]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 102. [9]Efird, 71. [10]Eldred Echols, *Haven't You Heard? There's a WAR Going On!: Unlocking the Code to Revelation* (Fort Worth, Tex.: Sweet Publishing, 1995), 72.

[11]Earl F. Palmer, *1, 2, 3 John & Revelation,* The Communicator's Commentary, ed. Lloyd

J. Ogilvie, vol. 12 (Dallas: Word Publishing, 1982), 177. [12]ಇದು ಪ್ರಕಟನೆ ಪುಸ್ತಕದ ಮೇಲೆ John Wick Bowmanನ: *The First Christian Drama: The Book of Revelation* (Philadelphia: Westminster Press, 1955) ಎಂಬ ಪುಸ್ತಕದ ಶಿರ್ಷಿಕೆಯಾಗಿರುತ್ತದೆ. [13]Robert H. Mounce, *The Book of Revelation,* The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 157. [14]J. W. Roberts, *The Revelation to John (The Apocalypse),* The Living Word Commentary, ed. Everett Ferguson (Austin, Tex.: Sweet Publishing Co., 1974), 67. [15]Homer Hailey, *Revelation* (Grand Rapids, Mich.: Baker Book House, 1979), 196. [16]Bowman, 51. [17]Edgar J. Goodspeed, *The New Testament: An American Translation*. [18]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 107. [19]Tommy South, "The Four Messages of the Seven Seals," *Truth for Today* 9 (November 1988): 10. [20]For biblical illustrations of this truth, see David Roper, "When God's Patience Runs Out," *Truth for Today* 14 (September 1993): 11–17, 27.

[21]Billy Graham, *Approaching Hoofbeats: The Four Horsemen of the Apocalypse* (New York: Avon Books, 1985), 241. [22]See William Barclay, *The Revelation of John,* vol. 2, rev. ed., The Daily Study Bible Series (Philadelphia: Westminster Press, 1976), 13–15. [23]Bowman, 53. [24]Hailey, 198. [25]Peterson, *The Message: New Testament With Psalms and Proverbs*. [26]Ibid. [27]D. T. Niles, *As Seeing the Invisible: A Study of the Book of Revelation* (New York: Harper & Brothers, Publishers, 1961), 60–61. [28]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 94. [29]Hendriksen, 25. [30]Owen L. Crouch, *Expository Preaching and Teaching: Revelation* (Joplin, Mo.: College Press Publishing Co., 1985), 123.

[31]Edward P. Myers, *After These Things I Saw: A Study of Revelation* (Joplin, Mo.: College Press Publishing Co., 1997), 160. [32]Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 33–35. [33]Peterson, *The Message: New Testament With Psalms and Proverbs.* [34]Winston Churchill, quoted in John Bartlett, *Bartlett's Familiar Quotations,* 16th ed., ed. Justin Kaplan (Boston: Little, Brown, and Co., 1992), 621. [35]Bowman, 49. [36]Peterson, *Reversed Thunder*, 76. [37]Burton Coffman, *Commentary on Revelation* (Austin, Tex.: Firm Foundation Publishing House, 1979), 142. [38]Calvin Miller, *A Requiem for Love*, quoted in Craig Brian Larson, ed., *Illustrations for Preaching and Teaching From Leadership Journal* (Grand Rapids, Mich.: Baker Books, 1993), 93. [39]Quoted in Bartlett, 636. [40]Quoted in Leonard Louis Levinson, *Webster's Unafraid Dictionary* (New York: Collier Books, 1967), 254.

[41]*Grolier Multimedia Encyclopedia*, 1999 ed., s.v. "Bubonic plague." [42]Ibid., s.v. "Influenza pandemic, 1918." [43]Palmer, 177. [44]South, 9 (ಒತ್ತಿ ಹೇಳಿದ್ದು ಆತನದ್ದು). [45]Metzger, 58. [46]Echols, 82. [47]Ibid., 72 (ಒತ್ತಿ ಹೇಳಿದ್ದು ಆತನದ್ದು). [48]Peterson, *Reversed Thunder,* 73. [49]Larson, 240. [50]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 73.

[51]S. J. Stone, "The Church's One Foundation," *Songs of the Church*, ed. Alton H. Howard (West Monroe, La.: Howard Publishing Co., 1977).